ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 13 ಬುಧವಾರ 2023

ಸಂಪುಟ: 44 | ಸಂಚಿಕೆ: 236 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಾಣಿಜ್ಯ ನಗರವಾಗುತ್ತಿರುವ ಸಾಂಸ್ಕೃತಿಕ ನಗರಿ...!

ಮೈಸೂರು–ಬೆಂಗಳೂರು ನಡುವೆ 10 ನಿಮಿಷಕ್ಕೊಂದು ರೈಲು

● ಕೇಂದ್ರ ರೈಲ್ವೆ ಮಂಡಳಿ ಮಹತ್ವದ ನಿರ್ಧಾರ ● ಹಾಲಿ ಜೋಡಿ ಮಾರ್ಗ ನಾಲ್ಕು ಮಾರ್ಗಗಳಾಗಿ ಪರಿವರ್ತನೆ ಜೊತೆಗೆ ಪೂರ್ಣ ವಿದ್ಯುದ್ದೀಕರಣ ● ಮೈಸೂರು–ಚಾಮರಾಜನಗರ ಮಾರ್ಗವೂ ಡಬ್ಲಿಂಗ್

ಬೆಂಗಳೂರು, ಡಿ.12(ಕೆಎಂಶಿ)– ವಾಣಿಜ್ಯ ನಗರವಾಗಿ ಪರಿವರ್ತನೆ ಆಗುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಡುವೆ ಇನ್ನು ಮುಂದೆ ಪ್ರತಿ 10 ನಿಮಿಷಕ್ಕೆ ಒಂದು ರೈಲು ಓಡಿಸಲು ಕೇಂದ್ರ ರೈಲ್ವೆ ಮಂಡಳಿ ಮಹತ್ವದ ತೀರ್ಮಾನ ಕೈಗೊಂಡಿದೆ.


(ಸಂಗ್ರಹ ಚಿತ್ರ)

ಮೆಟ್ರೊ ಮಾದರಿ ಈ ಉಭಯ ನಗರಗಳ ನಡುವೆ ಒಂದರ ಹಿಂದೆ ಒಂದು ರೈಲು ಓಡಿಸಲು ನಿರ್ಧರಿಸಿದೆ. ಇದಕ್ಕಾಗಿ ಉಭಯ ನಗರಗಳ ನಡುವೆ ಇರುವ ಜೋಡಿ ಮಾರ್ಗವನ್ನು ನಾಲ್ಕು ಮಾರ್ಗಗಳಾಗಿ ಪರಿವರ್ತಿಸಲು ಮಂಡಳಿ ತೀರ್ಮಾನಿಸಿದೆ.

ರೈಲು ಮಾರ್ಗ ಅಭಿವೃದ್ಧಿಪಡಿಸಲು ಮಂಡಳಿ ತೀರ್ಮಾನ ಕೈಗೊಂಡಿರುವುದರಿಂದ ಮೈಸೂರು ಮತ್ತು ತುಮಕೂರಿಗೆ ಸಬ್ ಅರ್ಬನ್ ರೈಲು ಸಂಚಾರದ ಅವಶ್ಯಕತೆ ಇಲ್ಲ ಎಂದು ಮಂಡಳಿ ರಾಜ್ಯ ಸರ್ಕಾರಕ್ಕೆ ತಿಳಿಸಿದೆ. ತುಮಕೂರು, ದೊಡ್ಡಬಳ್ಳಾಪುರ, ಬಂಗಾರಪೇಟೆ ಸೇರಿದಂತೆ ರಾಜಧಾನಿಗೆ ಸಮೀಪವಿರುವ ನಗರ–ಪಟ್ಟಣಗಳಿಗೆ ಸಬ್ ಅರ್ಬನ್ ರೈಲು ಯೋಜನೆ ಅನುಷ್ಠಾನಕ್ಕೆ ಮೂಲಸೌಕರ್ಯ ಇಲಾಖೆ ನಿರ್ಧರಿಸಿತ್ತು. ಕರ್ನಾಟಕ ರೈಲು ಅಭಿವೃದ್ಧಿ ನಿಗಮ (ಕೆ-ರೈಡ್) ಮೂಲಕ ಸಬ್ ಅರ್ಬನ್ ರೈಲು ಯೋಜನೆಯನ್ನು ಕೇಂದ್ರ ರೈಲ್ವೆ ಇಲಾಖೆಯ ಜಂಟಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಿ ಮಂಡಳಿಯ ಅನುಮತಿ ಕೋರಿತ್ತು. ಇದೇ ಕಾಲಕ್ಕೆ ಮೈಸೂರು, ಕೈಗಾರಿಕಾ ಮತ್ತು ವಾಣಿಜ್ಯ ನಗರವಾಗಿ ಅಭಿವೃದ್ಧಿಗೊಳ್ಳುತ್ತಿರುವುದರಿಂದ ಸುಗಮ ಸಂಚಾರಕ್ಕಾಗಿ ಸಬ್ ಅರ್ಬನ್ ರೈಲು ಯೋಜನೆಗೆ ಅನುಮತಿ ನೀಡುವಂತೆ ಮಂಡಳಿಗೆ ರಾಜ್ಯ ಸರ್ಕಾರ ಮನವಿ ಮಾಡಿತ್ತು. ಜೋಲಾರ್‌ಪೇಟೆ–ಬೆಂಗಳೂರು–ಮೈಸೂರು, ತುಮಕೂರು–ಬೆಂಗಳೂರು–ಮೈಸೂರು ನಡುವೆ ದ್ವಿಪಥ ಮಾರ್ಗ ವನ್ನು ನಾಲ್ಕು ಮಾರ್ಗವಾಗಿ ಪರಿವರ್ತಿಸುತ್ತಿದ್ದೇವೆ. ಪರಿವರ್ತನೆ ನಂತರ ಈ ನಗರಗಳ ನಡುವೆ ಪ್ರತಿ 10 ನಿಮಿಷಕ್ಕೆ ಅಂದರೆ, ಒಂದರ ಹಿಂದೆ ಒಂದು ರೈಲಿನ ಸಂಚಾರ ಇರುತ್ತದೆ. ಉದಾಹರಣೆಗೆ ಬೆಂಗಳೂರು–ಮೈಸೂರು ನಡುವೆ ರೈಲುಗಳು ಎರಡೆರಡು ಮಾರ್ಗಗಳಲ್ಲಿ ಸಂಚರಿಸಲಿದ್ದು, ಇದರಿಂದ ಪ್ರಯಾಣಿಕರ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಹಾಲಿ ಮಾರ್ಗದ ಪಕ್ಕದಲ್ಲೇ ಹೊಸ ಮಾರ್ಗಗಳು ನಿರ್ಮಾಣವಾಗಲಿವೆ ಎಂದು ಮಂಡಳಿ ಸರ್ಕಾರಕ್ಕೆ ಮಾಹಿತಿ ನೀಡಿರುವುದಲ್ಲದೆ, ಈ ಮಾರ್ಗಗಳ ವಿದ್ಯುದೀಕರಣ ಕಾರ್ಯವೂ ನೆರವೇರಲಿದೆ.

ಮೈಸೂರು–ಚಾ.ನಗರ ಡಬ್ಲಿಂಗ್: ಮೈಸೂರು–ಚಾಮರಾಜನಗರ ನಡುವೆ ಡಬ್ಲಿಂಗ್ ಕಾರ್ಯವನ್ನು ಕೈಗೆತ್ತಿಕೊಳ್ಳಲು ಮಂಡಳಿ ತೆಗೆದುಕೊಂಡಿರುವ ತೀರ್ಮಾನವನ್ನು ಸರ್ಕಾರಕ್ಕೆ ತಿಳಿಸಿದೆ. ಉಭಯ ನಗರಗಳ ನಡುವೆ ಪ್ರಸ್ತುತ ಸರಿಸುಮಾರು ಪ್ರತಿ ಗಂಟೆಗೆ ಒಂದು ರೈಲು ಇದ್ದು, ಪ್ರಯಾಣಿಕರ ದಟ್ಟಣೆ ಸಂದರ್ಭದಲ್ಲಿ ಪ್ರತಿ 20–30 ನಿಮಿಷಕ್ಕೆ ರೈಲುಗಳು ಸಂಚರಿಸು ತ್ತಿವೆ. ಆದರೂ ಒತ್ತಡ ಹೆಚ್ಚಿದೆ, ನಾಲ್ಕು ಮಾರ್ಗಗಳಾದ ನಂತರ ಪ್ರಯಾಣಿಕರ ಸಂಚಾರ ಹಾಗೂ ಸರಕು ಸಾಗಾಣಿಕೆಗೂ ಒತ್ತು ಕೊಡುವುದರಿಂದ ಕೈಗಾರಿಕಾ ಬೆಳವಣಿಗೆಗೂ ಸಹಕಾರಿಯಾಗಲಿದೆ ಎಂದು ಮಂಡಳಿ ತಿಳಿಸಿದೆ.

ರಾಜಸ್ಥಾನದ ಸಿಎಂ ಆಗಿ ಭಜನ್ ಲಾಲ್ ಶರ್ಮಾ ಆಯ್ಕೆ



ಜೈಪುರ, ಡಿ.12–ರಾಜಸ್ಥಾನದ ನೂತನ ಮುಖ್ಯಮಂತ್ರಿಯಾಗಿ ಭಜನ್ ಲಾಲ್ ಶರ್ಮಾ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಭಜನ್ ಲಾಲ್ ಶರ್ಮಾ ಮೊದಲ ಬಾರಿಗೆ ಶಾಸಕರಾಗಿದ್ದಾರೆ. 4 ಬಾರಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರಿಗೆ ಆರ್‌ಎಸ್‌ಎಸ್ ಮತ್ತು ಎಬಿವಿಪಿ ಜೊತೆ ನಂಟಿದೆ. ಸಂಗನೇರ್ ಕ್ಷೇತ್ರ ಬಿಜೆಪಿಯ ಭದ್ರಕೋಟೆ. ಅಲ್ಲಿ ಭಜನ್ ಲಾಲ್ ಶರ್ಮಾ ಗೆದ್ದಿದ್ದರು. ಸಂಘಟನೆಯಲ್ಲಿ ಅವರ ಪ್ರಮುಖ ಪಾತ್ರವನ್ನು ಪರಿಗಣಿಸಿ ಅವರಿಗೆ ಮುಖ್ಯಮಂತ್ರಿ ಹುದ್ದೆಯ ಬಹುದೊಡ್ಡ ಜವಾಬ್ದಾರಿ ನೀಡಲಾಗಿದೆ.

ರಾಜಸ್ಥಾನದಲ್ಲೂ ಎರಡು ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಲಾಗಿದೆ. ದಲಿತ ಸಮುದಾಯದ ಪ್ರೇಮ್ ಚಂದ್ ಬೈರವಾ ಹಾಗೂ ರಜಪೂತ ಸಮುದಾಯದ ದಿಯಾ ಕುಮಾರಿ ಡಿಸಿಎಂ ಆಗಲಿದ್ದಾರೆ. ಇನ್ನು ಸ್ಪೀಕರ್ ಆಗಿ ವಾಸುದೇವ ದೇವನಾನಿ ಅವರನ್ನು ಆಯ್ಕೆ ಮಾಡಲಾಗಿದೆ. ಇದಕ್ಕೂ ಮುನ್ನ ಹೈಕಮಾಂಡ್ ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್, ಸರೋಜ್ ಪಾಂಡೆ ಮತ್ತು ವಿನೋದ್ ತಾವ್ಡೆ ಅವರನ್ನು ವೀಕ್ಷಕರಾಗಿ ಜೈಪುರಕ್ಕೆ ಕಳುಹಿಸಿತ್ತು. ಇದಕ್ಕೂ ಮೊದಲೇ ● 9ನೇ ಪುಟಕ್ಕೆ

ಮೈಸೂರಿನ ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ಚಿರತೆ ಪ್ರತ್ಯಕ್ಷ

● ಸೋಮವಾರ ರಾತ್ರಿ ಹೊಂಚು ಹಾಕುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆ ● ಎಚ್ಚೆತ್ತ ಅರಣ್ಯ ಇಲಾಖೆ; ಸ್ಥಳದಲ್ಲಿ ಬೋನ್ ಇರಿಸಿ ಕಣ್ಗಾವಲು


(ಸಂಗ್ರಹ ಚಿತ್ರ)

ಮೈಸೂರು, ಡಿ.12– ಮೈಸೂರಿನ ಹೊರವಲಯದಲ್ಲಿ ವ್ಯಾಪಕವಾಗಿರುವ ಚಿರತೆ ಹಾವಳಿ ಈಗ ನಗರದ ಒಳಗೂ ವ್ಯಾಪಿಸಿದೆ. ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದ ತೋಟದಲ್ಲಿ ಸೋಮವಾರ ರಾತ್ರಿ ಚಿರತೆ ಹೊಂಚು ಹಾಕುತ್ತಿರುವುದು ಅಲ್ಲಿನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಬಗ್ಗೆ ವಿದ್ಯಾಶಾಲೆಯವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಕೂಂಬಿಂಗ್ ನಡೆಸಿದರಾದರೂ ಚಿರತೆ ಪತ್ತೆಯಾಗಿಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ ಮಂಗಳವಾರ ಬೆಳಗ್ಗೆ ಚಿರತೆ ಕಾಣಿಸಿಕೊಂಡ ಸ್ಥಳದಲ್ಲಿ ಬೋನ್ ಇಡಲಾಗಿದೆ.

ಸದ್ಯ ವಿದ್ಯಾಶಾಲಾ ಆವರಣದಲ್ಲಿ ಮತ್ತೆ ಚಿರತೆ ಕಾಣಿಸಿಕೊಂಡಿಲ್ಲ. ಅಲ್ಲಿಂದ ಹೊರ ಹೋಗಿರುವ ಸಾಧ್ಯತೆಯೂ ಇರಬಹುದು. ಆಸುಪಾಸಿನಲ್ಲಿ ಸರ್ಕಾರಿ ಶಾಲೆ, ರೈಲ್ವೆ ಕ್ವಾಟ್ರರ್ಸ್ ಇದೆ. ಕೆಆರ್‌ಎಸ್ ರಸ್ತೆ ಇಕ್ಕೆಲಗಳಲ್ಲಿ, ಯಾದವಗಿರಿ, ಮಂಜುನಾಥಪುರದ ಕೈಗಾರಿಕಾ ಪ್ರದೇಶದಲ್ಲಿ ಹಲವೆಡೆ ಆಳೆತ್ತರಕ್ಕೆ ಗಿಡಗಂಟಿ ಬೆಳೆದು ನಿಂತಿವೆ. ಇತ್ತ ಸಂಕಲ್ಪ ಅಪಾರ್ಟ್‌ಮೆಂಟ್ ● 9ನೇ ಪುಟಕ್ಕೆ

ಡಿ.21ರಿಂದ 'ಯುವ ನಿಧಿ'ಗೆ ನೋಂದಣಿ

ಬೆಂಗಳೂರು, ಡಿ.12– ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 5ನೇ ಗ್ಯಾರಂಟಿ ಯುವ ನಿಧಿ ಯೋಜನೆ ಜಾರಿಗೆ ದಿನಗಣನೆ ಆರಂಭವಾಗಿದೆ. ಡಿಸೆಂಬರ್ 21 ರಿಂದ ಯುವ ನಿಧಿಗೆ ನೋಂದಣಿ ಪ್ರಕ್ರಿಯೆ ಆರಂಭವಾಗಲಿದ್ದು, ಸಂಕ್ರಾಂತಿ ವೇಳೆಗೆ ಹಣ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ. ಈ ಬಗ್ಗೆ ಮಾತನಾಡಿರುವ ಡಿ.ಕೆ.ಶಿವಕುಮಾರ್, ಯುವ ನಿಧಿ ಜಾರಿಗೆ ಬೇಕಾದ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಕೌಶಲ್ಯ ಅಭಿವೃದ್ಧಿ ಸಚಿವರು ಅದಕ್ಕೆ ಬೇಕಾದ ರೂಪುರೇಷೆ ಸಿದ್ಧಪಡಿಸುತ್ತಿದ್ದಾರೆ ಎಂದರು.

ಈ ಬೆನ್ನಲ್ಲೇ ಕೌಶಲ್ಯಾಭಿವೃದ್ಧಿ ಸಚಿವರೂ ಆಗಿರುವ ಶರಣ ಪ್ರಕಾಶ್ ಪಾಟೀಲ್, ಜನವರಿಯಲ್ಲಿ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಲಾಗುವುದು. ಯುವ ಜನತೆಗೆ ಬೆನ್ನೆಲುಬಾಗಲಿರುವ ಈ ಯೋಜನೆಯಿಂದ ಸುಮಾರು 5 ಲಕ್ಷ ಪದವೀಧರರ ಖಾತೆಗೆ ನೇರವಾಗಿ ಹಣ ತಲುಪಲಿದೆ ಅಂದಿದ್ದಾರೆ. ಪದವೀಧರರು ಪದವಿ ಪೂರೈಸಿ 6 ತಿಂಗಳು ನಿರುದ್ಯೋಗಿಗಳಾಗಿದ್ದರೆ ಮಾಸಿಕ 3,000 ರೂ. ಹಾಗೂ ಡಿಪ್ಲೊಮಾ ಪದವೀಧರರಿಗೆ 1,500 ರೂ. ಸಿಗಲಿದೆ ಎಂದು ನುಡಿದರು. 2023ರ ವಿಧಾನ ಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ 5 ಗ್ಯಾರಂಟಿಗಳನ್ನ ಘೋಷಣೆ ಮಾಡಿತ್ತು. ಅದರಲ್ಲಿ ಯುವ ನಿಧಿ ಯೋಜನೆ ಅತ್ಯಂತ ಪ್ರಮುಖವಾದುದಾಗಿದೆ. ಯುವ ನಿಧಿ ಯೋಜನೆಯನ್ನು ● 9ನೇ ಪುಟಕ್ಕೆ

ರಾಜಭವನಕ್ಕೆ ಬಾಂಬ್ ಬೆದರಿಕೆ ಕರೆ

ಪೊಲೀಸರಿಂದ ಪರಿಶೀಲನೆ; ತನಿಖೆ



ಬೆಂಗಳೂರು, ಡಿ.12– ಬೆಂಗಳೂರಿನ ಶಾಲೆಗಳಲ್ಲಿ ಬಾಂಬ್ ಇಡಲಾಗಿದೆ ಎಂದು ನಿಗೂಢ ತಾಣದಿಂದ ಇ–ಮೇಲ್ ಮಾಡಿ ಭಾರೀ ಆತಂಕಕ್ಕೆ ಕಾರಣವಾದ ಘಟನೆ ಬೆನ್ನಲ್ಲೇ ಇದೀಗ ರಾಜ್ಯದ ಶಕ್ತಿ ಕೇಂದ್ರಗಳಲ್ಲಿ ಒಂದಾದ ರಾಜಭವನಕ್ಕೂ ಬಾಂಬ್ ಬೆದರಿಕೆ ಕರೆ ಮಾಡಲಾಗಿದೆ.


ರಾಜಭವನದಲ್ಲಿ ಬಾಂಬ್ ಇಡಲಾಗಿದೆ ಎಂದು ಸೋಮವಾರ ರಾತ್ರಿ ಕರೆ ಮಾಡಿ ತಿಳಿಸಲಾಗಿದೆ. ರಾತ್ರಿ 11.30ರ ಸುಮಾರಿಗೆ ಕರೆ ಮಾಡಿ ಬಾಂಬ್ ಇಟ್ಟಿರುವುದಾಗಿ ವ್ಯಕ್ತಿಯೊಬ್ಬ ಹೇಳಿದ್ದಾನೆಂದು ತಿಳಿದುಬಂದಿದೆ. ಬೆದರಿಕೆ ಕರೆ ಬಂದ ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದೆ ಕೂಡಲೇ ಪೊಲೀಸರು ಬಾಂಬ್ ಸ್ಕ್ವಾಡ್ ಮತ್ತು ಡಾಗ್ ಸ್ಕ್ವಾಡ್‌ನೊಂದಿಗೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ರಾಜಭವನಕ್ಕೆ ಹೋಗಿ ಪರಿಶೀಲನೆ ನಡೆಸಿದ ಪೊಲೀಸರಿಗೆ ಸದ್ಯಕ್ಕೆ ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಕ್ಕಿಲ್ಲ. ಆದರೆ, ಸ್ಥಳದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ರಾಜಭವನ ಸ್ಥಳ ವಿಶಾಲವಾದ ಜಾಗವಾಗಿದ್ದು, ಯಾವ ಭಾಗದಲ್ಲಿ ಇಡಲಾಗಿದೆ ಎಂಬ ಮಾಹಿತಿಯನ್ನು ವ್ಯಕ್ತಿ ನೀಡಿಲ್ಲ. ಈ ನಡುವೆ, ರಾಜಭವನಕ್ಕೆ ಯಾವ ನಂಬರ್‌ನಿಂದ ಕರೆ ಮಾಡಲಾಗಿದೆ. ಕರೆ ಮಾಡಿದ ವ್ಯಕ್ತಿ ಯಾರು ಎಂಬ ವಿಚಾರ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಆರೋಪಿ ಸೆರೆ: ರಾಜಭವನಕ್ಕೆ ಬಾಂಬ್ ಬೆದರಿಕೆ ಕರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಇದೀಗ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಭಾಸ್ಕರ್ ಎಂದು ಗುರುತಿಸಿದ್ದು, ಈತ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕು ವಡ್ಡಹಳ್ಳಿಯ ನಿವಾಸಿ. ಇತ್ತೀಚೆಗೆ ಬೆಂಗಳೂರಿನ ಶಾಲೆಗಳಿಗೆ ಬಾಂಬ್ ಇಟ್ಟಿರುವುದಾಗಿ ಮೇಲ್ ಬಂದ ● 9ನೇ ಪುಟಕ್ಕೆ

ಮೇಕೆಗೆ ಮೇವು ತರಲು ಹೋದ ಆದಿವಾಸಿಯ ಛಿದ್ರಗೊಂಡ ದೇಹ ಪತ್ತೆ

● ಬಂಡೀಪುರ ಅಭಯಾರಣ್ಯ ವಲಯದ ಮಂಗಲಗುಡ್ಡ ಗ್ರಾಮದ ನಂಜೇಗೌಡನಕಟ್ಟೆ ಬಳಿ ಘಟನೆ ● ಹುಲಿ ಇಲ್ಲವೇ ಚಿರತೆಗೆ ಬಲಿಯಾಗಿರುವ ಶಂಕೆ ವ್ಯಕ್ತಪಡಿಸಿದ ಅರಣ್ಯ ಸಿಬ್ಬಂದಿ




ಮೃತ ಬಸವಯ್ಯ

ಗುಂಡ್ಲುಪೇಟೆ, ಡಿ.12–ಮೇಕೆಗಳಿಗೆ ಸೊಪ್ಪು ತರಲು ಬೆಳ್ಳಂಬೆಳಗ್ಗೆ ಕಾಡಿಗೆ ಹೋಗಿದ್ದ ಆದಿವಾಸಿ ವ್ಯಕ್ತಿ ವನ್ಯಜೀವಿ ದಾಳಿಗೆ ಬಲಿಯಾಗಿರುವ ಘಟನೆ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದಂಚಿನ ಮಂಗಲಗುಡ್ಡ ಗ್ರಾಮದ ನಂಜೇಗೌಡನಕಟ್ಟೆ ಬಳಿ ಸೋಮವಾರ ನಡೆದಿದ್ದು, ಈತ ಹುಲಿ ಅಥವಾ ಚಿರತೆಗೆ ಬಲಿಯಾಗಿರುವ ಶಂಕೆ ವ್ಯಕ್ತವಾಗಿದೆ. ತಾಲೂಕಿನ ಬಂಡೀಪುರ ಅರಣ್ಯ ವ್ಯಾಪ್ತಿಯ ಆಡಿನಕಣಿವೆ ಹಾಡಿಯ ನಿವಾಸಿ ಸೊತ್ತಮಾದಯ್ಯ ಅವರ ಮಗ ಬಸವಯ್ಯ (50) ವನ್ಯಜೀವಿಗೆ ಬಲಿಯಾಗಿದ್ದು, ಈತನ ದೇಹ ಛಿದ್ರವಾಗಿದ್ದು, ಮಂಗಳವಾರ ಬೆಳಗ್ಗೆ 11 ಗಂಟೆಯಲ್ಲಿ ಪತ್ತೆಯಾಗಿದೆ.

ಈತ ಸೋಮವಾರ ಬೆಳಗ್ಗೆ ಮೇಕೆಗಳಿಗೆ ಸೊಪ್ಪು ತರಲು ಅರಣ್ಯಕ್ಕೆ ತೆರಳಿದ್ದ. ಆದರೆ, ಮಂಗಳವಾರ ಬೆಳಗ್ಗೆಯಾದರೂ ಮನೆಗೆ ಬರದ ಹಿನ್ನೆಲೆಯಲ್ಲಿ ತಂದೆ ಸೊತ್ತಮಾದಯ್ಯ, ಆಡಿನಕಣಿವೆ ಹಾಡಿಯ 1 ಕಿ.ಮೀ. ದೂರದ ಕಾಡಂಚಿಗೆ ಹೋಗಿ ಹುಡುಕಾಡಿದ್ದಾರೆ. ● 9ನೇ ಪುಟಕ್ಕೆ

ವಸತಿ ಶಾಲೆಗಳ 40 ಸಾವಿರ ಸೀಟು ಭರ್ತಿಗೆ ಫೆ.18ಕ್ಕೆ ಪರೀಕ್ಷೆ

ಪ್ರವೇಶಕ್ಕೆ ಅರ್ಜಿ ಆಹ್ವಾನ: ಡಿ.31 ಕೊನೆ ದಿನ

ಬೆಂಗಳೂರು, ಡಿ.12– ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯ ನಿರ್ವಹಿಸುತ್ತಿರುವ ನಾನಾ ಬಗೆಯ ವಸತಿ ಶಾಲೆಗಳು 2024–25ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ 6ನೇ ತರಗತಿಯ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿವೆ. ಡಿಸೆಂಬರ್ 31ನೇ ತಾರೀಖು ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, 2024ರ ಫೆಬ್ರವರಿ 18ರಂದು ಪ್ರವೇಶ ಪರೀಕ್ಷೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತಿಳಿಸಿದೆ.

ಆನ್ ಲೈನ್ ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳು ತಾವು ಪ್ರವೇಶ ಬಯಸುವ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಈ ಅವಕಾಶದ ಅಡಿಯಲ್ಲಿ, ಆಯಾ ಜಿಲ್ಲೆಯಲ್ಲಿರುವ ಎಲ್ಲ ವಸತಿ ಶಾಲೆಗಳನ್ನೂ ನಮೂದಿಸಬೇಕು. 100 ಅಂಕಗಳಿಗೆ ನಡೆಯುವ ಪ್ರವೇಶ ಪರೀಕ್ಷೆಯಲ್ಲಿ ಗಳಿಸಲಿರುವ ಮೆರಿಟ್, ಮೀಸಲಾತಿ ಮತ್ತು ಅಭ್ಯರ್ಥಿಗಳು ಪ್ರವೇಶ ಕೋರಿ ನಮೂದಿಸುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುವುದು ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ, ಅಟಲ್ ಬಿಹಾರಿ ವಾಜಪೇಯಿ, ಇಂದಿರಾ ಗಾಂಧಿ, ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ಕವಿರನ್ನ, ಗಾಂಧೀತತ್ತ್ವ ಮತ್ತು ಶ್ರೀ ನಾರಾಯಣ ಗುರು ವಸತಿ ಶಾಲೆಗಳ ಪ್ರವೇಶಕ್ಕೆ ಈ ಪರೀಕ್ಷೆ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

ವಿಶೇಷ ವರ್ಗಗಳ ಮಕ್ಕಳಿಗೆ 10 ಸಾವಿರ ಸೀಟು ಲಭ್ಯ: ಮೇಲ್ಕಂಡ ವಸತಿ ಶಾಲೆಗಳಲ್ಲಿ ಒಟ್ಟು 40 ಸಾವಿರ ಸೀಟುಗಳು ಇದ್ದು, ಇದರಲ್ಲಿ 10 ಸಾವಿರ ಸೀಟುಗಳು ಆಶ್ರಮ ಶಾಲೆಯ ಮಕ್ಕಳು, ಅಲೆಮಾರಿ ಮತ್ತು ಅರೆ ಅಲೆಮಾರಿ, ವಿಕಲಚೇತನ ಮಕ್ಕಳು, ಮಾಜಿ ಸೈನಿಕರ ಮಕ್ಕಳು, ಸಫಾಯಿ ಕರ್ಮಚಾರಿ ಮತ್ತು ಪೌರ ಕಾರ್ಮಿಕರ ಮಕ್ಕಳು, ಸ್ಮಶಾನ ಸಿಬ್ಬಂದಿಯ ಮಕ್ಕಳು ಮತ್ತು ವಿಶೇಷ ದುರ್ಬಲ ವರ್ಗಗಳ ಮಕ್ಕಳಿಗೆ ಲಭ್ಯವಿರುತ್ತವೆ ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತಿಳಿಸಿದೆ. ಈ ಪೈಕಿ ವಿಶೇಷ ದುರ್ಬಲ ವರ್ಗಗಳ ● 9ನೇ ಪುಟಕ್ಕೆ

ಗರ್ಭಕೋಶದ ಬಾಯಿ ಕ್ಯಾನ್ಸರ್ ತಡೆಗೆ ಮುನ್ನೆಚ್ಚರಿಕಾ ಲಸಿಕಾ ಅಭಿಯಾನ



ಉದ್ಘಾಟನೆ ವೇಳೆ ಸಾಂಕೇತಿಕವಾಗಿ 20 ಮಂದಿ ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಿಕೆ

ಮೈಸೂರು, ಡಿ.12(ಜಿಎ)–ಪಬ್ಲಿಕ್ ಹೆಲ್ತ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಮಹಿಳೆಯರಲ್ಲಿ ಕಂಡು ಬರುವ ಗರ್ಭಕೋಶದ ಬಾಯಿ ಕ್ಯಾನ್ಸರ್ ತಡೆಗೆ ಜಿಲ್ಲೆಯ ಗ್ರಾಮೀಣ ಮತ್ತು ಅರೆ ನಗರ ಪ್ರದೇಶದ 9ರಿಂದ 14 ವರ್ಷ ವಯಸ್ಸಿನ 200 ವಿದ್ಯಾರ್ಥಿನಿಯರಿಗೆ ಲಸಿಕೆ ಅಭಿಯಾನ ಆಯೋಜಿಸಿದ್ದು, ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಡಿ.19ರಂದು ಬೆಳಗ್ಗೆ 10.30ಕ್ಕೆ ಇದರ ಉದ್ಘಾಟನೆ ನಡೆಯಲಿದೆ ಎಂದು ಸಂಸ್ಥೆಯ ಸಂಶೋಧನಾ ವೈದ್ಯೆ ಡಾ.ರಾಘವಿ ಕರ್ಣಂ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗರ್ಭಕೋಶದ ಬಾಯಿ ಕ್ಯಾನ್ಸರ್ ಭಾರತದ ಮಹಿಳೆಯರಲ್ಲಿ ಅತೀ ಹೆಚ್ಚು ಕಂಡು ಬರುವ 2ನೇ ಕ್ಯಾನ್ಸರ್. ಇದಕ್ಕೆ ಹ್ಯೂಮನ್ ಪ್ಯಾಪಿಲೋಮ ವೈರಸ್(ಎಚ್.ಪಿ.ವಿ) ಕಾರಣವಾಗಿದ್ದು, ಇದನ್ನು ತಡೆಯುವಲ್ಲಿ ಲಸಿಕೆ ಪರಿಣಾಮಕಾರಿ ಕೆಲಸ ಮಾಡಲಿದೆ. 9 ವರ್ಷ ಮೇಲ್ಪಟ್ಟ ಎಲ್ಲ ಹೆಣ್ಣು ಮಕ್ಕಳು ಲಸಿಕೆ ಸ್ವೀಕರಿಸಲು ಅರ್ಹರಾಗಿದ್ದು, ವಯೋಮಿತಿಗೆ ಅನ್ವಯವಾಗಿ 2 ಅಥವಾ 3 ಡೋಸ್ ಪಡೆದರೆ ಭವಿಷ್ಯದಲ್ಲಿ ಈ ಕ್ಯಾನ್ಸರ್ ಬಾರದಂತೆ ತಡೆಯಬಹುದು ಎಂದರು.

ಉದ್ಘಾಟನೆಯ ಸಂದರ್ಭದಲ್ಲಿ ಸಾಂಕೇತಿಕವಾಗಿ 20 ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ಡಿಎಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಡಾ.ಜಯಂತ್ ಉಪಸ್ಥಿತರಿರುವರು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಸಂಸ್ಥಾಪಕಿ ಡಾ.ಪೂರ್ಣಿಮಾ ಮದಿವನ್ನನ್, ಜೆಎಸ್‌ಎಸ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ಸಂಸ್ಥೆಯ ಸಂಯೋಜಕ ಡಾ.ಅನಿಲ್ ಬಿಳಿಮಲೆ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮೀಣ ಅಂಚೆ ನೌಕರರ ಪ್ರತಿಭಟನೆ



ಮೈಸೂರು, ಡಿ.12(ಜಿಎ)– ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಒಕ್ಕೂಟದಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಂಗಳವಾರ ನಗರದ ಕೇಂದ್ರ ಅಂಚೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಅಂಚೆ ನೌಕರರಿಗೆ 8 ಗಂಟೆಗಳ ಕೆಲಸ ನಿಗದಿಪಡಿಸಿ, ನಿವೃತ್ತಿ ವೇತನ ಸೇರಿದಂತೆ ಎಲ್ಲಾ ಸವಲತ್ತು ನೀಡಬೇಕು. ಕಮಲೇಶ್ ಚಂದ್ರ ಸಮಿತಿ ಶಿಫಾರಸ್ಸುಗಳಾದ ಆರ್‌ಟಿಸಿ ವೇತನ ಪರಿಷ್ಕರಣೆಯನ್ನು 2016ರ ಜನವರಿ 1ರಿಂದಲೇ ಅನ್ವಯವಾಗುವಂತೆ ನೀಡಬೇಕು, ಎಸ್‌ಡಿಬಿಎಸ್ ಯೋಜನೆಯನ್ನು ಮೂರು ಪರ್ಸೆಂಟ್‌ನಿಂದ 10 ಪರ್ಸೆಂಟ್‌ಗೆ ಹೆಚ್ಚಿಸಿ ನಿವೃತ್ತಿ ವೇತನ ನೀಡಬೇಕು. ಐಪಿಪಿಬಿ (ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್), ಗ್ರಾಮೀಣ ಅಂಚೆ ಜೀವ ವಿಮೆ ಕೆಲಸಗಳಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ರದ್ದುಗೊಳಿಸಿ ಕೆಲಸದ ಹೊರಗೆ ಸೇರಿಸಬೇಕು. ನೂತನವಾಗಿ ನೇಮಕಾತಿ ಹೊಂದಿದ ನೌಕರರಿಗೆ ಕಾರ್ಯಭಾರದ ಆಧಾರದ ಮೇಲೆ ವೇತನ ನಿಗದಿಪಡಿಸಬೇಕು ಎಂದು ಒತ್ತಾಯಿಸಿ, ನೌಕರರು ತಮ್ಮ ಸ್ವಂತ ಮೊಬೈಲ್‌ನಲ್ಲೇ ಇಲಾಖಾ ಕೆಲಸ ನಿರ್ವಹಿಸಲು ಒತ್ತಾಯಿಸುತ್ತಿರುವುದು ಮತ್ತು ಅವೈಜ್ಞಾನಿಕ ಟಾರ್ಗೆಟ್ ನಿಗದಿಪಡಿಸುವುದನ್ನು ಸ್ಥಗಿತಗೊಳಿಸಬೇಕು. ಎಲ್ಲಾ ಕಚೇರಿಗೆ ಲ್ಯಾಪ್‌ಟಾಪ್, ಪ್ರಿಂಟರ್, ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ವಿಭಾಗೀಯ ಅಧ್ಯಕ್ಷ ಎಸ್.ಆರ್.ಸೋಮಶೇಖರ್, ಖಜಾಂಚಿ ಮಲ್ಲಯ್ಯ, ಕಾರ್ಯದರ್ಶಿ ಟಿ.ರಾಣಿ ಮೊದಲಾದವರು ಇದ್ದರು.



ಮೈಸೂರಿನ ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಐ.ಸೇಸುನಾಥನ್ ಅವರಿಗೆ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ತಮಿಳು ಅನುವಾದಕ್ಕಾಗಿ ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರು ಚೆನ್ನೈನ ರಾಜಭವನದಲ್ಲಿ ಭಾರತೀಯ ಭಾಷಾ ಉತ್ಸವದ ಸಂದರ್ಭದಲ್ಲಿ ಸ್ಮರಣ ಫಲಕ ನೀಡಿ, ಸನ್ಮಾನಿಸಿದರು.

ವಿದ್ಯಾರ್ಥಿಗಳ ರಾಷ್ಟ್ರೀಯ ಸಮ್ಮೇಳನ



ಮೈಸೂರು, ಡಿ.12(ಜಿಎ)–ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್ಮೆಂಟ್(ಎನ್.ಐ.ಪಿ.ಎಂ) ಮೈಸೂರು ಚಾಪ್ಟರ್‌ನಿಂದ ಡಿ.15ರಂದು ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ 21ನೇ ಶತಮಾನದ ಜ್ಞಾನ ಯುಗಕ್ಕೆ ಭವಿಷ್ಯದ ನಾಯಕರನ್ನು ರೂಪಿಸುವುದು ವಿಷಯದಲ್ಲಿ ವಿದ್ಯಾರ್ಥಿಗಳ ರಾಷ್ಟ್ರೀಯ ಸಮ್ಮೇಳನ ಸ್ಫೂನಾ – 2023 ಆಯೋಜಿಸಲಾಗಿದೆ ಎಂದು ಮೈಸೂರು ಚಾಪ್ಟರ್ ಅಧ್ಯಕ್ಷ ಸಿ.ವಿ.ಶ್ರೀನಿವಾಸನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.15ರಂದು ಬೆಳಿಗ್ಗೆ 10.30 ಕ್ಕೆ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ದೇಶದ ವಿವಿಧ ಭಾಗಗಳಿಂದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದರು.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಲು ಪೂರಕವಾದ ಜ್ಞಾನ, ಮೌಲ್ಯ ಹಾಗೂ ಡಿಜಿಟಲ್ ಕಾರ್ಯವೈಖರಿಯ ಅಗತ್ಯಗಳ ಬಗ್ಗೆ ತಿಳಿಸಲಾಗುವುದು. ವೃತ್ತಿಪರತೆ, ಉದ್ಯಮ ಮತ್ತು 21ನೇ ಶತಮಾನದ ಕೌಶಲಗಳ ಪರಿಚಯ ಮಾಡಲಾಗುವುದು. ಸಮ್ಮೇಳನಕ್ಕೆ ಪ್ರವೇಶ ಶುಲ್ಕವಿದ್ದು, ಭಾಗವಹಿಸಲು ಇಚ್ಛಿಸುವವರು https://shorturl.at/hpGX2 ಲಿಂಕ್ ಅಥವಾ nipmstuna2023@gmail.com ಹಾಗೂ ಮೊ.ಸಂ–74110 69559 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಚಾಪ್ಟರ್ ಮಾಜಿ ಅಧ್ಯಕ್ಷ ವೈ.ಎಸ್.ಸಿದ್ದೇಗೌಡ, ಗೋಪಾಲಕೃಷ್ಣ ಶಾಸ್ತ್ರಿ, ಗೌರವ ಕಾರ್ಯದರ್ಶಿ ಎನ್.ದೇವರಾಜ ಉಪಸ್ಥಿತರಿದ್ದರು.

ನಿಧನ

ಎನ್.ವಸಂತಕುಮಾರ್



ಮೈಸೂರು,ಡಿ.12–ಮೈಸೂರಿನ ಮೇದರಕೇರಿ ನಿವಾಸಿ, ಕೆಆರ್‌ಎಸ್ ನೀರಾವರಿ ವಿಭಾಗದ ಎಇಇ ಎನ್.ವಸಂತಕುಮಾರ್ (46) ಮಂಗಳವಾರ ನಿಧನರಾದರು. ಇವರು ತಾಯಿ, ಪತ್ನಿ, ಇಬ್ಬರು ಮಕ್ಕಳು, ಮೂವರು ಸಹೋದರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಬುಧವಾರ ಮಧ್ಯಾಹ್ನ 12.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರಲ್ಲಿ ಅಪರಾಧ ತಡೆ ಮಾಸಾಚರಣೆ ಹಿನ್ನೆಲೆ

ಲಷ್ಕರ್ ಠಾಣೆ ಪೊಲೀಸರಿಂದ ಬೀಟ್ ಸದಸ್ಯರಿಗೆ ಅಪರಾಧ ತಡೆ ಅರಿವು



ಮೈಸೂರಿನ ಅಶೋಕ ರಸ್ತೆಯ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಬೀಟ್ ಸದಸ್ಯರ ಸಭೆಯಲ್ಲಿ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಅವರು ಅಪರಾಧ ತಡೆಗಟ್ಟುವ ಸಂಬಂಧ ಅರಿವು ಮೂಡಿಸಿದರು. ಎಎಸ್‌ಐ ದೊಡ್ಡಯ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

> ಕೆಲವರು ಅಪಘಾತ ನೆಪದಲ್ಲಿ ಹಿರಿಯ ನಾಗರಿಕರಿಂದ ಹಣ ವಸೂಲಿ, ಲಾಡ್ಜ್‌ಗಳಲ್ಲಿ ಜೂಜು, ದುಷ್ಕರ್ಮಿಗಳ ವಾಸ್ತವ್ಯ, ಗುಂಪು ಘರ್ಷಣೆ, ವಿಧ್ವಂಸಕ ಕೃತ್ಯಗಳಿಗೆ ಸಂಚು, ರಿಯಲ್ ಎಸ್ಟೇಟ್ ಮಾಫಿಯಾ ಅಟ್ಟಹಾಸ, ಬಡ್ಡಿ ಲೇವಾದೇವಿ ಗಲಾಟೆ, ರೌಡಿಗಳ ಕಾರ್ಯಾಚರಣೆ ಸೇರಿದಂತೆ ಅಪರಾಧ ಪ್ರಕರಣಗಳ ಬಗ್ಗೆ ಮಾಹಿತಿ ಪಡೆದು ಪೊಲೀಸ್ ಠಾಣೆಗೆ ಮುಟ್ಟಿಸುವ ಮೂಲಕ ಅಹಿತಕರ ಘಟನೆಗಳು ಸಂಭವಿಸದಂತೆ ತಡೆಯಲು ಸಹಕರಿಸಿ. **–ಪ್ರಸಾದ್, ಇನ್ಸ್‌ಪೆಕ್ಟರ್, ಲಷ್ಕರ್ ಠಾಣೆ**

ಮೈಸೂರು, ಡಿ. 12(ಆರ್‌ಕೆ)– ಅಪರಾಧಗಳ ತಡೆ, ಪತ್ತೆ ಸಂಬಂಧ ಪೊಲೀಸರೊಂದಿಗೆ ನಾಗರಿಕರು ಕೈ ಜೋಡಿಸಬೇಕೆಂದು ಮೈಸೂರು ನಗರದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಇಂದಿಲ್ಲಿ ಸಲಹೆ ನೀಡಿದ್ದಾರೆ.


ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೀಟ್ ಸದಸ್ಯರ (ನಾಗರಿಕ ಪೊಲೀಸ್) ಸಭೆಯಲ್ಲಿ ಮಾತನಾಡಿದ ಅವರು, ಮಾತನಾಡುವಾಗಲೇ ಮೊಬೈಲ್ ಕಿತ್ತುಕೊಂಡು ಪರಾರಿಯಾಗುವುದು, ಮಹಿಳೆಯರ ಚಿನ್ನದ ಸರ ಅಪಹರಣ, ಗಮನ ಬೇರೆಡೆ ಸೆಳೆದು ಹಣ–ಚಿನ್ನಾಭರಣವಿದ್ದ ಬ್ಯಾಗ್ ಎಗರಿಸುವುದು, ಮನೆ ಕನ್ನ ಕಳವುಗಳಂತಹ ಪ್ರಕರಣಗಳಲ್ಲಿ ಅಗತ್ಯ ಮಾಹಿತಿ ನೀಡಿ ತನಿಖೆಗೆ ಸಹಕರಿಸುವಂತೆ ಮನವಿ ಮಾಡಿದರು.

ಅಶೋಕ ರಸ್ತೆ, ಬಿಎನ್ ರಸ್ತೆ, ಗಾಂಧಿ ಚೌಕ, ಲಷ್ಕರ್ ಮೊಹಲ್ಲಾದಲ್ಲಿ ಗ್ರಾಹಕರಂತೆ ಆಭರಣ ಅಂಗಡಿಗಳಿಗೆ ತೆರಳಿ ಮಾಲೀಕರು ಹಾಗೂ ಕೆಲಸಗಾರರ ಗಮನ ಬೇರೆಡೆ ಸೆಳೆದು ಬೆಲೆಬಾಳುವ ವಸ್ತು ಕಳವು ಮಾಡುತ್ತಿರುವ ಪ್ರಕರಣಗಳ ಬಗ್ಗೆ ಅಂಗಡಿ ಮಾಲೀಕರು ಹಾಗೂ ಸಿಬ್ಬಂದಿ ಎಚ್ಚರದಿಂದಿರುವಂತೆ ಆಗಿಂದಾಗ್ಗೆ ತಿಳುವಳಿಕೆ ಮೂಡಿಸಬೇಕೆಂದು ತಿಳಿಸಿದರು. ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಬಸ್ ಹತ್ತುವಾಗ, ಇಳಿಯುವಾಗ, ಪ್ರಯಾಣಿಸುವಾಗ ಪಿಕ್‌ಪಾಕೆಟ್, ತಿಂಡಿ–ಪಾನೀಯ ಕೊಟ್ಟು ಸಭ್ಯರಂತೆ ವರ್ತಿಸಿ ಹಣ, ಚಿನ್ನಾಭರಣ ಹೊತ್ತೊಯ್ಯುವುದು, ಪ್ಲಾಟ್‌ಫಾರಂಗಳಲ್ಲಿ ಮಲಗುವ ಪ್ರಯಾಣಿಕರ ಜೇಬಿನಿಂದ ಹಣ ಎಗರಿಸುವುದು, ವಯಸ್ಸಾದವರನ್ನೇ ಗುರಿಯಾಗಿಸಿಕೊಂಡು ವಂಚನೆ ಮಾಡುವುದರ ಬಗ್ಗೆ ಎಚ್ಚರದಿಂದಿರುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆಯೂ ಪ್ರಸಾದ್ ಅವರು ಮೊಹಲ್ಲಾ ಬೀಟ್ ಸದಸ್ಯರಿಗೆ ಕಿವಿಮಾತು ಹೇಳಿದರು.

ಮಾತಿನ ಚಕಮಕಿ, ಗಲಾಟೆಗಳಾದಾಗ ಮಾಹಿತಿ ಬಂದರೆ ತಕ್ಷಣ ಮಧ್ಯ ಪ್ರವೇಶಿಸಿ ಉಲ್ಬಣವಾಗದಂತೆ ತಡೆಯಲೆತ್ನಿಸಿ, ಪೊಲೀಸರಿಗೆ ತಿಳಿಸುವುದು, ಕಳವು ಪ್ರಕರಣಗಳ ಪತ್ತೆಗೆ ಸುಳಿವು ನೀಡಿ ಸಹಕರಿಸಬೇಕು, ಶಾಂತಿ–ಸುವ್ಯವಸ್ಥೆಗೆ ಭಂಗ ಬಾರದಂತೆ ನೋಡಿಕೊಳ್ಳುವುದು ನಾಗರಿಕ ಪೊಲೀಸರ ಆದ್ಯ ಜವಾಬ್ದಾರಿ ಎಂದು ಪ್ರಸಾದ್ ಇದೇ ವೇಳೆ ನುಡಿದರು.

ಮನೆಗೆ ಬೀಗ ಹಾಕಿ ಹೊರ ಊರುಗಳಿಗೆ ಹೋಗುವಾಗ ಹ್ಯಾಂಗಿಂಗ್ ಬೀಗ ಹಾಕಬಾರದು, ಡೋರ್ ಲಾಕ್ ಮಾಡಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು, ಮನೆ, ಅಂಗಡಿ, ಉದ್ದಿಮೆಯ ಸಿಸಿ ಕ್ಯಾಮರಾವನ್ನು ಆಫ್ ಮಾಡಬಾರದು, ಅಪರಿಚಿತರು, ಅನುಮಾನಾಸ್ಪದವಾಗಿ ಓಡಾಡುತ್ತಿದ್ದರೆ ಗಮನಿಸಿ ತಿಳಿಸಬೇಕೆಂಬ ಸಲಹೆ, ತಿಳುವಳಿಕೆಯನ್ನು ಮೊಹಲ್ಲಾ ನಿವಾಸಿಗಳಿಗೆ ನೀಡಬೇಕು. ವಾಯುವಿಹಾರ ಮಾಡುವವರು ಅಗತ್ಯ ಸುರಕ್ಷತಾ ಕ್ರಮ ವಹಿಸುವ ಬಗ್ಗೆ ಹೇಳುವ ಮೂಲಕ ಅಪರಾಧಗಳಾಗದಂತೆ ತಡೆಯುವಲ್ಲಿ ನಿಮ್ಮ ಪಾತ್ರ ಅಮೂಲ್ಯವಾದುದೆಂದು ನುಡಿದರು. ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ದೊಡ್ಡಯ್ಯ, ಮೊಹಲ್ಲಾದ 60ಕ್ಕೂ ಹೆಚ್ಚು ಬೀಟ್ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಈರುಳ್ಳಿ ನಂತರ ಈಗ ಬೆಳ್ಳುಳ್ಳಿ ಬೆಲೆ ಏರಿಕೆ: ಕೆಜಿಗೆ 400 ರೂ.



ಬೆಂಗಳೂರು: ಈರುಳ್ಳಿ ನಂತರ ಬೆಳ್ಳುಳ್ಳಿ ಬೆಲೆಯಲ್ಲಿ ಭಾರಿ ಏರಿಕೆ ಕಂಡಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಬೆಲೆ ಕೆಜಿಗೆ 300ರಿಂದ 400 ರೂ. ತಲುಪಿದೆ. ಒಂದು ತಿಂಗಳಲ್ಲಿ ಬೆಳ್ಳುಳ್ಳಿ ಬೆಲೆ ಸುಮಾರು ಎರಡು ಪಟ್ಟು ಹೆಚ್ಚಾಗಿದೆ. 1 ತಿಂಗಳ ಹಿಂದೆ ಚಿಲ್ಲರೆ ಬೆಲೆ ಕೆಜಿಗೆ 200ರಿಂದ 250 ರೂಪಾಯಿ ಇತ್ತು. ಈ ವರ್ಷ ಬೆಳ್ಳುಳ್ಳಿ ಬೆಳೆ ಕೈಕೊಟ್ಟಿದ್ದರಿಂದ ಬೆಲೆ ಏರಿಕೆಯಾಗಿದೆ.

ಬೆಳ್ಳುಳ್ಳಿ ಬೆಲೆ ಏರಿಕೆಗೆ ಎರಡು ಕಾರಣಗಳಿವೆ. ಮೊದಲನೆಯದು–ಹವಾಮಾನ ವೈಪರೀತ್ಯದಿಂದ ಬೆಳೆ ಹಾಳಾಗಿದೆ. ಎರಡನೆಯ ಕಾರಣ ಕಡಿಮೆ ಉತ್ಪಾದನೆ. ಹಾಗಾಗಿ ಮಾರುಕಟ್ಟೆಗಳಲ್ಲಿ ಬೆಳ್ಳುಳ್ಳಿಯ ಪೂರೈಕೆಯಲ್ಲಿ ಭಾರಿ ಕಡಿತ ಕಂಡು ಬಂದಿದೆ. ಇದರಿಂದಾಗಿ ಅದರ ಬೆಲೆ ಹೆಚ್ಚಾಗಿದೆ. ನಾಸಿಕ್ ಮತ್ತು ಪುಣೆಯಲ್ಲಿ ಬೆಳ್ಳುಳ್ಳಿಯನ್ನು ಹೆಚ್ಚು ಉತ್ಪಾದಿಸಲಾಗುತ್ತದೆ. ಹೊಸ ಬೆಳೆ ಮಾರುಕಟ್ಟೆಗೆ ಬರಲು ಸಮಯ ಹಿಡಿಯಲಿದ್ದು ಅಲ್ಲಿಯವರೆಗೆ ಬೆಲೆಗಳು ಹೆಚ್ಚಾಗುವ ನಿರೀಕ್ಷೆಯಿದೆ. ಬೆಳ್ಳುಳ್ಳಿಯ ಕೊರತೆಯಿಂದಾಗಿ, ಕಳೆದ ಕೆಲವು ವಾರಗಳಲ್ಲಿ ಅದರ ಬೆಲೆ ಹೆಚ್ಚಾಗಿದೆ. ಈ ಪರಿಸ್ಥಿತಿ ಶೀಘ್ರದಲ್ಲೇ ಸುಧಾರಿಸುವ ಸಾಧ್ಯತೆಯಿಲ್ಲ ಎಂದು ವ್ಯಾಪಾರಿಗಳು ಹೇಳುತ್ತಿದ್ದಾರೆ. ಬೆಳ್ಳುಳ್ಳಿ ಬೆಲೆ ಏರಿಕೆ ಗ್ರಾಹಕರ ಕೈ ಸುಡಲಿದೆ. ಬೀದರ್‌ನಲ್ಲಿ ಬೆಳ್ಳುಳ್ಳಿ ಬೆಲೆ 400 ರೂ. ಇದ್ದು ಬೆಂಗಳೂರಿನಲ್ಲಿ 300 ರಿಂದ 350 ರೂಪಾಯಿ ಇದೆ.

ಡಿ.15ರಿಂದ ಮೈಸೂರಲ್ಲಿ ಗಾಂಧಿ ಶಿಲ್ಪ ಬಜಾರ್



ಮೈಸೂರು,ಡಿ.12(ಜಿಎ)–ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗಾಂಧಿ ಶಿಲ್ಪ ಬಜಾರ್ ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟವನ್ನು ಡಿ.15ರಿಂದ 24ರವರೆಗೆ ಆಯೋಜಿಸಲಾಗಿದೆ ಎಂದು ಪ್ರೊ.ಮೊರಬದ ಮಲ್ಲಿಕಾರ್ಜುನ ತಿಳಿಸಿದರು.

ಕರಕುಶಲ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಹಸ್ತಶಿಲ್ಪ ಕಲೆಯ ಅಭಿವೃದ್ಧಿ, ಏಳಿಗೆ ಮತ್ತು ಅದರ ಉಳಿವಿಗಾಗಿ ಭಾರತ ಸರ್ಕಾರದ ವಸ್ತ್ರ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯು ರಾಷ್ಟ್ರಮಟ್ಟದ ನೋಡಲ್ ಏಜೆನ್ಸಿಯಾಗಿ ಹಲವು ಕಾರ್ಯಕ್ರಮ ಆಯೋಜನೆಯ ಮೂಲಕ ಅವಿರತವಾಗಿ ಶ್ರಮಿಸುತ್ತಿದ್ದು, ಕರಕುಶಲ ಕಲೆಯ ಅಭಿವೃದ್ಧಿ, ವಿನ್ಯಾಸ ಹಾಗೂ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಕುಶಲಕರ್ಮಿಗಳು ಹಾಗೂ ಅವರಲ್ಲಿರುವ ಕುಶಲ ಕಲೆಗಳು ದೇಶದ ಎಲ್ಲೆಡೆಯ ಕಲಾಸಕ್ತರಿಗೆ ತಲುಪಬೇಕು ಎನ್ನುವ ಕಳಕಳಿ ಹೊಂದಿರುವ ಇಲಾಖೆಯು ಸಾಂಸ್ಕೃತಿಕ ನಗರಿಯಾದ ಮೈಸೂರಿನ ಸಂಸ್ಕೃತಿ ಪ್ರಿಯರಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಎಂದು ತಿಳಿಸಿದರು.

ಡಿಸೆಂಬರ್ 15ರ ಸಂಜೆ 4ಕ್ಕೆ ಮೇಳವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದೊಂದಿಗೆ ಸಂಸದ ಪ್ರತಾಪಸಿಂಹ ಉದ್ಘಾಟಿಸಲಿದ್ದು, ಶಾಸಕ ಜಿ.ಟಿ.ದೇವೇಗೌಡ, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಶರಣಬಸಪ್ಪ ದರ್ಶನಾಪುರ, ತಂಗಡಗಿ ಶಿವರಾಜ್ ಸಂಗಪ್ಪ ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಬಾರಿ 900ಕ್ಕೂ ಹೆಚ್ಚು ಮಂದಿ ಆನ್‌ಲೈನ್‌ನಲ್ಲಿ ವಿವಿಧ ಭಾಗಗಳಿಂದ ಭಾಗವಹಿಸಲು ನೋಂದಣಿ ಮಾಡಿದ್ದರೂ ಈ ಪೈಕಿ 80 ಮಂದಿಗೆ ಅವಕಾಶ ಕಲ್ಪಿಸಲಾಗಿದೆ. ದೇಶದ ಎಲ್ಲ ರಾಜ್ಯಗಳಿಂದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕುಶಲಕರ್ಮಿಗಳು ಸೇರಿ 100 ಕುಶಲಕರ್ಮಿಗಳು, ಕೈಮಗ್ಗ ನೇಕಾರರು ತಮ್ಮ ಉತ್ಕೃಷ್ಟ ಕಲಾವಸ್ತುಗಳನ್ನು ಮೈಸೂರಿನಲ್ಲಿ ನಡೆಯುವ ಪ್ರದರ್ಶನದಲ್ಲಿ ಅನಾವರಣಗೊಳಿಸಲಿದ್ದಾರೆ.

ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ತಂಜಾವೂರು, ಮೈಸೂರು ಶೈಲಿಯ ಚಿತ್ರಕಲೆ, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಛತ್ತೀಸಘಢದ ದೊಕ್ರಾ ಕಾಸ್ಟಿಂಗ್, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಗುಜರಾತ್ ರಾಜ್ಯದ ಪಟೋಲ ಸೀರೆಗಳು, ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಶೀತಲ ಪಟ್ಟಿ, ಬಿದಿರು–ಬೆತ್ತದ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಮೇಘಾಲಯದ ಬಿದಿರಿನ ಕಲಾತ್ಮಕ ವಸ್ತುಗಳು, ಡ್ರೈ ಫ್ಲವರ್‌ಗಳು, ಗುಜರಾತಿನ ಕರಕುಶಲ ವಸ್ತುಗಳು ಮತ್ತು ವಸ್ತ್ರಗಳು, ರಾಜಸ್ಥಾನದ ಕರಕುಶಲ ಅರಗಿನ ಬಳೆಗಳು ಮತ್ತು ಎಂಬ್ರಾಯಿಡರಿ ವಸ್ತುಗಳು, ಉತ್ತರ ಪ್ರದೇಶದ ಕಲಾತ್ಮಕ ಲೋಹದ ವಸ್ತುಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಮುದ್ರಿತ ಜವಳಿ, ಬಿಹಾರದ ಮಧುಬನಿ ಚಿತ್ರಕಲೆ, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆಗಳ, ಅರಗಿನ ಬಳೆಗಳು ಈ ಮೇಳದ ಒಂದೇ ಸೂರಿನಡಿ ಕಲಾಸ್ವಾದ ಮತ್ತು ಖರೀದಿಗೆ ಸಿಗಲಿದೆ ಎಂದ ಅವರು, ಡಿ.25ರವರೆಗೆ ಪ್ರತಿದಿನ ಬೆಳಗ್ಗೆ 10.30ರಿಂದ ಸಂಜೆ 9ರವರೆಗೆ ವೀಕ್ಷಣೆಗೆ ಸಿಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ರಾಕೇಶ್ ರೈ ಉಪಸ್ಥಿತರಿದ್ದರು.

ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದಿಂದ ವಂಚನೆ



ಮೈಸೂರು, ಡಿ.12(ಜಿಎ)–ಮೈಸೂರಿನ ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರು ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘವು ಹಿರಿಯ ಸದಸ್ಯರಿಗೆ ನಿವೇಶನ ನೀಡದೆ ವಂಚಿಸಿದೆ ಎಂದು ಗುರುಕುಲ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಜಿ.ನಂಜಪ್ಪಸ್ವಾಮಿ ಆರೋಪಿಸಿದ್ದಾರೆ.


ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2011ರಲ್ಲಿ ಪ್ರಾರಂಭಗೊಂಡ ಈ ಸಂಘದ ಅಧ್ಯಕ್ಷರಾದ ಎಂ.ಎಸ್.ಮಹದೇವಸ್ವಾಮಿ, ಸಂಘದಿಂದ ಖಾಸಗಿ ಡೆವಲಪರ್‌ಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಗುರುಕುಲ ಬಡಾವಣೆಯನ್ನು ನಿರ್ಮಿಸಿ, ಇಲ್ಲಿ 2013ರಿಂದ ಈವರೆಗೂ ಸಂಘದ ಹಿರಿಯ 70 ಸದಸ್ಯರಿಗೆ ನಿವೇಶನವನ್ನು ಹಂಚಿಕೆ ಮಾಡಿಲ್ಲ. ಬದಲಿಗೆ ಅವರ ಸಂಬಂಧಿಕರಿಗೆ ಹಾಗೂ ಒಂದೇ ಕುಟುಂಬಕ್ಕೆ ಅನೇಕ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲ್.ರಂಜಿತ ಇವರ ಅಕ್ರಮಕ್ಕೆ ಬೆಂಬಲಿಸಿದ್ದಾರೆ. ನೊಂದ ಪ್ರತಿಯೊಬ್ಬ ಸದಸ್ಯರು ನ್ಯಾಯಾಲಯದ ಮೊರೆ ಹೋಗಿದ್ದೇವೆ. ಆದರೆ, ಸಂಘವು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದೆ ಎಂದರು.

ಎಲ್ಲಾ ನೊಂದ ಸದಸ್ಯರು ಒಗ್ಗೂಡಿ ನ್ಯಾಯಾಲಯದಲ್ಲಿ ಹೋರಾಡಲು ಗುರುಕುಲ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಕಟ್ಟಿದ್ದು, ಸಂಘದ ಮೂಲಕ ಮುಂದಿನ ಕಾನೂನು ಹೋರಾಟ ನಡೆಸುತ್ತೇವೆ ಎಂದರು. ಗೋಷ್ಠಿಯಲ್ಲಿ ಗುರುಕುಲ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷೆ ಡಾ.ಜಿ.ವಿ.ಭಾರತಿ, ಖಜಾಂಚಿ ಎಂ.ಬಸವಣ್ಣ, ಶ್ವೇತಾ ಮಡಪ್ಪಾಡಿ ಉಪಸ್ಥಿತರಿದ್ದರು.

ವಿಕಲಚೇತನರ ವಿವಾಹ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಡಿ.12–2023–24ನೇ ಸಾಲಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ವಿಕಲಚೇತನರಿಗೆ ವಿವಾಹ ಪ್ರೋತ್ಸಾಹ ಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಯ ಅರ್ಹ ವಿಕಲಚೇತನ ವ್ಯಕ್ತಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬಹುದು. ಮಾಹಿತಿಗಾಗಿ ದೂ.ಸಂ: 0821–2490333 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.12.2023 ಬುಧವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ,
ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.
- **ಅಸೆಂಡೆನ್ಸ್ :** ಆರ್. ಚೇತನ್ ಅವರಿಂದ ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.
- **ಡಾ. ವಿಷ್ಣು ಸೇನಾ ಸಮಿತಿ :** ಅಭಿಮಾನಿ ಜಾಗೃತ ರಥಯಾತ್ರೆ, ಸ್ಥಳ: 101 ಗಣಪತಿ ದೇವಸ್ಥಾನ, ಅಗ್ರಹಾರ, ಬೆಳಗ್ಗೆ 10ಕ್ಕೆ.
- **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಾನಸಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ನಿವೃತ್ತ ಮೇಜರ್ ಜನರಲ್ ಡಾ.ಎಸ್.ಜಿ.ಒಂಬತ್ಕೆರೆ ಅವರಿಂದ ಭಾರತದ ಸಂವಿಧಾನ ಮತ್ತು ಸಾಮಾಜಿಕ ಜವಾಬ್ದಾರಿಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಸಮಾಜಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಎಚ್.ಎಸ್. ಚಂದ್ರಮೌಳಿ, ಸ್ಥಳ: ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸಂಸ್ಕೃತ ಸಂಶೋಧನಾ ಕೇಂದ್ರ :** ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ, ಉದ್ಘಾಟನೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಕಾಲೇಜು ಶಿಕ್ಷಣ ವಿಭಾಗದ ನಿವೃತ್ತ ಹೆಚ್ಚುವರಿ ನಿರ್ದೇಶಕ ವಿದ್ವಾನ್ ಟಿ.ಎನ್.ಪ್ರಭಾಕರ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಜೆಎಸ್‌ಎಸ್ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಪೂರ್ಣಿಮಾ, ಉಪಸ್ಥಿತರು: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ, ಎಂ.ಪಿ.ರಾಜೇಶ್ವರಿ, ಎಸ್.ಸೋಮಶೇಖರ, ಶೈಕ್ಷಣಿಕ ಡೀನ್ ಡಾ.ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ:** ಕರ್ನಾಟಕ ರಾಜ್ಯೋತ್ಸವ ಹಾಗೂ ಪ್ರಾತ್ಯಕ್ಷಿಕೆಗಳ ಪ್ರದರ್ಶನ, ಮುಖ್ಯ ಅತಿಥಿಗಳು: ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಡಾ.ನಿರಂಜನ, ಅಧ್ಯಕ್ಷತೆ : ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಾಮಪ್ಪ, ಸ್ಥಳ: ದೀಪಾ ಪ್ರೌಢಶಾಲೆ ಆವರಣ, ರೂಪಾನಗರ, ಬೆಳಗ್ಗೆ 10.30ಕ್ಕೆ.
- **ಸಮರ್ಥನಂ ಅಂಗವಿಕಲರ ಸಂಸ್ಥೆ, ದಿವ್ಯಾಂಗ ಸಬಲೀಕರಣ ಸಮಿತಿ, ಐ.ಕ್ಯೂ.ಎ.ಸಿ ಘಟಕ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿಶ್ವವಿದ್ಯಾಲಯ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಸೋಮಣ್ಣ, ಪ್ರಧಾನ ಭಾಷಣಕಾರರು: ನಿವೃತ್ತ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಬಲರಾಮು, ಮುಖ್ಯ ಅತಿಥಿಗಳು: ಸಮರ್ಥನಂ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಗುರು ರಾಘವೇಂದ್ರ, ಬಿ.ಎಸ್. ರಾಘವೇಂದ್ರ ಡಾ.ವಿ.ಮಂಜುನಾಥ್, ಡಾ.ಪಿ.ವಿ.ನಾಗರಾಜು, ಪ್ರೊ ಜಯಪ್ರಕಾಶ ನಾಯ್ಡು, ಶಿವರಾಜು ಸ್ಥಳ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಭಾಂಗಣ, ಪಡುವಾರಹಳ್ಳಿ, ಬೆಳಗ್ಗೆ 11ಕ್ಕೆ
- **ರೋಟರಿ ವೆಸ್ಟ್ ಸ್ಕೂಲ್ :** 15ನೇ ವರ್ಷದ ವಾರ್ಷಿಕೋತ್ಸವ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ
- **ಪಿಜಿಎಲ್ ಸಂಸ್ಮರಣಾ ವೇದಿಕೆ :** ಗಾನಕಲಾ ಭೂಷಣ ಪಿಜಿ. ಲಕ್ಷ್ಮೀನಾರಾಯಣ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಡಾ. ಸಿ.ಎ. ಶ್ರೀಧರ್ ಮತ್ತು ವಿದ್ವಾನ್ ಕೇಶವಚಂದ್ರ ಅವರಿಂದ ದ್ವಂದ್ವ ವೇಣುವಾದನ, ವಿದ್ವಾನ್ ಕೇಶವ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಸಿ.ಎ. ರಘುನಂದನರಾವ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ವಾಯ್ಸ್ ಆಫ್ ಪೀಪಲ್ :** ಅರ್ಜುನ ನಮನ ಕಾರ್ಯಕ್ರಮ, ಸ್ಥಳ: ನಾಗರಿಕ ವೃತ್ತ, ವಿವೇಕಾನಂದ ಸರ್ಕಲ್ ರಸ್ತೆ, ಜ್ಯೋತಿ ಶಾಲೆ ಹತ್ತಿರ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ–ಡಾ. ಸಂಗಮೇಶ್ ಸವದತ್ತಿಮಠ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ, ಆಯುರ್ವೇದ ಪದ್ಧತಿ ಮತ್ತು ಆಯುರ್ವೇದ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಬಗ್ಗೆ ತಿಳಿಸಿಕೊಡಲಿದ್ದಾರೆ ಡಾ.ರಾಮಚಂದ್ರ ನೇಸರ್ಗಿ ಮತ್ತು ಪ್ರೊ.ಎಸ್.ಶ್ರೀಕಂಠಸ್ವಾಮಿ, 10.00 ಸಮೀರ್ ರಾವ್–ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ರಮಾ ರಾಮಕೃಷ್ಣ, 3.00 ಜಿ.ಎಸ್.ಕಮಲಾ ಮತ್ತು ಜಿ.ಎಸ್.ರಾಜಲಕ್ಷ್ಮಿ –ಯುಗಳ ಗಾಯನ, 4.00 ಮಹಿಳಾರಂಗ–ಸ್ತ್ರೀ ಚೇತನ–ಗಾಯಕಿ ಹಾಗೂ ರಂಗಭೂಮಿ ಕಲಾವಿದೆ ಸುಮಾ ಪ್ರಶಾಂತ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಾವಯವ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳಲ್ಲಿ ಕಳೆ ನಿರ್ವಹಣೆ ಕುರಿತು ಡಾ.ಎಂ.ಟಿ.ಸಂಜಯ್ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ–ಪಂಡಿತ್ ನಿಖಿಲ್ ಬ್ಯಾನರ್ಜಿ–ಸಿತಾರ್ ವಾದನ, 10.30 ಸವಿನೆನಪು

ಭ್ರೂಣ ಹತ್ಯೆ ತಡೆಗೆ ರಾಜ್ಯ ಮಟ್ಟದ ಕಾರ್ಯಪಡೆ



ಬೆಳಗಾವಿ: ಭ್ರೂ ಹತ್ಯೆ ಪ್ರಕರಣಗಳನ್ನು ತಡೆಯಲು ರಾಜ್ಯ ಮಟ್ಟದ ಕಾರ್ಯಪಡೆಯನ್ನು ಶೀಘವೇ ರಚಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಕೆ.ಎ.ತಿಪ್ಪೇಸ್ವಾಮಿ, ಉಮಾಶ್ರೀ, ಭಾರತಿ ಶೆಟ್ಟಿ, ಟಿ.ಎ.ಶರವಣ ಅವರು, ಭ್ರೂಣ ಹತ್ಯೆ ಪ್ರಕರಣಗಳ ಕುರಿತು ಗಮನ ಸೆಳೆಯುವ ಸೂಚನೆ ಮಂಡಿಸಿದ್ದರು. ಇದಕ್ಕೆ ಉತ್ತರಿಸಿದ ಸಚಿವರು, ಅವ್ಯಾಹತವಾಗಿ ಭ್ರೂಣ ಹತ್ಯೆ ನಡೆಯುತ್ತಿದೆ. ಇದನ್ನು ತಡೆಯಲು ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಿದೆ ಎಂದರು.

ಕೊಲೆಗಿಂತ ಕಡಿಮೆ ಅಲ್ಲ ಭ್ರೂಣ ಹತ್ಯೆ ಎನ್ನುವ ಭಾವನೆಯನ್ನು ಇಡೀ ಸದನ ವ್ಯಕ್ತಪಡಿಸಿದೆ. ಈ ಪ್ರಕರಣದಲ್ಲಿ ಯಾವ ಸೆಕ್ಷನ್ ಅಡಿ ಪ್ರಕರಣ ದಾಖಲಿಸಬೇಕು, ಕಾನೂನಾತ್ಮಕವಾಗಿ ಹೇಗೆ ಎದುರಿಸಬೇಕು ಎಂಬುದರ ಬಗ್ಗೆಯೂ ಗಂಭೀರವಾಗಿ ಚಿಂತನೆ ಮಾಡುತ್ತೇವೆ ಎಂದರು. ಹೆಣ್ಣು ಭ್ರೂಣ ಹತ್ಯೆ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯದ ಬಗ್ಗೆ ಮತ್ತು ವಿಶೇಷ ನೀತಿ ರೂಪಿಸುವ ಬಗ್ಗೆಯೂ ಸಮಾಲೋಚನೆ ನಡೆಸಿದ್ದೇವೆ. ಸ್ಕ್ಯಾನಿಂಗ್ ಮೆಷಿನ್‌ಗಳ ಪರ ವಾನಗಿಯನ್ನು ಪ್ರತಿವರ್ಷ ನವೀಕರಿಸುವಂತೆ ಮಾಡಲಾಗುವುದು. ಒಮ್ಮೆ ಬಳಕೆ ಮಾಡಿದ ಅಲ್ಟ್ರಾ ಸೌಂಡ್ ಮಿಷನ್ ಖರೀದಿಸಿ ಬಳಕೆ ಮಾಡುವುದಕ್ಕೆ ಸಂಬಂಧಿಸಿದಂತೆ ನಿಯಮ ರೂಪಿಸಲಾಗುವುದು ಎಂದು ತಿಳಿಸಿದರು.

ಸ್ಥಗಿತಗೊಂಡಿರುವ ಸಹಾಯವಾಣಿ 104 ಅನ್ನು ಮತ್ತೆ ಆರಂಭಿಸಲು ಅನುಮೋದನೆ ಸಿಕ್ಕಿದೆ. ಅದು ಆರಂಭವಾಗುವವರೆಗೆ ಪರ್ಯಾಯ ಸಹಾಯವಾಣಿ ಸಂಖ್ಯೆಯನ್ನು ಶೀಘ್ರದಲ್ಲೇ ನೀಡಲಾಗುವುದು. ಭ್ರೂಣ ಹತ್ಯೆ ನಡೆಯುತ್ತಿರುವ ಮಾಹಿತಿ ನೀಡುವವರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು 50 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದೆ. ಎಲ್ಲ 56 ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಸ್ಕ್ಯಾನಿಂಗ್ ಕೇಂದ್ರಗಳ ಮೇಲ್ವಿಚಾರಣೆಗೆ ತಂಡ ರಚಿಸಲಾಗುವುದು ಎಂದರು.

ಕಾಂಗ್ರೆಸ್‌ನ ಉಮಾಶ್ರೀ, ಭ್ರೂಣ ಪರೀಕ್ಷೆ ಮಾಡಿ ಹೆಣ್ಣು ಭ್ರೂಣವನ್ನು ತೆಗೆದಾಗ ಇನ್ನೂ ಹೃದಯ ಮಿಡಿಯುತ್ತಲೇ ಇರುತ್ತದೆ. ಆದರೆ, ಅದನ್ನು ತೆಗೆದುಕೊಂಡು ಕಾವೇರಿ ಒಡಲಿಗೆ ಸೇರಿಸುತ್ತಾರೆ ಎಂದು ಭಾವುಕರಾದರು. ಬಿಜೆಪಿಯ ತೇಜಸ್ವಿನಿಗೌಡ, ಹೇಮಲತಾ ನಾಯಕ್, ವೈ.ಎಂ. ಸತೀಶ್, ಕೆ.ಎಸ್. ನವೀನ್, ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ, ಕಾಂಗ್ರೆಸ್ಸಿನ ಡಾ.ಡಿ.ತಿಮ್ಮಯ್ಯ, 'ಭ್ರೂಣ ಹತ್ಯೆ ತಡೆಗೆ ಕಠಿಣ ಕಾನೂನು ಜಾರಿಯ ಜೊತೆಗೆ ಸಾಮಾಜಿಕ ಕ್ರಾಂತಿಯ ಅಗತ್ಯವೂ ಇದೆ' ಎಂದು ಪ್ರತಿಪಾದಿಸಿದರು.

ಯಾವುದೇ ರಾಜ್ಯಗಳ ಜಿಎಸ್‌ಟಿ ಬಾಕಿ ಉಳಿದಿಲ್ಲ

ಕೆಲವು ರಾಜ್ಯಗಳು ಎಜಿ ವರದಿ ಸಲ್ಲಿಸಿಲ್ಲ



ನವದೆಹಲಿ, ಡಿ.12– ಯಾವುದೇ ರಾಜ್ಯಗಳ ಜಿಎಸ್‌ಟಿ ಬಾಕಿ ಬಾಕಿ ಉಳಿದಿಲ್ಲ. ಕೆಲವು ರಾಜ್ಯ ಸರ್ಕಾರಗಳು ತಮ್ಮ ಪಾಲಿನ ಹಣ ಬಿಡುಗಡೆಗೆ ಎಜಿಯ ದೃಢೀಕೃತ ಪ್ರಮಾಣಪತ್ರವನ್ನು ಸಲ್ಲಿಸಿಲ್ಲ ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

ರಾಜ್ಯ ಸಭೆಯಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರದಿಂದ ಜಿಎಸ್‌ಟಿ ಬಾಕಿ ಉಳಿದಿದೆ ಎಂಬ ಹೇಳಿಕೆ ಸರಿಯಲ್ಲ. ರಾಜ್ಯಗಳು ಎಜಿ ವರದಿ ಸಲ್ಲಿಸದೇ ಇರುವುದು ತಪ್ಪು ಎಂದರು.

ಎಜಿಯ (ಅಕೌಂಟೆಂಟ್ ಜನರಲ್) ಪ್ರಮಾಣೀಕರಣ ಕಡ್ಡಾಯವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸದಿದ್ದರೆ ಜಿಎಸ್‌ಟಿ ಬಾಕಿ ಬಿಡುಗಡೆ ಸಾಧ್ಯವಿಲ್ಲ. ಕೆಲವು ರಾಜ್ಯಗಳು ಎಜಿ ಪ್ರಮಾಣಪತ್ರ ಕಳುಹಿಸಿದ ನಂತರವೂ, ಅಂತಿಮ ಬಾಕಿ ಬಿಡುಗಡೆಯನ್ನು ಸ್ವಲ್ಪ ತಡೆಯುವಂತೆ ಕೇಳುತ್ತಾರೆ ಎಂದರು.

ತೃಣಮೂಲ ಕಾಂಗ್ರೆಸ್ ಸದಸ್ಯ ಸಾಕೇತ್ ಗೋಖಲೆ, ರಾಜ್ಯಗಳ, ವಿಶೇಷವಾಗಿ ಪಶ್ಚಿಮ ಬಂಗಾಳಕ್ಕೆ ಜಿಎಸ್‌ಟಿ ಬಾಕಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ನಿರ್ಮಲಾ ಸೀತಾರಾಮನ್, ನಿರ್ದಿಷ್ಟವಾಗಿ ಕೆಲವು ರಾಜ್ಯಗಳನ್ನು ಹೆಸರಿಸುತ್ತೇನೆ. ಇದರಿಂದ ಜನರ ಮನಸ್ಸಿನಲ್ಲಿ ಯಾವುದೇ ಸಂದೇಹವಿಲ್ಲ. 2022–23 ಆರ್ಥಿಕ ವರ್ಷದಲ್ಲಿ ಕರ್ನಾಟಕ ಹೊರತುಪಡಿಸಿ ಯಾವುದೇ ರಾಜ್ಯಗಳು ಎಜಿ ಪ್ರಮಾಣಪತ್ರವನ್ನು ನೀಡಿಲ್ಲ ಎಂದು ಸದನಕ್ಕೆ ಮಾಹಿತಿ ನೀಡಿದರು.

ಭಾರತಿ ವಿಷ್ಣುವರ್ಧನ್ ಆರೋಗ್ಯದಲ್ಲಿ ಏರುಪೇರು



ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಟಿ ಭಾರತೀ ವಿಷ್ಣುವರ್ಧನ್ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ ಎಂದು ಅಳಿಯ ಅನಿರುದ್ಧ್ ಮಾಹಿತಿ ನೀಡಿದ್ದಾರೆ. ಮಂಡಿ ನೋವಿನಿಂದ ಭಾರತಿ ಅಮ್ಮ ಹಾಸಿಗೆ ಹಿಡಿದಿದ್ದಾರೆ. ಅವರಿಗೆ ಊಟವನ್ನು ಹೆಚ್ಚಾಗಿ ತಿನ್ನಲು ಆಗುತ್ತಿಲ್ಲ. ನಿಶಕ್ತರಾಗಿದ್ದಾರೆ. ಅಮ್ಮನ ಆರೋಗ್ಯ ಸರಿಯಿಲ್ಲ. ಅನಾರೋಗ್ಯ ಕಾಡುತ್ತಿದೆ ಎಂದಿದ್ದಾರೆ. ಹಿಂದಿ, ಕನ್ನಡ, ತಮಿಳು, ತೆಲುಗು, ಮಲಯಾಳಂ ಐದೂ ಭಾಷೆಗಳಲ್ಲಿಯೂ ನಟಿಸಿರುವ ಭಾರತಿ ವಿಷ್ಣುವರ್ಧನ್ ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಕನ್ನಡದಲ್ಲಿ ನಟರಾದ ರಾಜ್‌ಕುಮಾರ್, ಕಲ್ಯಾಣ್‌ಕುಮಾರ್, ಉದಯ್‌ಕುಮಾರ್, ವಿಷ್ಣುವರ್ಧನ್, ಅನಂತನಾಗ್, ರಾಜೇಶ್ ಸಿನಿಮಾಗೆ ಜೋಡಿಯಾಗಿ ನಟಿಸಿ ಸೈ ಎನಿಸಿಕೊಂಡಿದ್ದಾರೆ.

ಪಡಿತರ ಅಕ್ಕಿ, ರಾಗಿ ಕೊಂಡೊಯ್ಯುತ್ತಿದ್ದ ಬಾಲಕ!

ಮೈಸೂರು, ಡಿ.12(ಆರ್‌ಕೆ)–ಬಡವರಿಗೆ ನ್ಯಾಯಬೆಲೆ ಅಂಗಡಿ ಮೂಲಕ ವಿತರಿಸಲಾದ ಪಡಿತರ ಅಕ್ಕಿ ಮತ್ತು ರಾಗಿ ಕೊಂಡೊಯ್ಯುತ್ತಿದ್ದ ಬಾಲಕನನ್ನು ಆಹಾರ ಇಲಾಖೆ ಅಧಿಕಾರಿಗಳು ಹಿಡಿದು ಆಲನಹಳ್ಳಿ ಠಾಣೆ ಪೊಲೀಸರಿಗೊಪ್ಪಿಸಿದ್ದಾರೆ.

ಇಂದು ಬೆಳಗ್ಗೆ 8 ಗಂಟೆ ವೇಳೆ ಆಲನಹಳ್ಳಿಯಿಂದ ಸ್ಕೂಟರ್‌ನಲ್ಲಿ ಪಡಿತರ ಅಕ್ಕಿ ಮತ್ತು ರಾಗಿಯನ್ನು ಚೀಲದಲ್ಲಿ ತುಂಬಿಕೊಂಡು ಹೋಗುತ್ತಿದ್ದದನ್ನು ಗಮನಿಸಿದ ಸಾರ್ವಜನಿಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಮಾಹಿತಿ ನೀಡಿದರು. ತಕ್ಷಣ ಸ್ಥಳಕ್ಕೆ ಧಾವಿಸಿದ ಆಹಾರ ನಿರೀಕ್ಷಕರು ಪರಿಶೀಲಿಸಿದಾಗ 17 ವರ್ಷದ ಬಾಲಕ ನ್ಯಾಯಬೆಲೆ ಅಂಗಡಿ ಮೂಲಕ ಬಿಪಿಎಲ್ ಕಾರ್ಡುದಾರರಿಗೆ ಸರ್ಕಾರ ನೀಡುವ ಅಕ್ಕಿ, ರಾಗಿಯನ್ನು ಕೊಂಡೊಯ್ಯುತ್ತಿದ್ದ ಎಂಬುದು ದೃಢಪಟ್ಟಿತು.

ಅವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿದ ಆಲನಹಳ್ಳಿ ಪೊಲೀಸರು, ಬಾಲಕ, ಪಡಿತರ ಹಾಗೂ ವಾಹನವನ್ನು ವಶಕ್ಕೆ ಪಡೆದರು. ಆತನನ್ನು ವಿಚಾರಣೆಗೊಳಪಡಿಸಿದಾಗ ತಾನು ಆಲನಹಳ್ಳಿಯ ಕೆಲವರಿಂದ ಖರೀದಿಸಿ ಉದಯಗಿರಿಯಲ್ಲಿ ತಮ್ಮ ಮನೆಗೆ ತೆಗೆದುಕೊಂಡು ಹೋಗುತ್ತಿದ್ದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ. ಅಪ್ರಾಪ್ತ ಬಾಲಕನನ್ನು ಸರ್ಕಾರಿ ಬಾಲಕರ ಬಾಲಮಂದಿರದ ವಶಕ್ಕೆ ಒಪ್ಪಿಸಿರುವ ಪೊಲೀಸರು, ಪ್ರಕರಣ ಹಿಂದೆ ಇರುವವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಸಿಎಂ, ತವರಿನಲ್ಲೇ ಬಡವರಿಗೆ ನೀಡುತ್ತಿರುವ ಪಡಿತರ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದರು.

ಅಪರಾಧ ತಡೆಗೆ ಪೊಲೀಸರೊಂದಿಗೆ ಸಹಕರಿಸಿ

● ನಾಗರಿಕರಲ್ಲಿ ಡಿಸಿಪಿ ಮುತ್ತುರಾಜ್ ಮನವಿ ● ಅಪರಾಧ ತಡೆ, ಪತ್ತೆಗೆ ಸಾರ್ವಜನಿಕರ ಸಹಕಾರ ಅವಶ್ಯ



ಸೈಬರ್ ಕ್ರೈಂ ಹೆಚ್ಚಳ; ಕಳವಳ

"ತಂತ್ರಜ್ಞಾನ ಬದಲಾದಂತೆ ಸಮಾಜದಲ್ಲಿ ಜರುಗುತ್ತಿರುವ ಅಪರಾಧ ಕೃತ್ಯಗಳ ಸ್ವರೂಪಗಳೂ ಬದಲಾಗುತ್ತಿವೆ. ಈ ಹಿಂದೆ ಸರಗಳ್ಳತನ, ಬೀಗ ಮುರಿದು ನಗ–ನಾಣ್ಯ, ಚಿನ್ನಾಭರಣ ಲೂಟಿ ಸೇರಿದಂತೆ ಈ ಸ್ವರೂಪದ ಅಪರಾಧಗಳು ನಡೆಯುತ್ತಿದ್ದವು. ಆದರೆ, ಇದೀಗ ಎಲ್ಲಾ ನಾಗರಿಕರ ವ್ಯವಹಾರಗಳು ಮೊಬೈಲ್ ಮೂಲಕವೇ ನಡೆಯುವುದರಿಂದ ಈ ಆಪರೇಷನ್‌ನಲ್ಲಿ ಸ್ವಲ್ಪ ಏರುಪೇರಾದರೂ ಲಕ್ಷಾಂತರ ರೂಗಳನ್ನು ಕ್ಷಣಾರ್ಧದಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಸೈಬರ್ ಕ್ರೈಂ ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕರು ಇದರ ಬಗ್ಗೆ ಸಾಕಷ್ಟು ಎಚ್ಚರದಿಂದಿರಿ. **–ಮುತ್ತುರಾಜ್, ಡಿಸಿಪಿ**

"ಈ ಹಿಂದೆ ಚಾಮುಂಡಿಬೆಟ್ಟದಲ್ಲಿ ನಡೆಯುತ್ತಿದ್ದ ಅನಾಚಾರಗಳಿಗೆ ಕಡಿವಾಣ ಹಾಕಲು ಚಾಮುಂಡಿ ಆಪರೇಷನ್ ಹೆಸರಿನಲ್ಲಿ ಬಂದೋಬಸ್ತ್ ಮಾಡಲಾಗಿತ್ತು ಈಗ ಈ ಆಪರೇಷನ್ ನಿಲ್ಲಿಸಲಾಗಿದೆ. ಇದನ್ನು ಪುನರ್ ಆರಂಭಿಸುವಂತೆ ಡಿಸಿಪಿ ಮುತ್ತುರಾಜ್ ಅವರಲ್ಲಿ ಬಿಜೆಪಿ ಮುಖಂಡ ಜೋಗಿ ಮಂಜು ಮನವಿ ಮಾಡಿಕೊಂಡರು. ಇದರ ಬಗ್ಗೆ ಗಮನಹರಿಸುವಂತೆ ಎಸಿಪಿ ಗಂಗಾಧರಸ್ವಾಮಿ ಅವರಿಗೆ ಡಿಸಿಪಿ ಮುತ್ತುರಾಜ್ ಸೂಚಿಸಿದರು.

ಮೈಸೂರು, ಡಿ.12(ಎಸ್‌ಪಿಎನ್)– ಭಾರತೀಯ ಸಂವಿಧಾನದಲ್ಲಿ ಅಡಕವಾಗಿರುವ ನೀತಿ–ನಿಯಮಗಳನ್ನು ಅತ್ಯಂತ ಗೌರವ ಪೂರ್ವಕವಾಗಿ ಪಾಲಿಸಿ, ದೇಶದ ಘನತೆ, ಸಾರ್ವಭೌಮತ್ವವನ್ನು ಉನ್ನತ ಸ್ಥಾನಕ್ಕೆ ತಲುಪಿಸುವ ಹೊಣೆ ನಮ್ಮ–ನಿಮ್ಮೆಲ್ಲರ ಜವಾಬ್ದಾರಿ ಎಂದು ಮೈಸೂರು ಉಪ ಪೊಲೀಸ್ (ಡಿಸಿಪಿ) ಆಯುಕ್ತ ಮುತ್ತುರಾಜ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರಿಂಗ್‌ಗಳ ಸಂಸ್ಥೆ ಸಭಾಂಗಣದಲ್ಲಿ ಲಕ್ಷ್ಮೀಪುರಂ ಪೊಲೀಸ್ ಠಾಣೆ, ಕೃಷ್ಣರಾಜ ವಿಭಾಗ ಹಾಗೂ ನಗರ ಪೊಲೀಸ್ ಆಯುಕ್ತರ ಕಚೇರಿ ಸಹ ಯೋಗದೊಂದಿಗೆ 'ಅಪರಾಧ ತಡೆ ಮಾಸಾಚರಣೆ' ಅಂಗವಾಗಿ ಮೊಹಲ್ಲಾ ಬಿಟ್ ಸಮಿತಿ ಸದಸ್ಯರೊಂದಿಗೆ ಆಯೋಜಿಸಿದ್ದ ಮೊಹಲ್ಲಾ ಸಭೆಯಲ್ಲಿ ಮಾತನಾಡಿದರು.

ಮೈಸೂರು ನಗರದಲ್ಲಿ ಅಪರಾಧ ತಡೆ ಮತ್ತು ನಿಯಂತ್ರಣಕ್ಕೆ ಸ್ಥಳೀಯರ ಸಹಕಾರ ಅತೀ ಮುಖ್ಯ. ಪೊಲೀಸರಿಗೆ ಅಪರಾಧ ಕೃತ್ಯ ಕುರಿತು ಸಾರ್ವಜನಿಕರು, ಸೂಕ್ತ ಮಾಹಿತಿ ನೀಡಿ ಬಹುಮಾನದೊಂದಿಗೆ ಪ್ರಶಂಸನಾ ಪತ್ರ ಪಡೆದುಕೊಳ್ಳುವಂತೆ ಮನವಿ ಮಾಡಿದ ಡಿಸಿಪಿ, ಸಾರ್ವಜನಿಕರು ಪೊಲೀಸ್ ಇಲಾಖೆಗೆ ಕಣ್ಣು ಮತ್ತು ಕಿವಿ ಇದ್ದಂತೆ. ನಿಮ್ಮಗಳ ನೆರವಿನಿಂದಲೇ ಅಪರಾಧ ಕೃತ್ಯಗಳ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ. ಆದ್ದರಿಂದ ಬಿಟ್ ಸಮಿತಿ ಸದಸ್ಯರು, ನಿಮ್ಮ ಮನೆಯ ಬಳಿಯ ಆಸು–ಪಾಸಿನಲ್ಲಿ ಯಾವುದೇ ರೀತಿಯ ಅಪರಾಧ ಕೃತ್ಯ ನಡೆದರೂ ಪೊಲೀಸರೊಂದಿಗೆ ಹಂಚಿಕೊಳ್ಳುವಂತೆ ಸಲಹೆ ನೀಡಿದರು.

ವ್ಯಕ್ತಿಯ ಪೂರ್ವಾಪರ ತಿಳಿದುಕೊಳ್ಳಿ: ಒಂದೇ ಬಡಾವಣೆಯಲ್ಲಿ ದೀರ್ಘಕಾಲ ವಾಸಿಸುವ ಸದಸ್ಯರು, ತಮ್ಮ ನೆರೆಹೊರೆ ವ್ಯಾಪ್ತಿಗೆ ಬರುವ ಹೊಸಬರ ಬಗ್ಗೆ ತಿಳಿದುಕೊಳ್ಳಬೇಕು. ಮನೆ ಮಾಲೀಕರು ಮನೆ ಬಾಡಿಗೆ ನೀಡುವ ಮುನ್ನ ಅವರ(ಬಾಡಿಗೆದಾರರ) ಪೂರ್ವಾಪರ ವಿಚಾರಿಸಬೇಕು. ಜತೆಗೆ ಕೆಲಸಕ್ಕೆ ಸೇರಿಸಿಕೊಳ್ಳುವವರ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು. ಬಾಡಿಗೆದಾರರ ಹಿನ್ನೆಲೆ ತಿಳಿದುಕೊಳ್ಳಲು ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ 620 ರೂ.ಗಳನ್ನು ಪಾವತಿಸಿ, ಬಾಡಿಗೆದಾರರ ನಡತೆ ಪ್ರಮಾಣ ಪತ್ರ ಪಡೆದುಕೊಳ್ಳುವಂತೆ ಸೂಚಿಸಿದರು.



ಸಭೆಯಲ್ಲಿ ಭಾಗವಹಿಸಿರುವ ಬೀಟ್ ಸಮಿತಿ ಸದಸ್ಯರನ್ನು ಚಿತ್ರದಲ್ಲಿ ಕಾಣಬಹುದು.

13 ಪ್ರಕರಣಗಳು ದಾಖಲಾಗಿವೆ: 2022ರಲ್ಲಿ ಮೈಸೂರು ನಗರ ವ್ಯಾಪ್ತಿಯಲ್ಲಿ 72 ಸರಗಳ್ಳತನವಾಗಿತ್ತು. ಅಷ್ಟು ಪ್ರಕರಣಗಳನ್ನು ಭೇದಿಸಿ, ಆ ಕಳ್ಳರೆಲ್ಲಾ ಇಂದು ಜೈಲುಪಾಲಾಗಿದ್ದಾರೆ. ಅಲ್ಲದೆ 2023ರಲ್ಲಿ ಕೇವಲ 12ರಿಂದ 13 ಪ್ರಕರಣಗಳು ದಾಖಲಾಗಿವೆ. ಏಕೆಂದರೆ, ಹಿಂದಿನ ಸರಗಳ್ಳರು ಜೈಲುಪಾಲಾಗಿರುವುದರಿಂದ ಈ ವರ್ಷದಲ್ಲಿ ಕಡಿಮೆ ಪ್ರಕರಣಗಳು ದಾಖಲಾಗಿವೆ. ಈ ಕೃತ್ಯಗಳನ್ನು ಶೂನ್ಯಕ್ಕೆ ತರಬೇಕಾದರೆ, ಎಲ್ಲಾ ಬಡಾವಣೆಗಳಲ್ಲಿ ಸಾಮೂಹಿಕವಾಗಿ ಸಿಸಿಟಿವಿಗಳನ್ನು ಹೆಚ್ಚು ಜನ ಸಂದಣಿ ಇರುವ ಕಡೆ ಅಳವಡಿಸಿಕೊಂಡು ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಸಹಕರಿಸಬೇಕು ಎಂದರು.

ಆಭರಣ ಪ್ರದರ್ಶಿಸುವ ಮಹಿಳೆಯರು ಎಚ್ಚರ: ಮಹಿಳೆಯರು ಬೆಲೆಬಾಳುವ ಒಡವೆಗಳನ್ನು ಧರಿಸಿ ಜನನಿಬಿಡ ಪ್ರದೇಶಗಳಲ್ಲಿ ಒಂಟಿಯಾಗಿ ತಿರುಗಾಡಬೇಡಿ. ಈ ಸಂದರ್ಭದಲ್ಲಿ ಒಡವೆಗಳನ್ನು ಬಟ್ಟೆಯಿಂದ ಮರೆಮಾಡಿಕೊಳ್ಳುವಂತೆ ಸಲಹೆ ನೀಡಿದ ಡಿಸಿಪಿ, ತಮ್ಮ ಮನೆಯ ಬಳಿ, ಅಕ್ಕ–ಪಕ್ಕದಲ್ಲಿ ಅಪರಿಚಿತ ವ್ಯಕ್ತಿಗಳು ನಿಮ್ಮ ಬಳಿ ಬಂದು ವಿಳಾಸ ಕೇಳುವಂತೆ ನಟಿಸುವಾಗ ಎಚ್ಚರವಿರಲಿ. ಹೊರಗಡೆ ಹೋಗಲು ನಗ–ನಾಣ್ಯ, ಚಿನ್ನಾಭರಣಗಳಿರುವ ಪರ್ಸ್, ವ್ಯಾನಿಟಿ ಬ್ಯಾಗ್ ಹಾಗೂ ಇತರೆ ಲಗೇಜ್‌ಗಳ ಬಗ್ಗೆ ನಿಗಾವಹಿಸಬೇಕು ಎಂದು ಎಚ್ಚರಿಸಿದರಲ್ಲದೆ, ಮನೆಯಿಂದ ಹೊರಗಡೆ ಹೋಗುವಾಗ ಅಕ್ಕ–ಪಕ್ಕದವರಿಗೆ ಅಥವಾ ಹತ್ತಿರ ಪೊಲೀಸ್ ಠಾಣೆಗೆ ತಿಳಿಸಿ, ಹೋಗುವಂತೆ ಸಲಹೆ ನೀಡಿದರು.

ಹೆಣ್ಣು ಮಕ್ಕಳಲ್ಲಿ ಬ್ಯಾಡ್ ಟಚ್, ಗುಡ್ ಟಚ್ ಬಗ್ಗೆ ಅರಿವಿರಲಿ: ಇತ್ತೀಚಿನ ದಿನಗಳಲ್ಲಿ ತೀರಾ ಹತ್ತಿರದವರಿಂದಲೇ ಚಿಕ್ಕ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳ ಪ್ರಕರಣಗಳು ಹೆಚ್ಚು ದಾಖಲಾಗುತ್ತಿವೆ. ಇದನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಪೋಕ್ಸೋ ಕಾಯ್ದೆ ಜಾರಿಗೆ ತಂದಿದೆ. ಇದರ ಬಗ್ಗೆ ಹೆಚ್ಚು ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಅಲ್ಲದೆ, ಮನೆಯಲ್ಲಿ ಚಿಕ್ಕ ಹೆಣ್ಣು ಮಗು ಅಥವಾ ಪ್ರೌಢಾವಸ್ಥೆಯ ಹೆಣ್ಣು ಮಕ್ಕಳಿದ್ದರೆ ಅವರಿಗೆ ಇದರ ಬಗ್ಗೆ ಎಚ್ಚರದಿಂದಿರುವಂತೆ ಅರಿವು ಮೂಡಿಸಬೇಕು. ದೊಡ್ಡವರು ಯಾರೂ ಇಲ್ಲದ ಸಂದರ್ಭದಲ್ಲಿ ಮನೆಯಲ್ಲಿ ಪರ ಪುರುಷ ಅಥವಾ ಯಾವುದೇ ಹತ್ತಿರದ ಸಂಬಂಧದ ಪುರುಷರಿದ್ದರೂ ಅವರೊಂದಿಗೆ ಯಾವ ರೀತಿ ಇರಬೇಕು. ಆ ಪುರುಷ ಸ್ಪರ್ಶದ ಬಗ್ಗೆ ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ಹೆಣ್ಣು ಮಕ್ಕಳಿಗೆ ತಿಳುವಳಿಕೆ ನೀಡುವುದು ಹಿರಿಯ ಮಹಿಳೆಯರ ಜವಾಬ್ದಾರಿ ಎಂದು ತಿಳಿಸಿದರು.

ಭ್ರೂಣ ಲಿಂಗ ಪತ್ತೆ ಹಚ್ಚುವುದು ಅಪರಾಧ: ಇತ್ತೀಚಿನ ದಿನಗಳಲ್ಲಿ ಭ್ರೂಣ ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಮಾಧ್ಯಮಗಳಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ. ಭ್ರೂಣ ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಅಪರಾಧವಾಗಿದ್ದು, ಇದರ ಬಗ್ಗೆ ಪೋಷಕರು ಎಚ್ಚರವಹಿಸಬೇಕು. ತಮ್ಮ ವೈಯಕ್ತಿಕ ವ್ಯವಹಾರಗಳ ಬಗ್ಗೆ ದೂರವಾಣಿಗಳ ಮೂಲಕ ಮಾಹಿತಿಗಳನ್ನು ಹಂಚಿಕೊಳ್ಳಬಾರದು. ನಿಮ್ಮ ಎಟಿಎಂ ಡೆಬಿಟ್/ಕ್ರೆಡಿಟ್ ಕಾರ್ಡ್ ಕುರಿತು ಯಾವುದೇ ಮಾಹಿತಿಗಳನ್ನು ಅಪರಿಚಿತರೊಂದಿಗೆ ಮಾಹಿತಿ ವಿನಿಮಯ ವಾಗಬಾರದು ಎಂದು ತಿಳಿಸಿದರು.

ಈ ವೇಳೆ ಸಭೆಯಲ್ಲಿ ಭಾಗಿಯಾಗಿರುವ ಬೀಟ್ ಸಮಿತಿ ಸದಸ್ಯರೊಂದಿಗೆ ಸಾರ್ವಜನಿಕರು ಪೊಲೀಸ್ ವ್ಯವಸ್ಥೆ ಸುಧಾರಣೆಗೆ ಅಗತ್ಯ ಸಲಹೆ ಸೂಚನೆಗಳನ್ನು ಕಾಲಕಾಲಕ್ಕೆ ನೀಡಿ, ತಮ್ಮ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳುವಂತೆ ಮನವಿ ಮಾಡಿದರು.

ಸಭೆಯಲ್ಲಿ ಕೆ.ಆರ್. ವಿಭಾಗದ ಎಸಿಪಿ ಗಂಗಾಧರ ಸ್ವಾಮಿ, ಲಕ್ಷ್ಮೀಪುರಂ ಠಾಣೆಯ ಇನ್ಸ್‌ಪೆಕ್ಟರ್ ರವಿ ಶಂಕರ್, ಅಶೋಕಪುರಂ ಠಾಣೆಯ ಇನ್ಸ್‌ಪೆಕ್ಟರ್ ರಮೇಶ್, ಕುವೆಂಪು ನಗರ ಠಾಣೆಯ ಇನ್ಸ್‌ಪೆಕ್ಟರ್ ಅರುಣ್, ಮೊಯಿನುದ್ದೀನ್ ಸೇರಿದಂತೆ ಠಾಣೆಯ ಪೊಲೀಸ್ ಅಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಹಾಸನ ನಿಲ್ದಾಣದಲ್ಲಿ ಕಾಮಗಾರಿ ಹಿನ್ನೆಲೆ; ನಾಳೆಯಿಂದ ಡಿ.22ರವರೆಗೆ ವಿವಿಧ ದಿನಾಂಕಗಳಲ್ಲಿ

ಬೆಂಗಳೂರು, ಮೈಸೂರು, ಮಂಗಳೂರು ಮಾರ್ಗಗಳ ರೈಲು ಸಂಚಾರದಲ್ಲಿ ವ್ಯತ್ಯಯ

ಮೈಸೂರು,ಡಿ.12(ಪಿಎಂ)–ಹಾಸನ ರೈಲು ನಿಲ್ದಾಣದಲ್ಲಿ ಯಾರ್ಡ್ ಪುನರ್ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಲುವಾಗಿ ನೈರುತ್ಯ ರೈಲ್ವೆ ಮೈಸೂರು ವಿಭಾಗವು ಡಿ.14ರಿಂದ 22ರವರೆಗೆ ವಿವಿಧ ದಿನಾಂಕಗಳಲ್ಲಿ ಬೆಂಗಳೂರು, ಮೈಸೂರು ಮತ್ತು ಮಂಗಳೂರು ಮಾರ್ಗಗಳಲ್ಲಿ ರೈಲುಗಳ ಸಂಚಾರದಲ್ಲಿ ಹಲವು ಮಾರ್ಪಾಡು ಮಾಡಿದೆ.

ರದ್ದು, ಭಾಗಶಃ ರದ್ದು ಹಾಗೂ ತಿರುವು ಸೇರಿದಂತೆ ರೈಲು ಸಂಚಾರ ಮಾರ್ಗಗಳಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ಲೈನ್ ಬ್ಲಾಕ್ ಮತ್ತು ಸಿಗ್ನಲ್ ಮತ್ತು ದೂರ ಸಂಪರ್ಕ ಬ್ಲಾಕ್ ಕ್ರಮವು ಡಿ.14ರಿಂದ 18ರವರೆಗೆ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಮತ್ತು ಸಂಜೆ 6ರಿಂದ ರಾತ್ರಿ 8ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಹಾಸನದ ಯಾವುದೇ ರೈಲು ಮಾರ್ಗಗಳಲ್ಲಿ ಸಂಚಾರ ಇರುವುದಿಲ್ಲ. ಅದೇ ರೀತಿ ಇಂಜಿನಿಯರಿಂಗ್ ಕೆಲಸಕ್ಕಾಗಿ ಡಿ.19ರಿಂದ 22ರವರೆಗೆ ಬೆಳಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ಟ್ರಾಫಿಕ್ ಬ್ಲಾಕ್ ಜಾರಿಯಲ್ಲಿ ಇರಲಿದ್ದು, ಈ ಅವಧಿಯಲ್ಲಿ ಯಾವುದೇ ರೈಲು ಸಂಚಾರ ಇರುವುದಿಲ್ಲ.

ರೈಲು ಸಂಚಾರ ರದ್ದು: ಡಿ.14ರಿಂದ 22ರವರೆಗೆ ರೈಲು ಸಂಖ್ಯೆ 06214 ಮೈಸೂರು–ಅರಸೀಕೆರೆ, 06213 ಅರಸೀಕೆರೆ–ಮೈಸೂರು, 16207 ಯಶವಂತಪುರ–ಮೈಸೂರು, 16208 ಮೈಸೂರು–ಯಶವಂತಪುರ, 16222 ಮೈಸೂರು–ತಾಳಗುಪ್ಪ, 06268 ಮೈಸೂರು–ಅರಸೀಕೆರೆ, 06267 ಅರಸೀಕೆರೆ–ಮೈಸೂರು, 06269 ಮೈಸೂರು–ಎಸ್‌ಎಂವಿಟಿ ಬೆಂಗಳೂರು ರೈಲು ಸಂಚಾರ ರದ್ದುಗೊಳಿಸಲಾಗಿದೆ.

ಜೊತೆಗೆ 16221 ತಾಳಗುಪ್ಪ–ಮೈಸೂರು ರೈಲು ಡಿ.15ರಿಂದ 23ರವರೆಗೆ, 16511 ಕೆಎಸ್‌ಆರ್ ಬೆಂಗಳೂರು–ಕಣ್ಣೂರು ರೈಲು ಡಿ.16ರಿಂದ 20ರವರೆಗೆ, 16512 ಕಣ್ಣೂರು–ಕೆಎಸ್‌ಆರ್ ಬೆಂಗಳೂರು ರೈಲು ಡಿ.17ರಿಂದ 21ರವರೆಗೆ, 16595 ಕೆಎಸ್‌ಆರ್ ಬೆಂಗಳೂರು–ಕಾರವಾರ ರೈಲು ಡಿ.16ರಿಂದ 20ರವರೆಗೆ, 16596 ಕಾರವಾರ–ಕೆಎಸ್‌ಆರ್ ಬೆಂಗಳೂರು ರೈಲು ಡಿ.17ರಿಂದ 21ರವರೆಗೆ, 06270 ಎಸ್‌ಎಂವಿಟಿ ಬೆಂಗಳೂರು–ಮೈಸೂರು ರೈಲು ಡಿ.13ರಿಂದ 21ರವರೆಗೆ, 16539 ಯಶವಂತಪುರ–ಮಂಗಳೂರು ಜೂ. ರೈಲು ಡಿ.16ರಂದು, 16540 ಮಂಗಳೂರು ಜೂ.–ಯಶವಂತಪುರ ರೈಲು ಡಿ.17ರಂದು, 16575 ಯಶವಂತಪುರ–ಮಂಗಳೂರು ಜೂ. ರೈಲು ಸಂಚಾರವನ್ನು ಡಿ.14, 17, 19 ಮತ್ತು 21ರಂದು ರದ್ದುಪಡಿಸಲಾಗಿದೆ. ಅಂತೆಯೇ 16576 ಮಂಗಳೂರು ಜೂ.–ಯಶವಂತ ಪುರ ರೈಲು ಡಿ.15, 18, 20 ಮತ್ತು 22ರಂದು, 16515 ಯಶವಂತಪುರ–ಕಾರವಾರ ರೈಲು ಡಿ.13, 15, 18, 20 ಮತ್ತು 22ರಂದು, 16516 ಕಾರವಾರ–ಯಶವಂತಪುರ ರೈಲು ಡಿ.14, 16, 19, 21, 23ರಂದು ಸಂಚಾರ ರದ್ದುಗೊಂಡಿದೆ.



ಭಾಗಶಃ ಸಂಚಾರ ರದ್ದುಗೊಂಡಿರುವ ರೈಲು ಮಾರ್ಗ: 16225 ಮೈಸೂರು–ಶಿವಮೊಗ್ಗ ಟೌನ್ ರೈಲು ಮೈಸೂರು–ಅರಸಿಕೆರೆ ಮಾರ್ಗ ನಡುವೆ ಸಂಚಾರ ರದ್ದು ಮಾಡಲಾಗಿದೆ. ಅದೇ ರೀತಿ 16226 ಶಿವಮೊಗ್ಗ ಟೌನ್–ಮೈಸೂರು ರೈಲು ಡಿ.14ರಿಂದ 22ರವರೆಗೆ ಅರಸೀಕೆರೆ–ಮೈಸೂರು ಮಾರ್ಗ, ಡಿ.14ರಿಂದ 22ರವರೆಗೆ (ಭಾನುವಾರ ಹೊರತುಪಡಿಸಿ) 06583 ಕೆಆರ್‌ಎಸ್ ಬೆಂಗಳೂರು–ಹಾಸನ ರೈಲು ಶಾಂತಿಗ್ರಾಮ ಮತ್ತು ಹಾಸನ ಮಾರ್ಗ, 06584 ಹಾಸನ–ಕೆಆರ್‌ಎಸ್ ಬೆಂಗಳೂರು ರೈಲು ಹಾಸನ–ಶಾಂತಿಗ್ರಾಮ ಮಾರ್ಗ ನಡುವೆ, 22679 ಯಶವಂತಪುರ–ಹಾಸನ ರೈಲು ಡಿ.14ರಿಂದ 21ರವರೆಗೆ ಶ್ರವಣಬೆಳಗೊಳ–ಹಾಸನ ಮಾರ್ಗ, 22680 ಹಾಸನ–ಯಶವಂತಪುರ ರೈಲು ಡಿ.15ರಿಂದ 22ರವರೆಗೆ ಹಾಸನ–ಶ್ರವಣಬೆಳಗೊಳ ಮಾರ್ಗ, 11311 ಸೋಲಾಪುರ–ಹಾಸನ ರೈಲು ಡಿ.13ರಿಂದ 21ರವರೆಗೆ ಯಲಹಂಕ–ಹಾಸನ ಮಾರ್ಗ, 11312 ಹಾಸನ–ಸೋಲಾಪುರ ರೈಲು ಡಿ.14ರಿಂದ 22ರವರೆಗೆ ಹಾಸನ–ಯಲಹಂಕ ಮಾರ್ಗದಲ್ಲಿ ಸಂಚಾರ ರದ್ದುಗೊಳಿಸಲಾಗಿದೆ.

ರೈಲುಗಳ ತಿರುವು: 16585 ಎಸ್‌ಎಂವಿಟಿ ಬೆಂಗಳೂರು–ಮುರುಡೇಶ್ವರ್ ರೈಲು ಡಿ.14ರಿಂದ 16ರವರೆಗೆ ಬೆಂಗಳೂರು ಕ್ಯಾಂಟ್–ಹೊಳೆನರಸೀಪುರ ನಿಲ್ದಾಣಗಳ ನಡುವೆ ಸಂಚಾರ ರದ್ದುಗೊಂಡಿದ್ದು, ಎಸ್‌ಎಂವಿಟಿ ಬೆಂಗಳೂರು, ಯಶವಂತಪುರ ಬೈಪಾಸ್, ಚಿಕ್ಕಬಾಣಾವರ, ನೆಲ ಮಂಗಲ, ಶ್ರವಣಬೆಳಗೊಳ ಮತ್ತು ಹಾಸನ ನಿಲ್ದಾಣಗಳ ಮೂಲಕ ಸಂಚಾರ ಮಾಡಲಿದೆ. ಅದೇ ರೀತಿಯಲ್ಲಿ ಇದೇ ರೈಲು ಡಿ.17ರಿಂದ 22ರವರೆಗೆ ಎಸ್‌ಎಂವಿಟಿ ಬೆಂಗಳೂರು, ಯಶವಂತಪುರ ಬೈಪಾಸ್, ತುಮಕೂರು, ಅರಸೀಕೆರೆ, ಹಾಸನ ರೈಲು ನಿಲ್ದಾಣದ ಮಾರ್ಗದಲ್ಲಿ ಸಂಚರಿಸಲಿದೆ.

ಅಂತೆಯೇ 16586 ಸಂಖ್ಯೆ ಮುರುಡೇಶ್ವರ್–ಎಸ್‌ಎಂವಿಟಿ ಬೆಂಗಳೂರು ರೈಲು ಡಿ.14ರಿಂದ 16ರವರೆಗೆ ಹಾಸನ, ಶ್ರವಣಬೆಳಗೊಳ, ನೆಲಮಂಗಲ, ಚಿಕ್ಕಬಾಣಾವರ, ಯಶವಂತಪುರ ಬೈಪಾಸ್ ಮತ್ತು ಎಸ್‌ಎಂವಿಟಿ ಬೆಂಗಳೂರು ಮಾರ್ಗದಲ್ಲಿ ಸಂಚರಿಸಲಿದ್ದು, ಅದೇ ರೀತಿ ಡಿ.17ರಿಂದ 22ರವರೆಗೆ ಹಾಸನ, ಅರಸೀಕೆರೆ, ತುಮಕೂರು, ಯಶವಂತಪುರ ಬೈಪಾಸ್ ಮತ್ತು ಎಸ್‌ಎಂವಿಟಿ ಬೆಂಗಳೂರು ನಿಲ್ದಾಣಗಳಲ್ಲಿ ಸಂಚರಿಸಲಿದೆ. ಹೊಳೆನರಸೀಪುರ– ಬೆಂಗಳೂರು ಕ್ಯಾಂಟ್ ನಡುವೆ ಸಂಚಾರ ರದ್ದಾಗಿದೆ. ರೈಲ್ವೆ ಸಚಿವಾಲಯವು ಹಾಸನ ನಿಲ್ದಾಣದಲ್ಲಿ ಸದರಿ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಿದೆ. ಸ್ಟ್ಯಾಂಡರ್ಡ್ 1ರಿಂದ 3ರವರೆಗೆ ಇಂಟರ್ ಲಾಕಿಂಗ್ ಅನ್ನು ನವೀಕರಿಸುವುದರಿಂದ ಎಲ್ಲಾ 4 ದಿಕ್ಕುಗಳಲ್ಲಿ ಏಕಕಾಲದಲ್ಲಿ ರೈಲುಗಳು ಆಗಮಿಸಲು ಮತ್ತು ನಿರ್ಗಮಿಸಲು ಅವಕಾಶವಾಗಲಿದೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಪ್ರಕಟಣೆ ತಿಳಿಸಿದೆ.

ಸುಶಾಂತ್ ಸಿಂಗ್ ಮ್ಯಾನೇಜರ್ ದಿಶಾ ಸಾಲಿಯಾನ್ ಸಾವಿನ ಪ್ರಕರಣ ಎಸ್‌ಐಟಿ ತನಿಖೆಗೆ



ಮುಂಬೈ, ಡಿ.12– ದಿವಂಗತ ನಟ ಸುಶಾಂತ್ ಸಿಂಗ್ ರಜಪೂತ್ ಅವರ ಮ್ಯಾನೇಜರ್ ದಿಶಾ ಸಾಲಿಯಾನ್ ಸಾವಿನ ಕುರಿತು ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆಗೆ ರಾಜ್ಯ ಸರ್ಕಾರ ಮಂಗಳವಾರ ಆದೇಶಿಸಿದೆ.

ಸಾಲಿಯಾನ್ ಸಾವಿನ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗುವುದು ಎಂದು ಕಳೆದ ವರ್ಷ ಡಿಸೆಂಬರ್‌ನಲ್ಲಿ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದರು.

ದಿಶಾ ಸಾಲಿಯಾನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವರ್ಷದ ಅಕ್ಟೋಬರ್‌ನಲ್ಲಿ ಬಿಜೆಪಿ ನಾಯಕ ನಿತೀಶ್ ರಾಣೆ ಅವರು ಶಿವಸೇನೆ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಅವರನ್ನು ಗುರಿಯಾಗಿಸಿಕೊಂಡಿದ್ದರು. ಈ ಪ್ರಕರಣಕ್ಕೆ ತಮ್ಮ ಮಗನ ಹೆಸರಿಗೆ ಸಂಬಂಧವಿದೆಯೇ ಎಂದು ಅವರ ತಂದೆ ಮತ್ತು ಶಿವಸೇನೆಯ ಹಿರಿಯ ನಾಯಕ ಉದ್ಧವ್ ಠಾಕ್ರೆ ಹೇಳಬೇಕು ಎಂದು ಅವರು ಒತ್ತಾಯಿಸಿದ್ದರು.

ಮುಂಬೈನ ಮಲಾಡ್ ಪ್ರದೇಶದಲ್ಲಿ ಬಹುಮಹಡಿ ಕಟ್ಟಡದಿಂದ ಬಿದ್ದು ಸಾಲಿಯಾನ್ 2020ರ ಜೂನ್ 8ರಂದು ಸಾವನ್ನಪ್ಪಿದ್ದರು. ಇದಾದ ಒಂದು ವಾರದ ನಂತರ, ಸುಶಾಂತ್ ಸಿಂಗ್ ರಜಪೂತ್ ಅವರ ನಿವಾಸದ ಸೀಲಿಂಗ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ಧರಣಿ



ಮೈಸೂರು,ಡಿ.12(ಜಿಎ)–ವಕೀಲರ ಸಂರಕ್ಷಣೆ ಕಾಯ್ದೆ ಜಾರಿಗೆ ಒತ್ತಾಯಿಸಿ ಮೈಸೂರು ವಕೀಲರ ಸಂಘ ಕಲಾಪದಿಂದ ಹೊರಗೆ ಉಳಿದು ನಗರದ ಕೃಷ್ಣ ಬುಲೇವಾರ್ಡ್ ರಸ್ತೆಯಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮುಂಭಾಗ ಮಂಗಳವಾರ ಧರಣಿ ನಡೆಸಿತು.

ಈ ವೇಳೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಮಾತನಾಡಿ, ರಾಜ್ಯದಲ್ಲಿ ವಕೀಲರ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯುತ್ತಿದ್ದು, ವಕೀಲರಿಗೆ ರಕ್ಷಣೆ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂಘವು ಭೇಟಿ ಮಾಡಿ ಕಾಯ್ದೆಯನ್ನು ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿ, ಅನುಮೋದನೆ ಪಡೆಯುವಂತೆ ಮನವಿ ಸಲ್ಲಿಸಲಾಗಿದ್ದು, ಅವರಿಂದ ಸಕರಾತ್ಮಕ ಪ್ರಕ್ರಿಯೆ ದೊರೆತಿದೆ ಎಂದರು.

ಮುಖ್ಯಮಂತ್ರಿಯವರು ವಕೀಲರಿಗೆ ಭರವಸೆ ನೀಡಿದಂತೆ ಪ್ರಸಕ್ತ ಅಧಿವೇಶನದಲ್ಲಿ ವಕೀಲರ ಸಂರಕ್ಷಣಾ ಕಾಯಿದೆಗೆ ಅನಮೋದನೆ ನೀಡಬೇಕು. ಅಧಿವೇಶನ ಅಂತ್ಯಗೊಳ್ಳುವ ಮುನ್ನ ಕಾಯ್ದೆಯನ್ನು ಜಾರಿಗೊಳಿಸಬೇಕು. ಅಲ್ಲಿಯವರೆಗೂ ನಮ್ಮ ಧರಣಿ ಮುಂದುವರೆಯಲಿದ್ದು, ಎಲ್ಲಾ ವಕೀಲರು ಸ್ವಯಂಪ್ರೇರಣೆಯಿಂದ ಕಲಾಪದಿಂದ ಹೊರಗುಳಿದಿದ್ದಾರೆ ಎಂದರು.

ಧರಣಿಯಲ್ಲಿ ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಖಜಾಂಚಿ ಎಚ್.ಎಸ್.ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಎಂ. ನಾಗೇಶ್, ಮಹಿಳಾ ಕಾರ್ಯದರ್ಶಿ ಬಿ.ಎಸ್. ಭಾಗ್ಯಮ್ಮ ಇನ್ನಿತರರು ಭಾಗಿಯಾಗಿದ್ದರು.

ನಕ್ಕರೆ ಅದೇ ಸ್ವರ್ಗ

ತಾಯಿ : (ಮಗಳಿಗೆ) "ಪರೀಕ್ಷೆಗೆ ರೆಡಿಯಾಗಲು ಬುಕ್ ಓದ್ತಾ ಇದ್ದೀಯಾ?"

ಮಗಳು : (ಕಂಪ್ಯೂಟರ್ ಮುಂದೆ ಕುಳಿತು) "ಎಸ್ ಮಮ್ಮಿ, ಫೇಸ್‌ಬುಕ್ ಓದ್ತಾ ಇದ್ದೀನಿ"

ಮೈಸೂರು ಮಿತ್ರ

ಬುಧವಾರ, 13 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಆಧ್ಯಾತ್ಮವೆಂದರೆ ಹೆಚ್ಚಿನದೇನಲ್ಲ. ವ್ಯಕ್ತಿ ಸಾತ್ವಿಕನಾಗಿ, ಸದಾ ಕ್ರಿಯಾಶೀಲನಾಗಿ, ಸಮಷ್ಟಿ ದೃಷ್ಟಿ ಬೆಳೆಸಿಕೊಂಡು ಬದುಕುವುದೇ ಆಗಿದೆ.

–ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನದಲ್ಲ ಸರ್ವ ಆಸ್ತಿ, ಒಳ್ಳೆಯದಲ್ಲ ಗರ್ವ ಜಾಸ್ತಿ

ನಿಮ್ಮ ಪತ್ರಗಳು

ನಾಡು ಮೆಚ್ಚಿದ ಗಜರಾಜ ಅರ್ಜುನ

ಮಾನ್ಯರೆ,



1960ರಲ್ಲಿ ಜನಿಸಿದ ಅರ್ಜುನ 1968ರಲ್ಲಿ ಕರ್ನಾಟಕದ ಪಶ್ಚಿಮ ಘಟ್ಟಗಳ ಕಾಕನಕೋಟೆ ಕಾಡಿನ ಖೆಡ್ಡಾ ಕಾರ್ಯಾಚರಣೆಯಲ್ಲಿ ಸಿಕ್ಕ ಆನೆಯೇ ಕರ್ನಾಟಕದ ಹೆಮ್ಮೆಯ ಎಲ್ಲರ ಅಚ್ಚುಮೆಚ್ಚಿನ 63 ವರ್ಷದ ಅರ್ಜುನ, ಲಕ್ಷಾಂತರ ಜನರಿಗೆ ಅರ್ಜುನ ಇಲ್ಲದ ದುಃಖವನ್ನು ಇನ್ನೂ ಸಹಿಸಿಕೊಳ್ಳಲಾಗುತ್ತಿಲ್ಲ. ಅದರ ಸವಿನೆನಪುಗಳು ಮಾವುತರು, ಜನರು, ಅಧಿಕಾರಿ ವರ್ಗದವರ ಮನಸ್ಸಿನಲ್ಲಿ ಅಚ್ಚಳಿಯದೆ ಅಜರಾಮರವಾಗಿ ಉಳಿದಿದೆ. ಅಷ್ಟರ ಮಟ್ಟಿಗೆ ಎಲ್ಲರೊಂದಿಗೆ ಪ್ರೀತಿ, ವಾತ್ಸಲ್ಯದಿಂದ ಇರುತ್ತಿದ್ದ ವಿಶ್ವ ವಿಖ್ಯಾತ ಮೈಸೂರು ದಸರಾದ ಬಹು ಆಕರ್ಷಣೀಯವಾದ ಜಂಬೂಸವಾರಿಯಲ್ಲಿ ಜಗನ್ಮಾತೆ ಶ್ರೀ ಚಾಮುಂಡೇಶ್ವರಿ ತಾಯಿ ವಿಗ್ರಹ ಇರುವ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಲೀಲಾಜಾಲವಾಗಿ ಹೊತ್ತು ಪ್ರಮುಖ ರಸ್ತೆಯಲ್ಲಿ ಗಜಗಾಂಭೀರ್ಯದಿಂದ ತನ್ನ ವಿವಿಧ ಬಣ್ಣ ಬಣ್ಣದ ಚಿತ್ತಾರಗಳಿಂದ ಮದುವಣಗಿತ್ತಿಯಂತೆ ಅಲಂಕೃತಗೊಂಡು ತನ್ನ ಕಣ್ಣೋಟದಿಂದ ಎಲ್ಲರನ್ನು ಆಕರ್ಷಿಸುವಂತೆ ಹೆಜ್ಜೆಯನ್ನು ಹಾಕುತ್ತಿದ್ದರೆ ಲಕ್ಷಾಂತರ ಜನರು ಅರ್ಜುನನಿಗೆ ಮನಸೋಲುತ್ತಿದ್ದರು. ಎಷ್ಟು ಬಾರಿ ನೋಡಿದರೂ ಇನ್ನಷ್ಟು ನೋಡಬೇಕೆಂಬ ಆಸೆ ಮತ್ತು ಉತ್ಸಾಹ ಮನಸ್ಸಿನಲ್ಲಿ ಮೂಡುತ್ತಿತ್ತು. ಅಷ್ಟರಮಟ್ಟಿಗೆ ಜನರೊಂದಿಗೆ ಭಾವನಾತ್ಮಕ ಸಂಬಂಧವನ್ನು ಅರ್ಜುನ ಹೊಂದಿದ್ದನು.

ಅವನ ದಾರುಣ ಸಾವು ಅಂತ್ಯಕ್ರಿಯೆ ಸಮಯದಲ್ಲಿ ಲಕ್ಷಾಂತರ ಜನರ ಕಣ್ಣುಗಳು ಒದ್ದೆ ಆಗಿದ್ದವು. ಮೈಸೂರು ದಸರಾ ಅಂಬಾರಿಯನ್ನು 2012 ರಿಂದ 2019 ರವರೆಗೆ ಅಂದರೆ ಎಂಟು ವರ್ಷಗಳು ಹೊತ್ತಿದ್ದಾನೆ. ಬಲಿಷ್ಠ, ದೈತ್ಯ ಕಾಡಾನೆಗಳ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯವರು ಧೈರ್ಯಶಾಲಿಯಾಗಿದ್ದ ಅರ್ಜುನನನ್ನು ಅನೇಕ ಸಂದರ್ಭಗಳಲ್ಲಿ ಬಳಸಿಕೊಂಡಿರುವುದನ್ನು ನೆನಪಿಸಿಕೊಳ್ಳಬಹುದು. ಪುಂಡಾಟದ ಆನೆಗಳಿಗೆ ಸಿಂಹಸ್ವಪ್ನವಾಗಿದ್ದ, ಇಂಥದ್ದೇ ಒಂದು ಕಾರ್ಯಾಚರಣೆಯು ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಯಸಳೂರು ಅರಣ್ಯದಲ್ಲಿ ನಡೆಯುತ್ತಿತ್ತು. ಅರಣ್ಯ ಇಲಾಖೆಯ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ಸೂಕ್ತ ಮುನ್ನೆಚ್ಚರಿಕೆ ಇಲ್ಲದೆ ಅರವಳಿಕೆ ಚುಚ್ಚುಮದ್ದು ನೀಡುವ ಸಂದರ್ಭದಲ್ಲಿ ಅರ್ಜುನನಿಗೆ ಬಲವಾದ ಪೆಟ್ಟು ಬಿದ್ದು ವೀರ ಮರಣವನ್ನು ಹೊಂದಿರುವುದು ಜನರಿಗೆ ಅರಗಿಸಿಕೊಳ್ಳಲಾಗದ ದುಃಖವಾಗಿದೆ. ಅದೇನೇ ಇದ್ದರೂ ಸೂಕ್ತ ತನಿಖೆ ನಡೆಸಿ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ನೀಡಬೇಕೆಂದು ಸಾರ್ವಜನಿಕರ ಅಭಿಪ್ರಾಯವಾಗಿದೆ.

–ಪರಶಿವಮೂರ್ತಿ ಎನ್.ಪಿ, ನಂಜೇಪುರ, ಸರಗೂರು ತಾ.

ವಿವಿ ಪುರಂ ವೃತ್ತಕ್ಕೆ ಡಾಂಬರೀಕರಣ ಮಾಡಿ



ಮಾನ್ಯರೆ,

ಮೈಸೂರಿನ ವಿವಿ ಮೊಹಲ್ಲಾದ ವಿವಿ ಪುರಂ ಪೊಲೀಸ್ ಠಾಣೆ ಎದುರಿನ ವೃತ್ತಕ್ಕೆ ಡಾಂಬರೀಕರಣ ಮಾಡುವ ಮೂಲಕ ಕಾಯಕಲ್ಪ ನೀಡಬೇಕಿದೆ. ಕೆಆರ್‌ಎಸ್ ರಸ್ತೆ ಮತ್ತು ಟೆಂಪಲ್ ರಸ್ತೆ ಸಂದಿಸುವ ಈ ವೃತ್ತದ ಸಮೀಪದಲ್ಲಿ ಶ್ರೀಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನವೂ ಇದೆ. ಸದರಿ ಈ ಎರಡು ರಸ್ತೆಗಳಲ್ಲಿಯೂ ಸಂಚಾರ ದಟ್ಟಣೆ ಸಾಮಾನ್ಯ. ಕೆಆರ್‌ಎಸ್‌ನತ್ತ ಸಾಗುವ ಪ್ರವಾಸಿಗರು, ಇನ್ನಿತರ ಭಾಗಗಳಿಗೆ ತೆರಳುವ ವಾಹನಗಳು ಮಾತ್ರವಲ್ಲದೆ, ನಗರದ ವಿವಿಧ ಭಾಗಗಳಿಗೆ ಈ ವೃತ್ತದ ಮೂಲಕ ಸಾಗುವ ವಾಹನಗಳ ಸಂಖ್ಯೆಯೂ ಕಡಿಮೆಯೇನಿಲ್ಲ. ಇಂತಹ ಪ್ರಮುಖ ವೃತ್ತದಲ್ಲೀಗ ಸುಗಮ ಸಂಚಾರ ಕಷ್ಟಸಾಧ್ಯವಾಗಿದೆ. ಡಾಂಬರೀಕರಣಗೊಂಡು ಸುಸ್ಥಿತಿಯಲ್ಲಿದ್ದ ಈ ವೃತ್ತದಲ್ಲಿ ನಗರಪಾಲಿಕೆಯು ಪೈಪ್‌ಲೈನ್ ಕಾಮಗಾರಿಗಾಗಿ ಅಗೆದು ಜಲ್ಲಿಕಲ್ಲಿನಿಂದ ಮುಚ್ಚಿ ಕೈತೊಳೆದುಕೊಂಡಿದೆ. ಇದರ ಪರಿಣಾಮ ವೃತ್ತದಲ್ಲಿ ಭಾರೀ ಪ್ರಮಾಣದ ಗುಂಡಿ ನಿರ್ಮಾಣಗೊಂಡಿದ್ದು, ವಾಹನ ಸವಾರರು ಸುರಕ್ಷಿತವಾಗಿ ಸಂಚರಿಸಲಾಗದೇ ಪರದಾಡುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ದ್ವಿಚಕ್ರ ವಾಹನ ಸವಾರರಂತೂ ಇಲ್ಲಿ ಆತಂಕದಲ್ಲೇ ಸಾಗಬೇಕಿದೆ. ನಗರಪಾಲಿಕೆ ಆಯುಕ್ತರು ಕೂಡಲೇ ಈ ವೃತ್ತಕ್ಕೆ ಡಾಂಬರೀಕರಣ ಮಾಡಿಸಿ, ಇಲ್ಲಿ ಹಾದು ಹೋಗುವ ವಾಹನ ಸವಾರರ ಸುರಕ್ಷತೆಗೆ ಆದ್ಯತೆ ನೀಡಬೇಕು.

–ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಡಿಸೆಂಬರ್ 12ರ ಮಂಗಳವಾರದ 'ಮೈಸೂರು ಮಿತ್ರ' ಸಂಚಿಕೆಯ ಮುಖಪುಟದಲ್ಲಿ ಪ್ರಧಾನ ಶೀರ್ಷಿಕೆ **'ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನದ 370ನೇ ವಿಧಿ ರದ್ದು; ಕೇಂದ್ರದ ನಿರ್ಧಾರ ಎತ್ತಿಹಿಡಿದ ಸುಪ್ರೀಂಕೋರ್ಟ್'** ಅಡಿ ಪ್ರಕಟವಾಗಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ನ್ಯಾಯಾಧೀಶರ ಭಾವಚಿತ್ರಗಳಲ್ಲಿ ಮೊದಲಿಬ್ಬರು (ಎಡದಿಂದ) ನ್ಯಾಯಮೂರ್ತಿಗಳ ಭಾವಚಿತ್ರಗಳಡಿ ಹೆಸರು ಅದಲು–ಬದಲಾಗಿದ್ದು, ಅದನ್ನು ಕ್ರಮವಾಗಿ ನ್ಯಾಯಮೂರ್ತಿ ಬಿ.ಆರ್.ಗವಾಯ್, ನ್ಯಾಯಮೂರ್ತಿ ಎಸ್.ಕೆ.ಕೌಲ್ ಎಂದು ಓದಿಕೊಳ್ಳುವುದು. ಕಣ್ತಪ್ಪಿನಿಂದಾದ ಪ್ರಮಾದಕ್ಕೆ ವಿಷಾದಿಸುತ್ತೇವೆ. **–ಸಂಪಾದಕ**



ನ್ಯಾಯಮೂರ್ತಿ ಬಿ.ಆರ್.ಗವಾಯ್ | ನ್ಯಾಯಮೂರ್ತಿ ಎಸ್.ಕೆ.ಕೌಲ್

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಯೋಗವೆಂಬ ದರ್ಶನ


ಭಾರತವು ದಾರ್ಶನಿಕರ ನಾಡು. ಸತ್ಯವನ್ನು ನಾನಾ ಮುಖಗಳಿಂದ ನೋಡಲು ಸಾಧ್ಯವೆಂದು ನಂಬಿದ ವೈಚಾರಿಕರ ಬೀಡು. ಇಲ್ಲಿ ಕಣ್ಣಿಗೆ ಕಾಣುವುದನ್ನು ಮಾತ್ರ ನಂಬಬೇಕು ಎಂದು ವಾದಿಸುತ್ತಿದ್ದ ನಾಸ್ತಿಕರೂ ನಮ್ಮ ನೋಟಕ್ಕೆ ನಿಲುಕದ ಸತ್ಯವೂ ಇದೆ ಎಂದು ನಂಬಿದ್ದ ಆಸ್ತಿಕರೂ ಇದ್ದರು. ನಾಸ್ತಿಕರಲ್ಲಿ ಲೋಕಾಯತ ದರ್ಶನವನ್ನು ಪ್ರತಿಪಾದಿಸಿದ ಚಾರ್ವಾಕನು ಅಗ್ರಗಣ್ಯ. ತಾನು ಆಸ್ತಿಕನಲ್ಲ, ನಾಸ್ತಿಕ ಎಂದು ಧೈರ್ಯದಿಂದ ಹೇಳಿದವನು ಅವನು ಮಾತ್ರ. ಉಳಿದವರು ಯಾರೂ ತಮ್ಮನ್ನು ನಾಸ್ತಿಕರೆಂದು ಕರೆದುಕೊಳ್ಳಲಿಲ್ಲ. ದೇಹದಿಂದ ಭಿನ್ನವಾದ ಶಾಶ್ವತವಾದ ಆತ್ಮವಿದೆ ಎಂದು ನಂಬುವವರು ಆಸ್ತಿಕರು, ಅಂತಹ ಆತ್ಮವಿಲ್ಲ ಎಂದು ಹೇಳುವವರು ನಾಸ್ತಿಕರು ಎಂದು ಪರಿಭಾಷೆಯನ್ನು ಮಾಡಿದರೆ ಬೌದ್ಧರನ್ನೂ ನಾಸ್ತಿಕರೆಂದು ಕರೆಯಬೇಕಾಗುತ್ತದೆ. ಆದರೆ ಧರ್ಮವೆಂಬುದು ಇದೆ, ಮನುಷ್ಯನು ಧರ್ಮವನ್ನು ಅನುಸರಿಸಿದರೆ ಮಾತ್ರ ಶ್ರೇಯಸ್ಸು ಎಂದು ಬೌದ್ಧರು ನಂಬುತ್ತಾರೆ. ಧಮ್ಮಂ ಶರಣಂ ಗಚ್ಛಾಮಿ ಎಂಬುದು ಅವರ ಮಂತ್ರ. ಜೈನರು ನಿತ್ಯವಾದ ಸತ್ಯವಾದ ಶಾಶ್ವತವಾದ ಆತ್ಮವಿದೆ, ಅದು ಪುನರ್ಜನ್ಮವನ್ನು ಪಡೆಯುತ್ತದೆ, ಪುನರ್ಜನ್ಮ, ಮತ್ತೆ ಮರಣ ಇತ್ಯಾದಿ ದುಃಖಪರಂಪರೆಯನ್ನು ತಪ್ಪಿಸಿಕೊಳ್ಳಲು ಧರ್ಮವನ್ನು ಆಚರಿಸಬೇಕು, ಮೋಕ್ಷವನ್ನು ಪಡೆಯಲು ಕೇವಲ ಜ್ಞಾನವನ್ನು ವೈರಾಗ್ಯದಿಂದ, ತಪಸ್ಸಿನಿಂದ ಗಳಿಸಬೇಕು ಎಂದು ಇವರ ಸಿದ್ಧಾಂತ. ಹಾಗೆ ಜ್ಞಾನವನ್ನು ಗಳಿಸಿ ಲೋಕಕ್ಕೆ ಮೋಕ್ಷ ಮಾರ್ಗವನ್ನು ಬೋಧಿಸಿದವರನ್ನು ಜೈನರು ತೀರ್ಥಂಕರರೆಂದು ಗೌರವಿಸಿ ಪೂಜಿಸುತ್ತಾರೆ. ಆದರೆ ಜೈನ ಮತದಲ್ಲಿ ಜಗತ್ತನ್ನು ಸೃಷ್ಟಿಸುವ, ಪಾಲಿಸುವ, ಪ್ರಳಯವನ್ನು ಉಂಟು ಮಾಡುವ ಪರಮಾತ್ಮ, ಈಶ್ವರ, ಜಗತ್ಕರ್ತ ಎಂಬ ದೇವರಿಗೆ ಸ್ಥಾನವಿಲ್ಲ. ಸರ್ವಶಕ್ತ ಸರ್ವವ್ಯಾಪಿ ಸರ್ವಜ್ಞನಾದ ದೇವರನ್ನು ನಂಬುವವರೇ ಆಸ್ತಿಕರು ಎಂದು ಹೇಳಿದರೆ ಆಗ ಇವರೆಲ್ಲರನ್ನೂ ನಾಸ್ತಿಕ ಎಂದು ಹೇಳಬೇಕಾಗುತ್ತದೆ.

ಇದಲ್ಲದೆ ಭಾರತದಲ್ಲಿ ವೇದಗಳೆಂಬ ಗ್ರಂಥಗಳಿವೆ. ಹಲವರು ವೇದಗಳನ್ನು ಭಗವಂತನ, ಎಂದರೆ ದೇವರ ಮಾತೆಂದು ನಂಬುತ್ತಾರೆ. ಇನ್ನು ಕೆಲವರು ವೇದಗಳು ಅಪೌರುಷೇಯ, ನಿತ್ಯ, ಅವುಗಳನ್ನು ಸೃಷ್ಟಿಯ ಆದಿಯಲ್ಲಿ ಭಗವಂತನು ಋಷಿಗಳಿಗೆ ಉಪದೇಶಿಸುತ್ತಾನೆ ಎಂದು ನಂಬುತ್ತಾರೆ. ವೇದಗಳಲ್ಲಿ ಹೇಳಿದ್ದು ಸತ್ಯ, ಅದು ಪ್ರಮಾಣ ಎಂದು ನಂಬಿದವರು ಆಸ್ತಿಕರು, ವೇದಗಳಲ್ಲಿ ನಂಬಿಕೆ ಇಲ್ಲದವರು ನಾಸ್ತಿಕರು ಎಂದು ಪಾರಿಭಾಷಿಕ ವ್ಯಾಖ್ಯಾನವನ್ನು ಮಾಡಲಾಗಿದೆ.

ಆಸ್ತಿಕರಲ್ಲಿಯೂ ನಾನಾ ದೃಷ್ಟಿಗಳಿಂದ ಚಿಂತನೆಯನ್ನು ಮಾಡಿದ ಅನೇಕ ದಾರ್ಶನಿಕರಿದ್ದರು. ಅದರಂತೆ ನಾನಾ ದರ್ಶನಗಳಿದ್ದವು. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ, ಉತ್ತರ ಮೀಮಾಂಸಾ ಅಥವಾ ವೇದಾಂತ ಎಂಬ ಆರು ಆಸ್ತಿಕ ದರ್ಶನಗಳು ಎಂದು ಪ್ರಸಿದ್ಧವಾಗಿವೆ. ಇವುಗಳಲ್ಲಿ ಇಂದು ಹೆಚ್ಚು ಪ್ರಚಲಿತವಾಗಿ ಪ್ರಬಲವಾಗಿರುವುದು ವೇದಾಂತ ದರ್ಶನ. ಅದರಲ್ಲಿ ಮತ್ತೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಭೇದಗಳಿವೆ.

ನ್ಯಾಯದರ್ಶನದ ಮೂಲ ಸೂತ್ರಗಳನ್ನು ಗೌತಮನೂ, ವೈಶೇಷಿಕ ದರ್ಶನದ ಮೂಲಸೂತ್ರಗಳನ್ನು ಕಣಾದನೂ, ಸಾಂಖ್ಯ ಸೂತ್ರಗಳನ್ನು ಕಪಿಲನೂ, ಯೋಗ ಸೂತ್ರಗಳನ್ನು ಪತಂಜಲಿಯೂ, ಪೂರ್ವಮೀಮಾಂಸಾ ಸೂತ್ರಗಳನ್ನು ಜೈಮಿನಿಯೂ, ಉತ್ತರ ಮೀಮಾಂಸಾ (ವೇದಾಂತ) ಸೂತ್ರಗಳನ್ನು ವ್ಯಾಸನೂ ರಚಿಸಿದ್ದಾರೆ. ಒಂದೊಂದು ದರ್ಶನದಲ್ಲೂ ಸೂತ್ರಗಳ ಮೇಲೆ ಭಾಷ್ಯಗಳೂ ಅವುಗಳ ವ್ಯಾಖ್ಯಾನಗಳೂ ರಚಿತವಾಗಿ ದಾರ್ಶನಿಕ ಸಾಹಿತ್ಯವು ಬೃಹದಾಕಾರವಾಗಿ ಬೆಳೆದಿದೆ.

ಪತಂಜಲಿಯು ರಚಿಸಿದ ಯೋಗಸೂತ್ರಗಳಿಗೆ ವ್ಯಾಸನೆಂಬ



ವಿದ್ವಾಂಸನು ರಚಿಸಿದ ಭಾಷ್ಯವೂ, ವಾಚಸ್ಪತಿ ಮಿಶ್ರನೆಂಬ ವಿದ್ವಾಂಸನು ಬರೆದ ವ್ಯಾಖ್ಯಾನವೂ ಪ್ರಸಿದ್ಧವಾಗಿದೆ. ಇವುಗಳ ಆಧಾರದಿಂದ ಯೋಗದರ್ಶನದ ರೂಪರೇಖೆಗಳನ್ನು ಅರಿತುಕೊಳ್ಳಬಹುದು. ಇದರ ಮುಖ್ಯ ಅಂಶಗಳು ಇಂತಿವೆ. ಯೋಗ ದರ್ಶನವು ಆಸ್ತಿಕ ದರ್ಶನ. ಇದು ಸಾಂಖ್ಯ ದರ್ಶನದ ಪ್ರಾಯೋಗಿಕ ರೂಪ. ಸಾಂಖ್ಯ ಯೋಗಗಳು ಒಂದೇ ದರ್ಶನದ ಎರಡು ಮುಖಗಳು ಮಾತ್ರ ಎಂದೂ ಭಗವದ್ಗೀತೆಯಲ್ಲಿ ಹೇಳಿದ್ದಾರೆ.

'ಸಾಂಖ್ಯಯೋಗೌ ಪೃಥಗ್ ಬಾಲಾಃ ಪ್ರವದಂತಿ ನ ಪಂಡಿತಾಃ'

(ಸಾಂಖ್ಯ–ಯೋಗಗಳು ಬೇರೆ ಎಂದು ಅಜ್ಞಾನಿಗಳು ಮಾತ್ರ ಹೇಳುತ್ತಾರೆ, ಪಂಡಿತರು ಹಾಗೆ ಹೇಳುವುದಿಲ್ಲ)

ಈ ದರ್ಶನವು ಹೇಳುವಂತೆ ಪ್ರಕೃತಿ, ಪುರುಷ ಎಂಬವು ಎರಡು ಶಾಶ್ವತ ತತ್ತ್ವಗಳು. ವಿಶ್ವಕ್ಕೆಲ್ಲ ಇರುವುದು ಒಂದೇ ಪ್ರಕೃತಿ. ಇದು ಮಹತ್, ಅಹಂಕಾರ, ತನ್ಮಾತ್ರ, ಪಂಚಭೂತ ಎಂಬ ವಿಕಾಸವನ್ನು ಪಡೆದು ಜಗದ್ರೂಪದಲ್ಲಿ ಕಂಗೊಳಿಸುತ್ತಿದೆ. ಪುರುಷ ತತ್ತ್ವವು ಶುದ್ಧಚೈತನ್ಯ. ಅದು ಅನೇಕ ಮತ್ತು ಅನಾದಿ. ಪುರುಷನನ್ನೇ ಹಲವು ದರ್ಶನಗಳು ಜೀವ, ಆತ್ಮ ಮುಂತಾಗಿ ಕರೆಯುತ್ತವೆ. ಪ್ರಕೃತಿಯ ಬಂಧದಲ್ಲಿ ಸಿಲುಕಿರುವುದರಿಂದ ಪುರುಷನು ಸಂಸಾರ ಬಂಧನದಲ್ಲಿದ್ದು ಸುಖ, ದುಃಖಗಳಲ್ಲಿ ಮುಳುಗಿದ್ದಾನೆ.

ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂಬ ಕ್ಲೇಶಗಳು ಜೀವಾತ್ಮನ ಬಂಧಕ್ಕೆ ಕಾರಣ. ಈ ಕ್ಲೇಶಗಳ ನಿವೃತ್ತಿ ಆದರೆ ಪ್ರಕೃತಿ ಪುರುಷ ವಿವೇಕವು ಹುಟ್ಟುತ್ತದೆ. ಅದಕ್ಕಾಗಿ ಅಷ್ಟಾಂಗ ಯೋಗವನ್ನಭ್ಯಸಿಸಬೇಕು. ಯಮ–ನಿಯಮ–ಆಸನ–ಪ್ರಾಣಾಯಾಮ–ಪ್ರತ್ಯಾಹಾರ–ಧಾರಣಾ–ಧ್ಯಾನ–ಸಮಾಧಿ ಎಂಬವು ಅಷ್ಟ (ಎಂಟು) ಅಂಗಗಳು. ವೈರಾಗ್ಯ–ಅಭ್ಯಾಸಗಳಿಂದ ಚಿತ್ತವೃತ್ತಿ ನಿರೋಧವನ್ನು ಮಾಡಿ ಯೋಗವನ್ನು ಸಾಧಿಸಬೇಕು–ಎಂದು ಪತಂಜಲಿಯು ಉಪದೇಶಿಸಿದ್ದಾನೆ.

ಈ ದರ್ಶನದಲ್ಲಿ ಪ್ರತ್ಯಕ್ಷ–ಅನುಮಾನ–ಆಗಮ ಎಂಬ ಮೂರು ಪ್ರಮಾಣಗಳನ್ನು ಒಪ್ಪಿಕೊಂಡಿದ್ದಾರೆ. ಪ್ರತ್ಯಕ್ಷವೆಂದರೆ ನಿರ್ದೋಷವಾದ ಇಂದ್ರಿಯಗಳಿಂದ ಒದಗುವ ಜ್ಞಾನ. ಚಾರ್ವಾಕನೇ ಮುಂತಾದ ಸಕಲ ದಾರ್ಶನಿಕರೂ ಪ್ರತ್ಯಕ್ಷವನ್ನು ಪ್ರಮಾಣವೆಂದು ಒಪ್ಪಿದ್ದಾರೆ. ಚಾರ್ವಾಕನನ್ನು ಬಿಟ್ಟು ಉಳಿದ ಎಲ್ಲಾ ದರ್ಶನಿಕರೂ ಅನುಮಾನ (inference)ದ ಪ್ರಾಮಾಣ್ಯವನ್ನು ಅಂಗೀಕರಿಸಿದ್ದಾರೆ. ಆಗಮ ಎಂದರೆ ಆಪ್ತರು ಹೇಳಿರುವ ವೇದಾದಿ ಶಬ್ದರೂಪವಾದ ಸಾಹಿತ್ಯ. ಅದನ್ನು ಪ್ರಮಾಣವೆಂದು ಒಪ್ಪಿಕೊಳ್ಳದಿದ್ದರೆ ನಮ್ಮ ಜ್ಞಾನ ಅತ್ಯಂತ ಪರಿಮಿತವಾಗಿ ಉಳಿದುಬಿಡುತ್ತದೆ. ಆದ್ದರಿಂದ ಪತಂಜಲಿ ಮೂರು ಪ್ರಮಾಣಗಳನ್ನು ಒಪ್ಪಿದ್ದಾನೆ.

ಸಾಂಖ್ಯ ದರ್ಶನದಲ್ಲಿರುವಂತೆ ಯೋಗದರ್ಶನದಲ್ಲೂ ಆತ್ಮರು ಅನೇಕ ಎಂದು ಬಹುಜೀವವಾದವನ್ನೇ ಅಂಗೀಕರಿಸಲಾಗಿದೆ. ಇದು ಅನುಭವಕ್ಕೂ ಅನುಗುಣವಾಗಿದೆ. ಯಾರೋ ಒಬ್ಬರು ಯೋಗ ಸಾಧನೆಯಿಂದ ಕೈವಲ್ಯವನ್ನು ಪಡೆದರೆ ಇತರರೂ ಮುಕ್ತಿಯನ್ನು ಪಡೆದಂತೆ ಆಗುವುದಿಲ್ಲ. ಕೈವಲ್ಯಕ್ಕಾಗಿ ಅಥವಾ ಮುಕ್ತಿಗಾಗಿ ಪ್ರತಿಯೊಬ್ಬ ಜೀವಾತ್ಮನೂ ಸ್ವಯಂ ಪ್ರಯತ್ನಿಸಬೇಕು.

ಯೋಗಸೂತ್ರಗಳ ಸಂಖ್ಯೆ ಒಂದು ನೂರ ತೊಂಬತ್ತಾರು. ಇವನ್ನು ಸಮಾಧಿಪಾದ, ಸಾಧನಪಾದ, ವಿಭೂತಿಪಾದ, ಕೈವಲ್ಯ ಪಾದ ಎಂಬ ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಸಮಾಧಿ ಪಾದದಲ್ಲಿ ಸಂಪ್ರಜ್ಞಾತ, ಅಸಂಪ್ರಜ್ಞಾತ ಎಂಬ ಎರಡು ವಿಧದ ಸಮಾಧಿಗಳ ಸ್ವರೂಪವನ್ನು ತಿಳಿಸಲಾಗಿದೆ. ಸಾಧನ ಪಾದದಲ್ಲಿ ಸಮಾಧಿಯನ್ನು ಸಾಧಿಸಲು ಆವಶ್ಯಕವಾದ ಅಂಗಗಳ ಪರಿಚಯವನ್ನು ಕೊಟ್ಟಿದ್ದಾರೆ. ಯೋಗದಿಂದ ಸಿದ್ಧಿಸುವ ವಿಶಿಷ್ಟ ಶಕ್ತಿಗಳನ್ನು ವಿಭೂತಿ ಪಾದದಲ್ಲಿ ಹೇಳಿದ್ದಾರೆ. ಕೈವಲ್ಯ ಪಾದದಲ್ಲಿ ದಾರ್ಶನಿಕ ವಿಷಯಗಳನ್ನು ತಿಳಿಸಿ ಕೈವಲ್ಯದ ನಿಶ್ಚಿತರೂಪವನ್ನು ಹೇಳಲಾಗಿದೆ.

ಯೋಗಶಾಸ್ತ್ರವು ಅನಾದಿ ಕಾಲದಿಂದ ಭಾರತದಲ್ಲಿ ಪ್ರಚಲಿತವಾಗಿದೆ. ವೇದಗಳ ಒಂದು ಭಾಗವಾದ ಉಪನಿಷತ್ತುಗಳಲ್ಲಿ ಯೋಗದ ಲಕ್ಷಣಗಳನ್ನು ಪ್ರಯೋಜನಗಳನ್ನು ಹೇಳಲಾಗಿದೆ. ಪತಂಜಲಿ ಮಹರ್ಷಿಯು ಯೋಗಶಾಸ್ತ್ರದ ಆದ್ಯ ಪ್ರವರ್ತಕನಲ್ಲ. ಅದರ ತತ್ತ್ವಗಳನ್ನು ಕ್ರೋಢೀಕರಿಸಿ ಸೂತ್ರರೂಪದಲ್ಲಿ ಹೇಳಿದವನು ಪತಂಜಲಿ. ಭಗವದ್ಗೀತೆಯಲ್ಲಿ ಕೃಷ್ಣನು ತಾನೇ ವಿವಸ್ವಂತನಿಗೆ ಯೋಗವನ್ನು ಕಲಿಸಿದೆ, ಅವನು ಮನುವಿಗೆ, ಮನು ಇಕ್ಷ್ವಾಕುವಿಗೆ ಕಲಿಸಿದನು. ಅದು ರಾಜಪರಂಪರೆಯಲ್ಲಿ ಮುಂದುವರೆಯಿತು ಎಂದು ಹೇಳಿದ್ದಾನೆ.

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಮವ್ಯಯಮ್।
ವಿವಸ್ವಾನ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್॥
ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ॥

ಎಂಬ 4ನೆಯ ಅಧ್ಯಾಯದ ಶ್ಲೋಕಗಳನ್ನು ಇಲ್ಲಿ ಗಮನಿಸಬೇಕು.

ಯೋಗಾಸನಗಳ ಅಭ್ಯಾಸದಿಂದ ರೋಗ ಬಾಧಾ ನಿವೃತ್ತಿ, ದೀರ್ಘಾಯುಸ್ಸು ಉಂಟಾಗುವುದು. ಪ್ರಾಣಾಯಾಮದಿಂದ ಮನಸ್ಸು ಶುದ್ಧವಾಗುವುದು. ಧ್ಯಾನವು ಬುದ್ಧಿಯ ಪ್ರಖರತೆಗೆ ಅನುಕೂಲವಾಗುವುದು, ಮುಂತಾದುವು ಲೌಕಿಕ ಪ್ರಯೋಜನಗಳು. ಆದ್ದರಿಂದ ಇವು ಜನಪ್ರಿಯವಾಗಿವೆ. ಅಹಿಂಸಾ–ಸತ್ಯ–ಆಸ್ತೇಯ–ಬ್ರಹ್ಮಚರ್ಯ–ಅಪರಿಗ್ರಹ ಎಂಬ ಯಮಗಳು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕಾಗಿರುವ ತತ್ತ್ವಗಳು. ಅವುಗಳ ಮೂಲಕ ಸಾಮಾಜಿಕ ನ್ಯಾಯವು ಸಿದ್ಧವಾಗುವುದು. ಶೌಚ–ಸಂತೋಷ–ತಪಸ್–ಸ್ವಾಧ್ಯಾಯ–ಈಶ್ವರಪ್ರಣಿಧಾನ ಎಂಬ ನಿಯಮಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಇಹಕ್ಕೂ ಪರಕ್ಕೂ ಅವಶ್ಯಕವಾದ ನೆಮ್ಮದಿ, ಶಾಂತಿ ನಮ್ಮದಾಗುವುದು. ಇವುಗಳನ್ನು ಮೀರಿ ಹೆಚ್ಚಿನ ಸಾಧನೆಯನ್ನು ಮಾಡಿದವರು ಕೈವಲ್ಯಕ್ಕೂ ಅರ್ಹರಾಗಬಹುದು. ಅದಕ್ಕೆ ಜ್ಞಾನ–ವೈರಾಗ್ಯಗಳು ಬೇಕು. ಅಂತಹವರು ಕೋಟಿ ಜನರಲ್ಲಿ ಒಬ್ಬರಿರಬಹುದೇನೋ. ಲೋಕದ ಲಾಭಗಳ ಚಿಂತನೆಯಲ್ಲಿ ಮುಳುಗಿರುವವರಿಗೆ ಅದು ದುರ್ಲಭ.

ಪತಂಜಲಿಯ ಒಂದೊಂದು ಸೂತ್ರವೂ ಕಣ್ಣನ್ನು ತೆರೆಸುವಂತಿದೆ. ಆ ಮಹರ್ಷಿ ಈಶ್ವರನಲ್ಲಿ, ಎಂದರೆ ದೇವರಲ್ಲಿ ನಂಬಿಕೆಯನ್ನಿಟ್ಟವನು. 'ಈಶ್ವರ ಪ್ರಣಿಧಾನ' ಎಂಬ ಪದವು ಸೂತ್ರಗಳಲ್ಲಿ ನಾಲ್ಕು ಬಾರಿ ಬಂದಿದೆ. ಆದರೂ ಅಂತಹ ನಂಬಿಕೆಯನ್ನಿಟ್ಟವರಿಗೆ ಮಾತ್ರ ಯೋಗಾಭ್ಯಾಸದಿಂದ ಪ್ರಯೋಜನವೆಂದೇನಿಲ್ಲ. ಎಲ್ಲರೂ ಅದರಿಂದ ಉಪಯೋಗವನ್ನು ಪಡೆದುಕೊಳ್ಳಬಹುದು.

ಯೋಗೇನ ಚಿತ್ತಸ್ಯ ಪದೇನ ವಾಚಾಂ
ಮಲಂ ಶರೀರಸ್ಯ ಚ ವೈದ್ಯಕೇನ ।
ಯೋಽಪಾಕರೋತ್ ತರಿ ಪ್ರವರಂ ಮುನೀನಾಂ
ಪತಂಜಲಿಂ ಪ್ರಾಂಜಲಿರಾನತೋಽಸ್ಮಿ॥

ಮನೆಗಳಿಂದ ಸಂಗ್ರಹಿಸಿದ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಇನ್ನು ಬಹು ಬೇಡಿಕೆ!

ಸಿವೇಜ್ ಫಾರಂನಲ್ಲಿ ತಯರಾಗುತ್ತಿವೆ ಪ್ಲಾಸ್ಟಿಕ್ ಟೈಲ್ಸ್

● ಇತರೆ ಟೈಲ್ಸ್‌ಗೆ ಹೋಲಿಸಿದರೆ ದೀರ್ಘ ಬಾಳಿಕೆ ● ಇದರಿಂದಲಾದರೂ ತ್ಯಾಜ್ಯಕ್ಕೆ ಇನ್ನು ಮುಕ್ತಿ ಸಿಗಬಹುದು!

ಮೈಸೂರು, ಡಿ.12(ಎಸ್‌ಪಿಎನ್)– ಮನೆಗಳಿಂದ ಸಂಗ್ರಹಿಸಿದ ಪ್ಲಾಸ್ಟಿಕ್ ಕವರ್, ವಿವಿಧ ತಿಂಡಿ–ತಿನಿಸುಗಳ ಪ್ಯಾಕಿಂಗ್ ಖಾಲಿ ಕವರ್... ಹೀಗೆ ಮರು ಬಳಕೆ ಮಾಡಲು ಸಾಧ್ಯವೇ ಇಲ್ಲ ಎನ್ನುತ್ತಿದ್ದ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಮುಕ್ತಿ ನೀಡಲು ಇಂಟರ್‌ಲಾಕಿಂಗ್ ಮಾದರಿಯ 'ಪ್ಲಾಸ್ಟಿಕ್ ಟೈಲ್ಸ್' ಸಿವೇಜ್ ಫಾರಂನಲ್ಲಿ ತಯಾರಿಸಲಾಗುತ್ತಿದ್ದು, ಇದಕ್ಕೆ ಸಾರ್ವಜನಿಕ ವಲಯದಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ.



ಮೈಸೂರು ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂನಲ್ಲಿ ನಗರಪಾಲಿಕೆಯಿಂದ, ಜಾಗೃತ್ ಟೆಕ್ ಪ್ರೈ ಲಿ. ಕಂಪನಿಗೆ ಉಚಿತ ಸ್ಥಳಾವಕಾಶ ನೀಡಿದ್ದು, ಪ್ಲಾಸ್ಟಿಕ್ ತ್ಯಾಜ್ಯ ಪೂರೈಸುತ್ತಿದೆ. ಕಸದಿಂದ ರಸ ಮಾಡುವ ತತ್ವದಡಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಕಂಪನಿಗೆ ಪೂರೈಸುತ್ತಿದೆ. ಈ ಸಂಸ್ಥೆ ವಿನ್ಯಾಸಗೊಳಿಸಿರುವ ಹೊಸ ತಂತ್ರಜ್ಞಾನದಿಂದ ಇಂಟರ್‌ಲಾಕಿಂಗ್ ಮಾದರಿಯ 'ಪ್ಲಾಸ್ಟಿಕ್ ಟೈಲ್ಸ್' ಆಗಿ ಪರಿವರ್ತಿಸಲಾಗುತ್ತಿದೆ. ಇದೀಗ ಈ ಕಂಪನಿ ಇಪಿಆರ್ ಪ್ರಮಾಣ ಪತ್ರವನ್ನೂ ಪಡೆದುಕೊಂಡಿದೆ ಎನ್ನುತ್ತಾರೆ ಕಂಪನಿ ನಿರ್ದೇಶಕ ದಿನೇಶ್ ಬೋಪಣ್ಣ.

400 ಟನ್ ಪ್ಲಾಸ್ಟಿಕ್ ತ್ಯಾಜ್ಯ ವಿತರಣೆ: ಮನೆಗಳಿಂದ ಕಸ ಸಂಗ್ರಹಣೆ ಮಾಡುವ ಸಂದರ್ಭವೇ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೇರ್ಪಡಿಸಿ, ಆಟೋಗಳ ಮೂಲಕ ಸಿವೇಜ್ ಫಾರಂನಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ತರಲಾಗುತ್ತದೆ. ಅಲ್ಲಿ ಸಣ್ಣಸಣ್ಣ ತುಂಡುಗಳನ್ನಾಗಿ ವಿಭಜಿಸಿ 1.5 ಕೆ.ಜಿ. ಹಾಗೂ 2 ಕೆಜಿ ತೂಕದ ನೆಲಹಾಸುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಪಾಲಿಕೆಯು ಈವರೆಗೆ 400 ಟನ್‌ನಷ್ಟು ಪ್ಲಾಸ್ಟಿಕ್ ಕಸವನ್ನು ಕಂಪನಿಗೆ ನೀಡಿದ್ದು, ನೂರು ಟನ್ ಅನ್ನು ಟೈಲ್ಸ್ ಆಗಿ ಪರಿವರ್ತಿಸಲಾಗುತ್ತಿದೆ ಎಂದು ಮತ್ತು ಪಾಲಿಕೆ ಸಹಾಯಕ ಇಂಜಿನಿಯರ್ (ಎಇಇ) ಮಧುಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಂದು ಟೈಲ್ಸ್‌ಗೆ 85 ರೂ ವೆಚ್ಚ: 2 ಕೆಜಿ ತೂಕದ ಎಂ–60 ದರ್ಜೆಯ ಇಂಟರ್‌ಲಾಕಿಂಗ್ ಪ್ಲಾಸ್ಟಿಕ್ ಟೈಲ್ಸ್ ಒಂದರ ಉತ್ಪಾದನೆಗೆ ಸುಮಾರು 85 ರೂ ವೆಚ್ಚವಾಗುತ್ತಿದೆ. ಅದೇ ದರಕ್ಕೆ ಮಾರಾಟ ಮಾಡುತ್ತಿದ್ದೇವೆ. ಇದೇ ಗುಣಮಟ್ಟದ ಸಿಮೆಂಟ್ ಟೈಲ್ಸ್ ಬೆಲೆ ಮಾರುಕಟ್ಟೆಯಲ್ಲಿ 100 ರಿಂದ 120 ರೂ. ಇದೆ. ಈ ಸಿಮೆಂಟ್ ಟೈಲ್ಸ್‌ನ ಆಯಸ್ಸು 17ರಿಂದ 20ವರ್ಷ. ಆದರೆ, ಪ್ಲಾಸ್ಟಿಕ್ ಟೈಲ್ಸ್ ಆಯುಸ್ಸು ಇನ್ನು ದೀರ್ಘಾವಧಿ. ಅಲ್ಲದೆ ಚೆನ್ನೈನ ಅನೇಕ ಕಾರ್ಪೊರೇಟ್ ಕಂಪನಿಗಳು ಖರೀದಿಸುತ್ತಿವೆ. ಇದೇ ಮಾದರಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ಮಾಡಿದ ಬ್ಲಾಕ್‌ಗಳನ್ನು ಬಳಸಿ ರಸ್ತೆಗಳನ್ನು ನಿರ್ಮಿಸಬಹುದು. ಸಿಮೆಂಟ್ ಟೈಲ್ಸ್‌ಗೆ ಪರ್ಯಾಯವಾಗಿ ಬಳಸಬಹುದಾಗಿದೆ ಎಂದು ನಿರ್ದೇಶಕ ದಿನೇಶ್ ಬೋಪಣ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

150 ಡಿಗ್ರಿ ತಾಪದವರೆಗೂ ಹಾನಿಯಿಲ್ಲ: ಏಕಬಳಕೆಯ ಪ್ಲಾಸ್ಟಿಕ್ ಆದರೆ ಸುಡುತ್ತದೆ. ಆದರೆ ಇಲ್ಲಿ 3 ಕೆಜಿಯಷ್ಟು ಪ್ಲಾಸ್ಟಿಕ್ ಅನ್ನು ಕಂಪ್ರೆಸ್ ಮಾಡಿ ಎರಡು ಕೆಜಿಗೆ ಇಳಿಸಲಾಗುತ್ತದೆ. ಹೀಗಾಗಿ ಏಕಾಏಕಿ ಬೆಂಕಿ ತಗುಲಿದರೂ ಟೈಲ್ಸ್‌ಗೆ ಹಾನಿಯಾಗುವುದಿಲ್ಲ. 125–150 ಡಿಗ್ರಿವರೆಗೆ ಉಷ್ಣಾಂಶವನ್ನು ಈ ಟೈಲ್ಸ್ ತಡೆದುಕೊಳ್ಳುತ್ತದೆ. ತಾಪ ಹೆಚ್ಚಿದಾಗಲೂ ದ್ರವರೂಪಕ್ಕೆ ಬರುವುದಿಲ್ಲ. 150ರಿಂದ 200 ಡಿಗ್ರಿ ಉಷ್ಣಾಂಶದಿಂದ ಮಾತ್ರ ಕರಗುತ್ತದೆ ಎಂದು ತಿಳಿಸಿದರು.

ಈ ತ್ಯಾಜ್ಯಕ್ಕೆ ತಾರ್ಕಿಕ ಮುಕ್ತಿಗೆ ಯತ್ನ

ಟೈಲ್ಸ್ ಮತ್ತಿತರ ಉತ್ಪನ್ನಗಳಿಗೆ ಬೇಕಾದ ಯಂತ್ರಗಳನ್ನು ನಾವೇ ವಿನ್ಯಾಸಗೊಳಿಸಿದ್ದೇವೆ. ಪ್ಲಾಸ್ಟಿಕ್‌ನಿಂದ ಟೈಲ್ಸ್ ಉತ್ಪಾದನೆಯ ಈ ಪ್ರಯತ್ನ ದೇಶದಲ್ಲೇ ಮೊದಲು ಅನಿಸುತ್ತಿದೆ. ಇದಕ್ಕೆ ಪೇಟೆಂಟ್ ಪಡೆಯುವ ಪ್ರಯತ್ನದಲ್ಲಿದ್ದೇವೆ. ಈ ಪ್ರಯೋಗ ರಾಜ್ಯ, ದೇಶದ ಪ್ರಮುಖ ನಗರಗಳಲ್ಲಿ ಸ್ಥಾಪನೆಯಾದರೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ತಾರ್ಕಿಕ ಮುಕ್ತಿ ಸಿಗಬಹುದು.

35 ವರ್ಷದ ಅನುಭವ: ನಾನು ಸಿಮೆಂಟ್ ಕೈಗಾರಿಕಾ ಕ್ಷೇತ್ರದಲ್ಲಿ 35 ವರ್ಷದ ಅನುಭವವಿದೆ. 1990–2000ರ ದಶಕದಲ್ಲಿ ಭಾರತಕ್ಕೆ ಇಂಟರ್ ಲಾಕಿಂಗ್ ಟೈಲ್ಸ್ ಪರಿಚಯ ಆದಾಗಿನಿಂದ ಟೈಲ್ಸ್ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದೇನೆ. ನಮ್ಮ ಕಂಪನಿಯ ಇತರೆ ಇಬ್ಬರು ಪಾಲುದಾರರಾದ ಕೆ.ದಶರಥ್ ಹಾಗೂ ಸಿ.ದರ್ಶನ್ ನವೊಂದಿಗೆ ಕೈಜೋಡಿಸಿದ್ದಾರೆ. ಪರಿಸರಕ್ಕೆ ಧಕ್ಕೆ ಆಗದಂತೆ ಈ ಕಾರ್ಯ ಜರುಗಬೇಕು. ಇಂಗಾಲ ಪ್ರಮಾಣ ಕಡಿಮೆ ಮಾಡಬೇಕು ಎನ್ನುವ ಆಶಯದೊಂದಿಗೆ ಈ ಪ್ರಯತ್ನಕ್ಕೆ ಕೈ ಹಾಕಿದ್ದೇವೆ. ಲಾಭ–ನಷ್ಟ ಮುಂದೆ ನೋಡಬೇಕು ಎಂದು ಉತ್ಸಾಹದಿಂದಲೇ ಮಾಹಿತಿ ನೀಡಿದರು.

60 ಟನ್ ಭಾರ ಹಾಕಬಹುದು: ಪ್ಲಾಸ್ಟಿಕ್ ಟೈಲ್ಸ್‌ಗಳು ವಿಶೇಷವಾಗಿ ವಿನ್ಯಾಸಗೊಂಡಿದ್ದು, 60 ಟನ್ ಭಾರ ಹಾಕಿದರೂ ತಡೆದುಕೊಳ್ಳುವ ಶಕ್ತಿ ಹೊಂದಿದೆ. ಜೊತೆಗೆ ಸಿಮೆಂಟ್ ಟೈಲ್ಸ್ ರೀತಿ ಒಡೆಯುವುದಿಲ್ಲ ಹಾಗೂ ನೀರನ್ನು ಹೀರಿಕೊಳ್ಳುವುದಿಲ್ಲ. ಶಾಖವನ್ನು ತಡೆದುಕೊಳ್ಳುತ್ತದೆ. ಸಿಮೆಂಟ್ ಟೈಲ್ಸ್‌ಗೆ ಹೋಲಿಸಿದರೆ, ಶೇ.30ರಷ್ಟು ಬೆಲೆ ಕಡಿಮೆ. ತೂಕದಲ್ಲಿ ಕಾಂಕ್ರಿಟ್ ಟೈಲ್ಸ್ 5 ಕೆಜಿ ಬಂದರೆ ಪ್ಲಾಸ್ಟಿಕ್‌ನಿಂದ 2 ಟೈಲ್ಸ್ ತಯಾರಿಸಬಹುದು. ಇದರಿಂದ ಸಾಗಾಣಿಕೆ ಕೂಡ ಸುಲಭ. ಅಲ್ಲದೆ, ಸಿಮೆಂಟ್ ಕಾರ್ಖಾನೆಗೆ ನೇರವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾಗಿಸುವ ಬದಲು, ಕರಗಿಸಿ ಬ್ಲಾಕ್ ಮಾಡಿ ಸಾಗಿಸಿದರೆ, ಸಾಗಾಟ ವೆಚ್ಚ ಕಡಿಮೆಯಾಗುತ್ತದೆ ಎಂದ ಅವರು, ಇಲ್ಲಿ ತಯಾರಿಸಿದ ಟೈಲ್ಸ್‌ಗಳನ್ನು ಈಗಾಗಲೇ ಶಾರದಾದೇವಿನಗರ, ಟಿ.ಕೆ.ಬಡಾವಣೆ, ಗಾಂಧಿ ಚೌಕ ಸೇರಿದಂತೆ ನಗರದ ಇತರೆಡೆ ಬಳಕೆಯಾಗಿದೆ ಎಂದು ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ್ತೆ ಅಧಿಕಾರ ಸಾಧ್ಯತೆ

ನವದೆಹಲಿ, ಡಿ.12– 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರವನ್ನು ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಫಿಚ್ ಮಂಗಳವಾರ ತಿಳಿಸಿದೆ.

ಆದಾಗ್ಯೂ, ಮುಂದಿನ ಸಂಸತ್ತಿನಲ್ಲಿ ಬಹುಮತದ ಗಾತ್ರವು ಆಡಳಿತ ಸುಧಾರಣಾ ಕಾರ್ಯಸೂಚಿಯ ಮಹತ್ವಾಕಾಂಕ್ಷೆಯ ಮೇಲೆ ಪ್ರಭಾವ ಬೀರಬಹುದು ಎಂದು ಅದು ಹೇಳಿದೆ.



ಜಾಗತಿಕ ರೇಟಿಂಗ್ ಸಂಸ್ಥೆ ಫಿಚ್ ಭವಿಷ್ಯ

ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಭಾರತದಲ್ಲಿ ಪ್ರಸ್ತುತ ಆಡಳಿತ ನಡೆಸುತ್ತಿರುವ ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆ ಹೆಚ್ಚಾಗಿದೆ. ಅದೇ ರೀತಿಯಲ್ಲಿ ಬಾಂಗ್ಲಾದೇಶದಲ್ಲಿ ಆಡಳಿತಾರೂಢ ಪಕ್ಷ ಮತ್ತೆ ಅಧಿಕಾರದ ಗದ್ದುಗೆ ಹಿಡಿಯಬಹುದು. ಇದು ವಿಶಾಲ ನೀತಿಯ ನಿರಂತರತೆಯ ಸಾಧ್ಯತೆಯನ್ನು ಸೂಚಿಸುತ್ತದೆ ಎಂದು ತಿಳಿಸಿದೆ. 2014ರಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ, 2019ರ ಸಾರ್ವತ್ರಿಕ ಚುನಾವಣೆಯಲ್ಲೂ ಭಾರಿ ಬಹುಮತದೊಂದಿಗೆ ಮರಳಿತು. 2024ರ ಸಾರ್ವತ್ರಿಕ ಚುನಾವಣೆಗಳು ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿದ್ದು, ಆಗಲೂ ಮೋದಿ ಸರ್ಕಾರ ಮೂರನೇ ಬಾರಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಫಿಚ್ ನಿರೀಕ್ಷಿಸಿದೆ.



ಇತ್ತೀಚೆಗೆ ಕಾಡಾನೆಯೊಂದಿಗೆ ವೀರಾವೇಶದಿಂದ ಹೋರಾಡಿ ಮರಣವನ್ನು ಹೊಂದಿದ ದಸರಾ ಆನೆ ಕ್ಯಾಪ್ಟನ್ ಅರ್ಜುನನಿಗೆ ಶಕ್ತಿನಗರದ ಪಾರ್ಕಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ವಿಶ್ವೇಶ್ವರಯ್ಯ, ಮೈಕ್ ಪ್ರಕಾಶ್, ಪರಮೇಶ್ವರ್, ಮುರುಗೇಂದ್ರ ಉಮಾ, ದೀಪಕ್, ಚಂದನ್, ಬಸವೇಶ್ವರ ಮತ್ತಿತರರು ಉಪಸ್ಥಿತರಿದ್ದರು.

ಪಾಕಿಸ್ತಾನದಲ್ಲಿ ಉಗ್ರರ ದಾಳಿ: 23 ಯೋಧರು ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ತಾಲಿಬಾನ್‌ನೊಂದಿಗೆ ನಂಟು ಹೊಂದಿರುವ ಉಗ್ರರು ನಡೆಸಿದ ಪೈಶಾಚಿಕ ದಾಳಿಯಲ್ಲಿ 23 ಯೋಧರು ಸಾವನ್ನಪ್ಪಿದ್ದಾರೆ. ಖೈಬರ್–ಪಖ್ತುಂಖ್ವಾದ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಪೋಸ್ಟ್‌ಗೆ ಸ್ಫೋಟಕ ತುಂಬಿದ ಟ್ರಕ್ ಅನ್ನು ಡಿಕ್ಕಿ ಹೊಡೆಸಿ, ಸೈನಿಕರನ್ನು ಹತ್ಯೆಗೈಯ್ಯಲಾಗಿದೆ ಎಂದು ಸೇನೆ ತಿಳಿಸಿದೆ. ದಕ್ಷಿಣ ವಜಿರಿಸ್ತಾನ್ ಬುಡಕಟ್ಟು ಜಿಲ್ಲೆಯ ಗಡಿಯಲ್ಲಿರುವ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಉಗ್ರರ ಪ್ರವೇಶ ಪ್ರಯತ್ನ ವಿಫಲಗೊಳಿಸಿದ ನಂತರ ಭಯೋತ್ಪಾದಕರು ಸ್ಫೋಟಕ ತುಂಬಿದ ವಾಹನವನ್ನು ಡಿಕ್ಕಿ ಹೊಡೆಸಿದ್ದಾರೆ ಎಂದು ಇಂಟರ್–ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್–ಸೇನೆಯ ಮಾಧ್ಯಮ ವಿಭಾಗ ಹೇಳಿದೆ. ದಾಳಿ ನಂತರ ಮತ್ತೊಂದು ಆತ್ಮಹತ್ಯಾ ದಾಳಿ ನಡೆದಿದ್ದು, ಕಟ್ಟಡದ ಕುಸಿತವಾಗಿದೆ. ಇದರಿಂದ ಅನೇಕ ಸಾವುನೋವು ಉಂಟಾಗಿದೆ. ದಾರಬನ್ ಪ್ರದೇಶದಲ್ಲಿನ ಭದ್ರತಾ ಪಡೆಗಳ ಪೋಸ್ಟ್ ಮೇಲೆ 6 ಭಯೋತ್ಪಾದಕರ ಗುಂಪು ದಾಳಿ ಮಾಡಿದ್ದರಿಂದ ಕನಿಷ್ಠ 23 ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಸೇನೆ ತಿಳಿಸಿದೆ.



ಮುಕ್ತ ವಿವಿಯಲ್ಲಿಂದು ತರಬೇತಿ ಶಿಬಿರ ಆರಂಭ

ಮೈಸೂರು, ಡಿ.12(ಬಿಎಲ್‌ಯು)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಾಳೆ ಐಎಎಸ್ ಹಾಗೂ ಕೆಎಎಸ್ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಶಿಬಿರ ಆರಂಭವಾಗಲಿದೆ. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕರೂ ಆದ 2015ನೇ ಬ್ಯಾಚ್ ಐಎಎಸ್ ಅಧಿಕಾರಿ ಕೆ.ಲಕ್ಷ್ಮಿ ಪ್ರಿಯಾ ತರಬೇತಿ ಶಿಬಿರ ಉದ್ಘಾಟಿಸಲಿದ್ದಾರೆ. ತರುವಾಯ ಪರೀಕ್ಷಾ ಸಿದ್ಧತೆಗಳ ಬಗ್ಗೆ ಮಾತನಾಡಲಿದ್ದಾರೆ.

ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಶುಭ ಕೋರಲಿದ್ದಾರೆ. ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ಹಾಡಹಗಲೇ ಮೈಸೂರಿನ ಹೃದಯ ಭಾಗದಲ್ಲಿ ಮಾರಕಾಸ್ತ್ರಗಳಿಂದ

ಯುವಕನ ಮೇಲೆ ಮಾರಣಾಂತಿಕ ಹಲ್ಲೆ

ಹಳೇ ದ್ವೇಷಕ್ಕಾಗಿ ಗ್ಯಾಂಗ್ ಅಟ್ಯಾಕ್; ಬೆಚ್ಚಿ ಬಿದ್ದ ದೇವರಾಜ ಅರಸು ರಸ್ತೆ ಸುತ್ತಮುತ್ತಲ ಜನ

ಮೈಸೂರು,ಡಿ.12(ಆರ್‌ಕೆ)–ಅಪರಾಧ ಪ್ರಕರಣವೊಂದರ ವಿಚಾರಣೆಗೆ ಸಾಕ್ಷ್ಯ ನುಡಿಯಲು ಬೆಂಗಳೂರಿಂದ ಮೈಸೂರಿಗೆ ಬಂದಿದ್ದ ಯುವಕನನ್ನು ಟೀ ಅಂಗಡಿಯಿಂದ ಹೊರಗೆ ಎಳೆದು ತಂದು, ಮಾರಕಾಸ್ತ್ರಗಳಿಂದ ಸಿನಿಮೀಯ ಶೈಲಿಯಲ್ಲಿ ಹಲ್ಲೆ ನಡೆಸಿ ಗ್ಯಾಂಗ್‌ವೊಂದು ಪರಾರಿಯಾಗಿರುವ ಘಟನೆ ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ಹಾಡಹಗಲೇ ಇಂದು ನಡೆದಿದೆ.

ಬೆಂಗಳೂರಿನ ಅವಲಹಳ್ಳಿ ನಿವಾಸಿ ಸೈಯ್ಯದ್ ಹಬೀಬ್ ಅಲಿಯಾಸ್ ಸುಕ್ಕ ಹಲ್ಲೆಗೊಳಗಾಗಿ ತೀವ್ರವಾಗಿ ಗಾಯಗೊಂಡವನಾಗಿದ್ದು, ಆತನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ನೇಹಿತ ರಫಿಕ್ ಅಹಮದ್ ಜಲೀಲ್ ಎಂಬುವನೊಂದಿಗೆ ಮೈಸೂರಿನ ದೇವರಾಜ ಮೊಹಲ್ಲಾದ ಡಾ. ಅಂಬೇಡ್ಕರ್ ಭವನದ ಹಿಂಭಾಗದ ರಸ್ತೆಯ ರಾಮ್‌ದೇವ್ ಟೀ ಸ್ಟಾಲ್‌ನಲ್ಲಿ ಟೀ ಕುಡಿಯುತ್ತಿದ್ದಾಗ ಮಧ್ಯಾಹ್ನ 12 ಗಂಟೆ ವೇಳೆಗೆ ಇನ್ನೋವಾ ಕಾರಿನಲ್ಲಿ ಬಂದ ಐವರ ಗ್ಯಾಂಗ್, ಸೈಯ್ಯದ್ ಹಬೀಬ್‌ನನ್ನು ಹೊರಕ್ಕೆ ಎಳೆದು ಮಚ್ಚು, ಲಾಂಗ್‌ಗಳಿಂದ ಹಲ್ಲೆ ನಡೆಸಿ ಕ್ಷಣಾರ್ಧದಲ್ಲಿ ಪರಾರಿಯಾಗಿದೆ.

ರಕ್ತದ ಮಡುವಿನಲ್ಲಿ ಬಿದ್ದು, ಒದ್ದಾಡುತ್ತಿದ್ದ ಆತನನ್ನು ಸಾರ್ವಜನಿಕರ ಸಹಕಾರದಿಂದ ಸ್ನೇಹಿತ ರಫಿಕ್ ಅಹಮದ್ ಜಲೀಲ್ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ದೇವರಾಜ ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಇನ್ನೋವಾ ಕಾರಿನಲ್ಲಿ ಬಂದ ಜಾವೆದ್ ಸೇರಿ ಐವರು ದಾಳಿ ನಡೆಸಿ ಏಕಾಏಕಿ ಕುತ್ತಿಗೆ, ಬೆನ್ನು, ತೋಳಿನ ಭಾಗಕ್ಕೆ ಮಚ್ಚು, ಲಾಂಗ್‌ನಿಂದ ಹಲ್ಲೆ ಮಾಡಿ ಪರಾರಿಯಾದರು ಎಂದು ಗಾಯಾಳು ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ. ಕೆ.ಆರ್.ಆಸ್ಪತ್ರೆ ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲಾಗಿರುವ ಸೈಯ್ಯದ್ ಹಬೀಬ್ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂಲತಃ ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿಯಾದ ಹಬೀಬ್, ಕಳೆದ ಕೆಲವು ವರ್ಷಗಳಿಂದ ಬೆಂಗಳೂರಲ್ಲಿ ವಾಸವಾಗಿದ್ದ. ಕಳೆದ ಮೂರು ವರ್ಷಗಳ ಹಿಂದೆ ಮಾಜಿ ಕಾರ್ಪೊರೇಟರ್‌ವೊಬ್ಬರ ಅಳಿಯನ ಕೈ ತುಂಡರಿಸಿದ್ದ ಪ್ರಕರಣ ಸಂಬಂಧ ಸಾಕ್ಷ್ಯ ನುಡಿಯಲೆಂದು ಮೈಸೂರಿಗೆ ಬಂದಿದ್ದ ಆತ, ವಿಚಾರಣೆಗೆ ಹಾಜರಾಗಿ, ಇಲ್ಲಿಗೆ ಬಂದು ಟೀ ಕುಡಿಯುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಸ್ನೇಹಿತ ರಫೀಕ್ ಅಹಮದ್ ಜಲೀಲ್ ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ.

ಹಳೇ ದ್ವೇಷದಿಂದ ಶಾಂತಿನಗರದ ಜಾವೆದ್ ಇತರರೊಂದಿಗೆ ಬಂದು ಹಲ್ಲೆ ಮಾಡಿ ಹಬೀಬ್ ಹತ್ಯೆಗೆ ಯತ್ನಿಸಿದ್ದಾನೆ ಎಂದು ಆತ ನೀಡಿದ ಹೇಳಿಕೆಯನ್ವಯ ಪ್ರಕರಣ ದಾಖಲಿಸಿಕೊಂಡಿರುವ ದೇವರಾಜ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಪ್ರಭು, ಜಯಕೀರ್ತಿ, ಸ್ಥಳದಲ್ಲಿನ ಸಿಸಿಟಿವಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಮೈಸೂರಿನ ಹೃದಯ ಭಾಗದಲ್ಲಿ ಹಾಗೂ ಕೂಗಳತೆ ದೂರದಲ್ಲಿರುವ ಪೊಲೀಸ್ ಠಾಣೆ ಬಳಿ ಹಾಡಹಗಲೇ ಸಿನಿಮೀಯ ಶೈಲಿಯಲ್ಲಿ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಜನದಟ್ಟಣೆ ನಡುವೆಯೇ ಮಚ್ಚು, ಲಾಂಗ್‌ನಿಂದ ಹಲ್ಲೆ ಮಾಡಿ ಕ್ಷಣಾರ್ಧದಲ್ಲಿ ಪರಾರಿಯಾಗಿರುವುದು ಸಾರ್ವಜನಿಕರನ್ನು ಬೆಚ್ಚಿ ಬೀಳಿಸಿದೆ. ಪರಾರಿಯಾಗಿರುವ ಹಲ್ಲೆ ಆರೋಪಿಗಳ ಸುಳಿವು ಪತ್ತೆಗಾಗಿ 3 ತಂಡಗಳನ್ನು ರಚಿಸಲಾಗಿದ್ದು, ತನಿಖಾಧಿಕಾರಿಗಳು ಬಲೆ ಬೀಸಿದ್ದಾರೆ. ಪ್ರಕರಣ ಸಂಬಂಧ ಹಳೇ ಕೇಸಿಗೆ ಸಂಬಂಧಿಸಿದವರನ್ನು ವಶಕ್ಕೆ ಪಡೆದಿರುವ ಪೊಲೀಸರು, ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಡಿ.12–ಆಯುಷ್ ಇಲಾಖೆ ವತಿಯಿಂದ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರಿನಲ್ಲಿ 2023–24ನೇ ಸಾಲಿನಲ್ಲಿ ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆಯಡಿ ಎರಡು ತಿಂಗಳ ಅವಧಿಗೆ ಪಂಚಕರ್ಮ ಮಸಾಜಿಸ್ಟ್ ತರಬೇತಿ (ಸರ್ಟಿಫಿಕೇಟ್ ಕೋರ್ಸ್) ಆಯೋಜಿಸಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಕನಿಷ್ಠ 18 ಹಾಗೂ ಗರಿಷ್ಠ 40 ವರ್ಷದೊಳಗಿನ ವಯೋಮಿತಿಯ ಪರಿಶಿಷ್ಟ ಜಾತಿಯ 20 ಫಲಾನುಭವಿಗಳಿಗೆ ಮತ್ತು ಪರಿಶಿಷ್ಟ ಪಂಗಡದ 20 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ, ಆಧಾರ್ ಕಾರ್ಡ್ ಪ್ರತಿ, ಜಾತಿ ಮತ್ತು ಆದಾಯದ ದೃಢೀಕರಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯನ್ನು ಲಗತ್ತಿಸಿ ಡಿ.14ರ ಸಂಜೆ 4 ಗಂಟೆಯೊಳಗಾಗಿ ಕಚೇರಿಗೆ ಸಲ್ಲಿಸುವುದು. ಮಾಹಿತಿಗೆ ದೂ.ಸಂ: 0821–2442205, ಡಾ.ಮೈತ್ರೇಯಿ, ಮೊ: 9480441974, ಡಾ.ಸಂಜಯ್‌ಕುಮಾರ್ ಮೊ: 9986083244, ಡಾ.ವರ್ಷಾ ಕುಲಕರ್ಣಿ ಮೊ: 9480597527 ಸಂಪರ್ಕಿಸಿ.

ಕೇರಳ ರಾಜ್ಯಪಾಲರ ವಾಹನದ ಮೇಲೆ ದಾಳಿ: ಕಮ್ಯುನಿಸ್ಟ್ ಆಡಳಿತದ ವಿರುದ್ಧ ಶಶಿ ತರೂರ್ ವಾಗ್ದಾಳಿ

ನವದೆಹಲಿ: ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರ ವಾಹನದ ಮೇಲೆ ದಾಳಿ ನಡೆಸಿದ ಸಿಪಿಎಂ ವಿದ್ಯಾರ್ಥಿ ಘಟಕದ ಬಗ್ಗೆ ಕಾಂಗ್ರೆಸ್ ನಾಯಕ ಶಶಿ ತರೂರ್ ಕಿಡಿಕಾರಿದ್ದು, ಕಮ್ಯುನಿಸ್ಟ್ ಆಡಳಿತದಲ್ಲಿ ಪೊಲೀಸರು ಅರಾಜಕತೆಯ ಏಜೆಂಟ್‌ಗಳಾಗಿದ್ದಾರೆ ಎಂದು ಟೀಕಿಸಿದರು.

ಈ ಕುರಿತು ಮಂಗಳವಾರ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಇದು ಆಡಳಿತ ಪಕ್ಷದ 'ಕೆಟ್ಟ ಮತ್ತು ಮಿತಿ ಮೀರಿದ' ವರ್ತನೆಯಾಗಿದೆ. ಇದರಲ್ಲಿ ಮುಖ್ಯಮಂತ್ರಿ ಭಾಗಿಯಾಗಿದ್ದಾರೆ ಎಂದು ಹೇಳಿದ್ದಾರೆ. ರಾಜ್ಯಪಾಲ ಆರಿಫ್ ಮೊಹದ್ ಖಾನ್ ಅವರ ಕಾರನ್ನು ಎಸ್‌ಎಫ್‌ಐ ಗೂಂಡಾಗಳು ತಡೆದು ಅದರ ಮೇಲೆ ದಾಳಿ ಮಾಡಿರುವುದು ನಾಚಿಕೆಗೇಡಿನ ಕೆಲಸವಾಗಿದೆ. ಇದು ಅವಮಾನಕರ ವರ್ತನೆ. ರಾಜ್ಯಪಾಲರ ಕೋಪವು ಸಂಪೂರ್ಣವಾಗಿ ಅರ್ಥವಾಗುವಂತಹದ್ದಾಗಿದೆ ಎಂದು ತರೂರ್ ತಿಳಿಸಿದ್ದಾರೆ.

ಕಮ್ಯುನಿಸ್ಟ್ ಆಡಳಿತದಲ್ಲಿ ಪೊಲೀಸರು ಕಾನೂನುಬಾಹಿರತೆಯ ಏಜೆಂಟ್ ಆಗಿದ್ದಾರೆ. ಆಡಳಿತ ಪಕ್ಷದ ಕೆಟ್ಟ ಮಿತಿಮೀರಿದ ವರ್ತನೆಯಲ್ಲಿ ಅವರು ಭಾಗಿದಾರರಾಗಿದ್ದಾರೆ ಎಂದು ತಿಳಿಸಿದ್ದಾರೆ.

'ಇಂಡಿಯಾ'ದಲ್ಲಿ ಮತ್ತೆ ಒಡಕು...



ಸೋಮವಾರ ಸಿಪಿಎಂನ ವಿದ್ಯಾರ್ಥಿ ಘಟಕವಾಗಿರುವ ಭಾರತೀಯ ವಿದ್ಯಾರ್ಥಿ ಫೆಡರೇಶನ್ ಕಾರ್ಯಕರ್ತರು ನವದೆಹಲಿಗೆ ತೆರಳಲು ರಾಜ್ಯಪಾಲರು ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದಾಗ ರಾಜ್ಯಪಾಲರ ವಾಹನದ ಮೇಲೆ ದಾಳಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಘಟನೆ ಬಳಿಕ ಕೆರಳಿದ ರಾಜ್ಯಪಾಲ ಖಾನ್ ಅವರು ಕೇರಳ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ನನ್ನ ಮೇಲೆ ಹಲ್ಲೆಗೆ ಗೂಂಡಾಗಳನ್ನು ಕಳುಹಿಸಿದ್ದಾರೆ ಎಂದು ಆರೋಪಿಸಿದ್ದರು.

ಕಾಂಗ್ರೆಸ್ ಮತ್ತು ಸಿಪಿಎಂ 'ಇಂಡಿಯಾ' ಒಕ್ಕೂಟದ ಭಾಗವಾಗಿದ್ದರೂ ಕಾಂಗ್ರೆಸ್ ಪ್ರಧಾನ ವಿರೋಧ ಪಕ್ಷವಾಗಿದ್ದು ಕೇರಳದಲ್ಲಿ ಕಮ್ಯೂನಿಸ್ಟರ ವಿರೋಧಿಗಳಾಗಿದ್ದಾರೆ. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಕಾಂಗ್ರೆಸ್‌ನ ಸೋಲಿನ ನಂತರ ಮುಖ್ಯಮಂತ್ರಿ ವಿಜಯನ್ ಕಾಂಗ್ರೆಸ್‌ನ್ನು ಟೀಕಿಸಿದ್ದಾರೆ. 'ದುರಾಸೆ ಮತ್ತು ಅಧಿಕಾರದ ಲಾಲಸೆಯಿಂದ' ಪಕ್ಷವು ಸೋತಿದೆ ಎಂದು ಹೇಳಿದ್ದರು. ಇದೆಲ್ಲ ಬೆಳವಣಿಗೆಗಳು 'ಇಂಡಿಯಾ'ದಲ್ಲಿ ಬಿರುಕು ಸೃಷ್ಟಿಯಾಗಿರುವುದಕ್ಕೆ ನಿದರ್ಶನವಾಗಿವೆ.



ಪೊನ್ನಂಪೇಟೆ ತಾಲೂಕಿನ ಕಿಗ್ಗಟ್ಟ್‌ನಾಡ್ ಹಿರಿಯ ನಾಗರಿಕ ವೇದಿಕೆ ವತಿಯಿಂದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ದೇವಾಲಯಗಳ ಸೇವೆ ಮತ್ತು ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿರುವ ಬಾಳೆಲೆ ಗ್ರಾಮದ ನಿವಾಸಿ ಪೋಡಮಾಡ ಚಿಣ್ಣಪ್ಪ ಮತ್ತು ಪತ್ನಿ ಸರಸು ಸುಬ್ಬಮ್ಮ ಚಿಣ್ಣಪ್ಪ (ತಾಮನೆ ಮತ್ರಂಡ) ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಈ ವೇಳೆ (ನಿಂತಿರುವವರು): ಚೇಂದಿರ ಎಂ.ಬೋಪಣ್ಣ, ಕೊಳ್ಳಿಮಾಡ ಸೋಮಯ್ಯ, ಕಾಟಮಾಡ ಜಿಮ್ಮಿ ಅಣ್ಣಯ್ಯ, ಎಚ್.ಬಿ.ಬೋಜಮ್ಮ, ಕುಸುಮ, ತಾಮನೆ ಪಳಂಗಂಡ, ಮಂದಣ್ಣ (ಮೊಮ್ಮಗ), ಸವಿತಾ ತಾಮನೆ, ಮಾಣಿಪಂಡ ಪಾರ್ವತಿ ಜೋಯಪ್ಪ, ಕೇಚಟೀರ ಕಾಮುಣಿ ಪೂಣಚ್ಚ, ಮಾಚಿಮಾಡ ಲೌಲಿ ಸೋಮಯ್ಯ, ಮದ್ರೀರ ಕರುಂಬಯ್ಯ, ನೆರಿಯಂಡಮ್ಮನ ಸುಬ್ರಮಣಿ, (ಕುಳಿತಿರುವವರು): ಮಲ್ಲಂಡ ರಾಜ ಸುಬ್ಬಯ್ಯ, ಕೊಳ್ಳಿಮಾಡ ಚಿಪ್ಪಿ ಕಾರ್ಯಪ್ಪ, ಕಾಟಮಾಡ ಡಿಕ್ಕಿ ಅಣ್ಣಯ್ಯ, ಪಾರ್ವಂಗಡ ಸನ್ನಿ ಮೊಣಪ್ಪ ಅವರನ್ನು ಕಾಣಬಹುದು.



ಚಾಮುಂಡಿಬೆಟ್ಟದಲ್ಲಿ ನಾಯಕರ ಸಂಘದ ವತಿಯಿಂದ ಮಹದೇಶ್ವರ ಹಳ್ಳದಲ್ಲಿ ಮಂಗಳವಾರ ಅದ್ದೂರಿಯಾಗಿ 19ನೇ ವರ್ಷದ ಮಹದೇಶ್ವರ ಪೂಜೆ ಮತ್ತು ಅನ್ನ ಸಂತರ್ಪಣೆ ಜರುಗಿತು. ಈ ವೇಳೆ ದೇವಸ್ಥಾನದ ಅರ್ಚಕರಾದ ಚರಣ್‌ರಾಜ್, ಚಾಮುಂಡಿಬೆಟ್ಟದ ನಾಯಕರ ಸಂಘದ ಅಧ್ಯಕ್ಷ ಆರ್.ಶಂಭುಲಿಂಗು, ದೊಡ್ಡ ಯಾಜಮಾನರಾದ ಶಿವರಾಂ ನಾಯಕ, ಜಯ ಕರ್ನಾಟಕ ಜಿಲ್ಲಾ ಅಧ್ಯಕ್ಷ ಶ್ರೀಧರ್ ನಾಯಕ, ಎಲ್.ಮಹದೇವಸ್ವಾಮಿ, ನಾಗೇಂದ್ರ, ನಾಗಣ್ಣ, ಸಣ್ಣಮಾದನಾಯಕ, ಪುಟ್ಟರಾಜು, ಕೋರ್ಟ್ ಸುಬ್ರಮಣ್ಯ, ದೊರೆಸ್ವಾಮಿ, ಚನ್ನಪ್ಪ ಪುಟ್ಟರಾಜು, ಮಹದೇವ, ರಮೇಶ್, ಮಾರ್ಷಲ್ ಜಯರಾಮ್, ಮಂಜುನಾಯಕ, ಚಿಕ್ಕ ಮಹದೇವ್, ಚಂದ್ರು, ಚಾಮುಂಡಿಬೆಟ್ಟದ ಗ್ರಾಮಸ್ಥರು ಉಪಸ್ಥಿತರಿದ್ದರು.

ಮುಂದುವರೆದ ಕಾವೇರಿ ಕ್ರಿಯಾ ಸಮಿತಿ ಧರಣಿ

ಸದನದಲ್ಲಿ ದನಿ ಎತ್ತದ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ



ಮೈಸೂರು,ಡಿ.12(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಪುರಭವನದ ಮುಂಭಾಗ ನಡೆಯುತ್ತಿರುವ ಕಾವೇರಿ ಕ್ರಿಯಾ ಸಮಿತಿ ಧರಣಿ ಮಂಗಳವಾರವೂ ಮುಂದುವರೆಯಿತು.

ಕಳೆದ ವಾರದಿಂದ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಕಲಾಪದಲ್ಲಿ ಕಾವೇರಿ ವಿಚಾರವಾಗಿ ರಾಜ್ಯದ ಯಾವೊಬ್ಬ ಶಾಸಕರು ದನಿ ಎತ್ತದಿರುವುದು ವಿಪರ್ಯಾಸ, ಈ ಜನಪ್ರತಿನಿಧಿಗಳಿಗೆ ಧಿಕ್ಕಾರ. ಈ ಕೂಡಲೇ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಧರಣಿಯಲ್ಲಿ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ರೈತ ಮುಖಂಡರಾದ ವರಕೂಡು ಕೃಷ್ಣೇಗೌಡ, ನಾಗರಾಜ್, ಸುನೀಲ್‌ಕುಮಾರ್, ಗೋಲ್ಡ್ ಸುರೇಶ್, ಶ್ರೀನಿವಾಸ, ಶುಭಶ್ರೀ, ಮಹಾದೇವಸ್ವಾಮಿ, ಪರಮೇಶ್, ಪುಷ್ಪವತಿ, ರಾಜಶೇಖರ್, ಮಲ್ಲೇಶ್, ಯುವರಾಜ್, ಕೃಷ್ಣಯ್ಯ, ಮಂಜುಳಾ, ರವೀಶ್, ನರಸಿಂಹಮೂರ್ತಿ, ಹನುಮಂತಯ್ಯ, ಪ್ರದೀಪ್ ಕುಮಾರ್ ಮತ್ತಿತರರು ಪಾಲ್ಗೊಂಡಿದರು.

ಟೆಂಡರ್ ಪದ್ಧತಿ ರದ್ದತಿಗೆ ಆಗ್ರಹಿಸಿ ಗುತ್ತಿಗೆದಾರರ ಪ್ರತಿಭಟನೆ



ಮೈಸೂರು, ಡಿ.12(ಜಿಎ)–ಟೆಂಡರ್ ಪದ್ಧತಿ ರದ್ದು ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕಬಿನಿ ಮತ್ತು ವರುಣ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ನಗರದ ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಕಚೇರಿ ಎದುರು ಪ್ರತಿಭಟಿಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಮಟ್ಟದಲ್ಲಿ ಹಾಗೂ ಇಲಾಖೆಗಳ ಮುಖಾಂತರ ಟೆಂಡರ್ ಕಾಮಗಾರಿಗಳ ಪ್ಯಾಕೇಜ್ ಪದ್ಧತಿಯನ್ನು ಕೈಬಿಡಬೇಕೆಂದು ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇವೆ. ಇದರ ಬಗ್ಗೆ ನ್ಯಾಯಾಲಯದಲ್ಲೂ ಸಹ ಪ್ಯಾಕೇಜ್ ಪದ್ಧತಿಯ ವಿರುದ್ಧವಾಗಿ ಆದೇಶವಾಗಿದೆ. ಇತ್ತೀಚೆಗೆ ಇಲಾಖಾ ಅನುದಾನವನ್ನು ಪ್ಯಾಕೇಜ್ ಪದ್ಧತಿ ಮಾಡುವುದರಿಂದ ದೊಡ್ಡ–ದೊಡ್ಡ ಕಂಪನಿ ಗುತ್ತಿಗೆದಾರರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ಪ್ಯಾಕೇಜ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರೆಯಬಾರದು ಎಂದು ಆಗ್ರಹಿಸಿದರು.

ಕಳೆದ ವರ್ಷದಲ್ಲಿ ಹಲವು ಟೆಂಡರ್ ಕಾಮಗಾರಿಗಳನ್ನು ಕರೆದಿದ್ದು, ಅದರಲ್ಲಿ ಗುತ್ತಿಗೆದಾರರಾದ ನಾವು ಭಾಗವಹಿಸಿದ್ದು ಇದುವರೆವಿಗೂ ಆ ಕಾಮಗಾರಿಗಳು ಅನುಮೋದನೆಗೊಂಡಿರುವುದಿಲ್ಲ. ಇದರ ಬಗ್ಗೆ ಶೀಘ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಟೆಂಡರ್ ಕಾಮಗಾರಿಗಳಿಗಾಗಿ ನಾವು ನೀಡುತ್ತಿರುವ ಭದ್ರತಾ ಠೇವಣಿಯನ್ನು ಬೇರೆ ಎಲ್ಲಾ ಇಲಾಖೆಗಳಂತೆ 1 ವರ್ಷಕ್ಕೆ ನಿಗದಿಪಡಿಸುವಂತೆ ಆದೇಶಿಸಬೇಕು. ಇದುವರೆಗೂ ಇರುವ ಹಳೆಯ ಬಿಲ್ಲುಗಳಲ್ಲಿ 20 ಲಕ್ಷಕ್ಕಿಂತ ಕಡಿಮೆ ಇರುವ ಬಿಲ್ಲುಗಳನ್ನು ಪೂರ್ಣವಾಗಿ ಪಾವತಿಸಿ, ಅದಕ್ಕಿಂತ ಮೇಲ್ಪಟ್ಟ ಬಿಲ್ಲುಗಳನ್ನು ಸೀನಿಯಾರಿಟಿ ಪ್ರಕಾರ ಶೀಘ್ರವಾಗಿ ಪಾವತಿಸಬೇಕು. 50 ಲಕ್ಷದ ಕಾಮಗಾರಿಗಳಿಗೆ ಯಾವುದೇ ಕಂಡಿಷನ್ ಇಲ್ಲದೆ ಟೆಂಡರ್ ಕಾಮಗಾರಿಗಳಲ್ಲಿ ಭಾಗವಹಿಸಲು ಅನುಕೂಲ ಮಾಡಿ 1ಕೋಟಿ ಕಾಮಗಾರಿಗೆ ಇರುವ ಕಂಡಿಷನ್‌ಗಳನ್ನು ಸಡಿಲಗೊಳಿಸಿ ಟೆಂಡರ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಬೇಕೆಂಬ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎ.ಜಿ.ಸುರೇಶ್, ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಸಿ.ಎ.ಕೃಷ್ಣ, ನಗರಪಾಲಿಕೆ ಗುತ್ತಿಗೆದಾರ ಯೋಗೇಶ್, ಎಚ್.ಎಂ.ಶಿವಮೂರ್ತಿ, ನಂದೀಶ್, ಬಸವಣ್ಣ ನಾಗರಾಜಮೂರ್ತಿ ಮತ್ತಿತರರು ಪಾಲ್ಗೊಂಡಿದರು.

ಹಿಂದಿನ ಬಿಜೆಪಿ ಸರ್ಕಾರದಿಂದ ತನ್ನ ಕ್ಷೇತ್ರಕ್ಕೆ 105 ಕೋಟಿ ರೂ. ಅನುದಾನ ತಡೆ

ಪಕ್ಷಕ್ಕೆ ಮತ್ತೆ ಮುಜುಗರ ತಂದ ಶಾಸಕ ಯತ್ನಾಳ್!

ಬೆಳಗಾವಿ, ಡಿ.12– ಹಿಂದಿನ ಬಿಜೆಪಿ ಸರ್ಕಾರದಿಂದ ತನ್ನ ಕ್ಷೇತ್ರಕ್ಕೆ ಮಂಜೂರಾಗಿದ್ದ 105 ಕೋಟಿ ಅನುದಾನವನ್ನು ತಡೆಹಿಡಿಯಲಾಯಿತು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಂಗಳವಾರ ವಿಧಾನಸಭೆಯಲ್ಲಿ ಹೇಳಿಕೆ ನೀಡುವ ಮೂಲಕ ಪಕ್ಷಕ್ಕೆ ಮತ್ತೊಮ್ಮೆ ಮುಜುಗರ ತಂದಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಯತ್ನಾಳ್, ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ತಾವು ಪ್ರತಿನಿಧಿಸುವ ವಿಜಯಪುರ ಕ್ಷೇತ್ರದ ಅಭಿವೃದ್ಧಿಗೆ ಅಂದಿನ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ 105 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದರು. ದುರದೃಷ್ಟವಶಾತ್, ಬಿಜೆಪಿ ಅಧಿಕಾರಕ್ಕೆ ಬಂದಾಗ ಅದನ್ನು ತಡೆಹಿಡಿಯಲಾಯಿತು ಮತ್ತು ರದ್ದುಗೊಳಿಸಲಾಯಿತು ಎಂದು ಹೇಳಿದರು.

ಹೆಚ್ಚು ಮಾತನಾಡಬೇಡಿ ಎಂದು ಜನರು ನನಗೆ ಸಲಹೆ ನೀಡುತ್ತಾರೆ. ಇದರಿಂದ ಸಿಎಂ ಆಗುವ ಅವಕಾಶವನ್ನು ಹಾಳುಮಾಡಿಕೊಂಡಿದ್ದೇನೆ. ಆದರೆ, ನಾನು ಯಾರಿಗೂ ಹೆದರುವುದಿಲ್ಲ ಮತ್ತು ನೇರವಾಗಿ ಸಂದೇಶವನ್ನು ರವಾನಿಸುತ್ತೇನೆ ಎಂದರು.



ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಚಿವ ಭೈರತಿ ಬಸವರಾಜ್ ಅವರು ಹಣ ಬಿಡುಗಡೆ ಮಾಡಿ ಸಹಾಯ ಮಾಡಿದ್ದರು. ಅಧಿಕಾರದಲ್ಲಿದ್ದಾಗ ಸಹಾಯ ಮಾಡದವರು ಈಗ ನಿವೃತ್ತರಾಗಿದ್ದಾರೆ. ಯಾರನ್ನಾದರೂ ಟಾರ್ಗೆಟ್ ಮಾಡಿದರೆ ಅವರು ಅಧಿಕಾರ ಕಳೆದುಕೊಳ್ಳುವುದನ್ನು ನೋಡಿದ್ದೇನೆ ಎಂದು ಹೇಳುವ ಮೂಲಕ ಮಾಜಿ ಸಿಎಂ ಯಡಿಯೂರಪ್ಪ ಅವರಿಗೆ ಟಾಂಗ್ ನೀಡಿದರು.

ಈ ವೇಳೆ ಮಧ್ಯಪ್ರವೇಶಿಸಿದ ಕಾಂಗ್ರೆಸ್ ಶಾಸಕ ರಾಜುಕಾಗೆ, ನಾನು ನಿಮ್ಮೊಂದಿಗಿದ್ದೇನೆ ಎಂದರು. ತನ್ನನ್ನು ಸಮರ್ಥಿಸಿಕೊಳ್ಳಲು ತಾನು ಸಾಕು. ನಾನು ಒಂಟಿಸಲಗ, ಫೈಟ್ ಮಾಡುತ್ತೇನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಈ ವೇಳೆ ಬಿಜೆಪಿಯಲ್ಲಿ ಯಾರೂ ನಿಮ್ಮನ್ನು ಬೆಂಬಲಿಸುತ್ತಿಲ್ಲವೇ ಎಂದು ಕಾಂಗ್ರೆಸ್ ಶಾಸಕ ಅಬ್ಬಯ್ಯ ಪ್ರಸಾದ್ ಲೇವಡಿ ಮಾಡಿದರು. ಯಾರೂ ಇಲ್ಲ ಎಂದು ನೀವು ಊಹಿಸುತ್ತೀರಿ. ನೀವು ಆರು ತಿಂಗಳಿಗೊಮ್ಮೆ ಎದ್ದು ನಿಂತು ಮಾತನಾಡುತ್ತೀರಿ ಎಂದು ಯತ್ನಾಳ್ ತಿರುಗೇಟು ನೀಡಿದರು. ಯತ್ನಾಳ್ ನೇರವಾಗಿ ಯಡಿಯೂರಪ್ಪ ಮತ್ತು ಅವರ ಪುತ್ರ ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಗುರಿಯಾಗಿಸಿ ಸೋಮವಾರ ವಾಗ್ದಾಳಿ ನಡೆಸಿದ್ದರು. ತನಗೆ ಅಥವಾ ಉತ್ತರ ಕರ್ನಾಟಕದ ಯಾವುದೇ ನಾಯಕನಿಗೆ ವಿಪಕ್ಷ ನಾಯಕ ಅಥವಾ ರಾಜ್ಯಾಧ್ಯಕ್ಷ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ್ದರು. ಬಸವರಾಜ್ ಬೊಮ್ಮಾಯಿ, ಮಾಜಿ ಸಚಿವ ವಿ.ಸೋಮಣ್ಣ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರನ್ನು ಸೋಲಿಸಲು ವಿಜಯೇಂದ್ರ ಚುನಾವಣೆಗೆ ಹಣ ಹಾಕಿದ್ದಾರೆ ಎಂದೂ ಸದನದಲ್ಲಿ ಶಾಸಕ ಯತ್ನಾಳ್ ಆರೋಪಿಸಿದ್ದರು.

ಹುಲ್ಲೇನಹಳ್ಳಿ ಸರ್ಕಾರಿ ಶಾಲೆಯಲ್ಲಿ ದುಸ್ಥಿತಿ

ಮಳೆ ಬಂದರೆ ಸೋರುವ ಕೊಠಡಿಗಳು, ಕಸ ಕಡ್ಡಿಗಳ ರಾಶಿ, ಬೆಳೆದು ನಿಂತ ಗಿಡಗಂಟಿ; ತಿಂಗಳಲ್ಲಿ ಸರಿಪಡಿಸದಿದ್ದರೆ ಆಮ್ ಆದ್ಮಿ ಪಕ್ಷದಿಂದ ಹೋರಾಟ

ಮೈಸೂರು, ಡಿ.12(ಜಿಎ)– ಹುಣಸೂರು ತಾಲೂಕಿನ ಹುಲ್ಲೇನಹಳ್ಳಿ ಸರ್ಕಾರಿ ಶಾಲೆ ದುಸ್ಥಿತಿಯಲ್ಲಿದ್ದು, ಅವ್ಯವಸ್ಥೆ ತಾಂಡವವಾಡುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸದಿದ್ದರೆ ಆಮ್ ಆದ್ಮಿ ಪಕ್ಷದಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಎಚ್ಚರಿಕೆ ನೀಡಿದ ರಾಜ್ಯ ಕಾರ್ಯದರ್ಶಿ ಸೋಸಲೆ ಸಿದ್ದರಾಜು, ಶಾಲೆಯ ಕೊಠಡಿಗಳು ಮಳೆ ಬಂದರೆ ಸೋರುವುದು, ತಾರಸಿ ಮೇಲೆ ನೀರು ನಿಲ್ಲುವುದು, ಕಸ ಕಡ್ಡಿ ರಾಶಿ, ಗಿಡಗಂಟಿಗಳು ಬೆಳೆದು ನಿಂತಿರುವುದು ಇವು ಸಾಮಾನ್ಯವಾಗಿವೆ. ಆದರೆ, ಮಳೆ ಬಂದಾಗ ಮಕ್ಕಳು ಆ ಕೊಠಡಿಯಿಂದ ಈ ಕೊಠಡಿಗೆ ಓಡಾಡಿ ಪಾಠವನ್ನು ಕೇಳಬೇಕಾದ ಪರಿಸ್ಥಿತಿ ಇದ್ದು, ಮತ್ತೊಂದೆಡೆ ಕಳೆದ 20 ವರ್ಷದ ಹಿಂದೆ ಆರಂಭವಾದ ರಂಗಮಂದಿರದ ಕೆಲಸ ಅರ್ಧಕ್ಕೆ ನಿಂತಿದೆ. 70 ಮಕ್ಕಳು ಈ ದುಸ್ಥಿತಿಯ ಶಾಲೆಯಲ್ಲಿ ಓದುತ್ತಿದ್ದಾರೆ. ಪಂಚಾಯಿತಿ ಅಧಿಕಾರಿಗಳನ್ನು ಕೇಳಿದರೆ ನಮಗೆ ಅನುದಾನ ಇಲ್ಲ ಎಂಬ ಉತ್ತರ ನೀಡುತ್ತಾರೆ ಎಂದರು.

ನರೇಗಾ ಯೋಜನೆಯಲ್ಲಿ ಕೆಲಸ ಮಾಡುವ ಪರಿಸ್ಥಿತಿ ಇದೆ ಎಂದು ಹೇಳಿ ಅಸಹಾಯಕರಾಗುತ್ತಾರೆ. ನರೇಗಾ ಯೋಜನೆಯಲ್ಲಿ 300 ರೂ. ಕೂಲಿ ಹಣದಲ್ಲಿ ಒಂದು ಶಾಲೆಯ ಹೊಸ ಕಟ್ಟಡವನ್ನು ಕಟ್ಟಲು ಸಾಧ್ಯವೇ? 300 ರೂ. ಕೂಲಿಗೆ ಈಗ ಯಾರು ಕೆಲಸಕ್ಕೆ ಬರುತ್ತಾರೆ?



ಬಂದರೂ ಕಬ್ಬಿಣ, ಸಿಮೆಂಟ್ ಮತ್ತು ಇತರೆ ವಸ್ತುಗಳನ್ನು ಯಾರು ಕೊಡುತ್ತಾರೆ? ಇಷ್ಟು ಸಾಮಾನ್ಯವಾದ ಸಂಗತಿ ರಾಜಕಾರಣಿಗಳಿಗೆ ಏಕೆ ತಿಳಿಯುತ್ತಿಲ್ಲ? ಅಥವಾ ತಿಳಿದರೂ ಖಾಸಗಿ ಶಾಲೆಗಳಿಗೆ ಪರೋಕ್ಷ ಬೆಂಬಲ ಇದೆಯೇ ಎಂದು ಸಿದ್ದರಾಜು ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಬರೀ ರಾಜಕೀಯ ಹೇಳಿಕೆಗಳಿಗೆ ಸೀಮಿತವಾಗಿದ್ದಾರೆ. ಶಿಕ್ಷಣ ಮಂತ್ರಿಗಳು ಬರೀ ಬೆಂಗಳೂರಿನಲ್ಲಿ ಕುಳಿತು ಹೇಳಿಕೆಗಳನ್ನು ನೀಡಿದರೆ ಸಾಲದು. ಶಾಲೆಯ ಕಟ್ಟಡದ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ. ಏಕೆಂದರೆ ಅವರ ಮಕ್ಕಳು ಈ ಶಾಲೆಗಳಲ್ಲಿ ಓದುತ್ತಿಲ್ಲವಲ್ಲ ಬಡವರ ಮಕ್ಕಳು ತಾನೇ ಇಲ್ಲಿ ಓದುವುದು. ಅದು ಹೇಗಿದ್ದರೇನು ಎನ್ನುವ ಉದಾಸೀನತೆ. ತಿಂಗಳೊಳಗಾಗಿ ಇದನ್ನು ಸರಿಪಡಿಸಿ ಕ್ರಮ ಕೈಗೊಳ್ಳದಿದ್ದರೆ ಆಮ್ ಆದ್ಮಿ ಪಕ್ಷವು ಮೈಸೂರು ಜಿಲ್ಲಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ತಿಳಿಸಿದರು.

ಪ್ರತಿ ತಾಲೂಕಿನ 100 ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಅರಿಯುವ ಕೆಲಸ ಮುಂದಿನ ದಿನಗಳಲ್ಲಿ ಪಕ್ಷ ಮಾಡಲಿದೆ. ಕಳೆದ ಬಾರಿ ನರಸೀಪುರದಲ್ಲಿ ಪಕ್ಷ ಬೆಳಕಿಗೆ ತಂದ ಶಾಲಾ ದುಸ್ಥಿತಿ ಬಗ್ಗೆ ಕ್ರಮವಹಿಸಿರುವುದು ಸ್ವಾಗತಾರ್ಹ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ರಂಗಯ್ಯ, ಮಹಿಳಾ ಘಟಕದ ಅಧ್ಯಕ್ಷೆ ಉಷಾ, ಕಾರ್ಮಿಕ ಸಂಪತ್‌ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐಶ್ವರ್ಯ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಗುವಿನ ಮೇಲೆ ವೃದ್ಧನಿಂದ ಅತ್ಯಾಚಾರಕ್ಕೆ ಯತ್ನ

ಆರೋಪಿ ಬಂಧನ: ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲು

ಶ್ರೀರಂಗಪಟ್ಟಣ, ಡಿ.12– ವೃದ್ಧನೋರ್ವ ಹೆಣ್ಣು ಮಗುವಿನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ತಾಲೂಕಿನ ಕೆಆರ್‌ಎಸ್ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಶಿವಣ್ಣ (55) ಎಂಬಾತ ತನ್ನ ಪಕ್ಕದ ಮನೆಯ 3 ವರ್ಷದ ಮಗುವನ್ನು ಪುಸಲಾಯಿಸಿ ತನ್ನ ಮನೆಗೆ ಕರೆತಂದು ನಗ್ನಗೊಳಿಸಿ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಈ ವೇಳೆ ಪೋಷಕರು ಮಗು ಕಾಣದಿದ್ದಾಗ ಹುಡುಕಾಟ ನಡೆಸಿದ್ದು, ಮಗು ಚೀರಿದ ಶಬ್ದ ಕೇಳಿದ ಹಿನ್ನೆಲೆಯಲ್ಲಿ ಶಿವಣ್ಣನ ಮನೆ ಬಾಗಿಲು ಒಡೆದು ಮನೆಯೊಳಗೆ ತೆರಳಿ ನೋಡಲಾಗಿ ಪ್ರಕರಣ ಬೆಳಕಿಗೆ ಬಂದಿದ್ದು, ಆರೋಪಿ ಮಗುವನ್ನು ನಗ್ನ ಸ್ಥಿತಿಯಲ್ಲಿ ಬಿಟ್ಟು ಪರಾರಿಯಾಗಿದ್ದಾನೆ.

ತಕ್ಷಣ ಪೋಷಕರು ಹಾಗೂ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಕೆಆರ್‌ಎಸ್ ಪೊಲೀಸರು ಆರೋಪಿ ಶಿವಣ್ಣನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮಗುವನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಮರಕ್ಕೆ ಕಾರು ಡಿಕ್ಕಿ: ಚಾಲಕ ಸಾವು

ಕಿಕ್ಕೇರಿ, ಡಿ.12– ನಾಯಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಮರಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಗಾಂಧಿನಗರ ಬಳಿ ಮಂಗಳವಾರ ನಡೆದಿದೆ.

ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ನಿವಾಸಿ ಜವರೇಗೌಡರ ಪುತ್ರ ಹಾಗೂ ಟಾಟಾ ಕಂಪನಿ ನೌಕರ ಎ.ಜೆ.ರವಿಕುಮಾರ್(25) ಸಾವನ್ನಪ್ಪಿದವರು. ಈತ ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಯಿಂದ ವೈದ್ಯರನ್ನು ಗಾಂಧಿನಗರ ಆಸ್ಪತ್ರೆಗೆ ಬಿಟ್ಟು, ಔಷಧಿ ತರಲು ಕಿಕ್ಕೇರಿಗೆ ಆಗಮಿಸಿದ್ದ. ಔಷಧಿ ತೆಗೆದುಕೊಂಡು ಮತ್ತೆ ವಾಪಸ್ಸಾಗುವಾಗ ಗಾಂಧಿನಗರ ಬಳಿ ರಸ್ತೆಗೆ ಅಡ್ಡಲಾಗಿ ಬಂದ ನಾಯಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಮರಕ್ಕೆ ಕಾರು ಡಿಕ್ಕಿಯಾಗಿದೆ. ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಮೃತನ ತಂದೆ ಜವರೇಗೌಡ ನೀಡಿದ ದೂರಿನ ಮೇರೆಗೆ ಕಿಕ್ಕೇರಿ ಠಾಣೆ ಇನ್ಸ್‌ಪೆಕ್ಟರ್ ರೇವತಿ ಪ್ರಕರಣ ದಾಖಲಿಸಿಕೊಂಡಿದ್ದು, ಕೆ.ಆರ್.ಪೇಟೆ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಮೇಲುಕೋಟೆಯಲ್ಲಿ ನವಜಾತ ಹೆಣ್ಣು ಶಿಶುವಿನ ಶವಪತ್ತೆ

ಮೇಲುಕೋಟೆ, ಡಿ.12– ಪ್ರಖ್ಯಾತ ಧಾರ್ಮಿಕ ಕ್ಷೇತ್ರವಾದ ಮೇಲುಕೋಟೆಯ ದಳವಾಯಿ ಕೆರೆ ಏರಿಯ ಸಮೀಪದಲ್ಲಿ ನವಜಾತ ಹೆಣ್ಣು ಶಿಶುವಿನ ಶವ ದೊರೆತಿದೆ.

ಇನ್ನು ಕರುಳುಬಳ್ಳಿವುಳ್ಳ ಹೆಣ್ಣು ಮಗು ಬಹುಶಃ 2 ದಿನ ಹಿಂದೆಯಷ್ಟೇ ಜನಿಸಿದೆ ಎಂದು ಅಂದಾಜಿಸಲಾಗಿದೆ. ಅಪರಿಚಿತರು ಮಗುವಿನ ಶವವನ್ನು ಕವರ್‌ನಲ್ಲಿ ಸುತ್ತಿ ಕೆರೆ ಸಮೀಪದ ಏರಿ ಪಕ್ಕದಲ್ಲಿ ಬಿಸಾಡಿ ಹೋಗಿದ್ದಾರೆ. ಹೆಣ್ಣೆಂಬ ಕಾರಣಕ್ಕೋ ಅಥವಾ ಅಕ್ರಮ ಸಂಬಂಧದಿಂದ ಹುಟ್ಟಿದ ಮಗು ಎಂಬ ಕಾರಣಕ್ಕೋ ಸಾಯಿಸಿ ಬಿಸಾಡಿರಬಹುದು. ಇಲ್ಲವೇ ಸತ್ತ ಮಗು ದೇಹವನ್ನು ಎಸೆದು ಹೋಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಮೇಲುಕೋಟೆ ಪೊಲೀಸರು ಮಗುವಿನ ದೇಹವನ್ನು ವಶಕ್ಕೆ ಪಡೆದು ಪರೀಕ್ಷೆಗಾಗಿ ತಾಲೂಕು ಆಸ್ಪತ್ರೆ ಶವಾಗಾರಕ್ಕೆ ಕಳುಹಿಸಿದ್ದಾರೆ. ವೈದ್ಯಕೀಯ ಪರೀಕ್ಷೆಯಿಂದ ಮಗುವಿನ ಸಾವಿಗೆ ಕಾರಣ ತಿಳಿದು ಬರಲಿದ್ದು, ಘಟನೆ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು 61ನೇ ಉತ್ಥಾನ ದಿನಾಚರಣೆ

ಮಂಡ್ಯ, ಡಿ.12– ಜಿಲ್ಲಾ ಗೃಹರಕ್ಷಕ ದಳದ ಸಂಯುಕ್ತಾಶ್ರಯದಲ್ಲಿ 61ನೇ ಉತ್ಥಾನ ದಿನಾಚರಣೆ ಡಿ.13ರಂದು ಮಧ್ಯಾಹ್ನ 12.30ಕ್ಕೆ ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಹಾಗೂ ವೇದಿಕೆ ಸಮಾರಂಭ ಸಂಜೆ 4 ಗಂಟೆಗೆ ಹರ್ಡೀಕರ್ ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮದ ರ್‍ಯಾಲಿಯನ್ನು ಅಪರ ಪೊಲೀಸ್ ಅಧೀಕ್ಷಕ ಸಿ.ಈ.ತಿಮ್ಮಯ್ಯ ಉದ್ಘಾಟಿಸಲಿದ್ದಾರೆ. ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರು ವಿನೋದ್ ಖನ್ನಾ.ಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೊಲೀಸ್ ಅಧೀಕ್ಷಕ ಎನ್.ಯತೀಶ್ ಹಾಗೂ ಜಿಲ್ಲಾ ಗೃಹರಕ್ಷಕ ದಳ ಡೆಪ್ಯೂಟಿ ಕಮಾಂಡೆಂಟ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಲೆಗಳ ಮೂಲಕ ತಮಿಳುನಾಡಿಗೆ ನೀರು

ರಾಜ್ಯ ಸರ್ಕಾರದ ನಡೆಗೆ ಹಿತರಕ್ಷಣಾ ಸಮಿತಿ ಖಂಡನೆ

ಮಂಡ್ಯ, ಡಿ.12– ಜಿಲ್ಲೆಯ ರೈತರನ್ನು ಯಾಮಾರಿಸಿ, ನಾಲೆಗಳ ಮೂಲಕ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ನಡೆ ಖಂಡನೀಯ ಎಂದು ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಆಕ್ರೋಶ ವ್ಯಕ್ತಪಡಿಸಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳೆಗೆ ನೀರು ಬೇಕೆಂದು ಯಾವ ರೈತರೂ ಕೇಳುತ್ತಿಲ್ಲ. ಆದರೂ ವಿ.ಸಿ.ನಾಲೆ ಸೇರಿದಂತೆ ಜಿಲ್ಲೆಯ ಎಲ್ಲಾ ನಾಲೆಗಳ ಮೂಲಕ ನೀರು ಹರಿಸುವ ಮೂಲಕ ತಮಿಳುನಾಡಿನ ಹಿತ ಕಾಯಲು ಸರ್ಕಾರ ನಾಟಕವಾಡುತ್ತಿದೆ ಎಂದು ಆರೋಪಿಸಿದರು.

ನೀರಾವರಿ ಸಲಹಾ ಸಮಿತಿ ತೀರ್ಮಾನದಂತೆ ರೈತರ ಬೆಳೆಗಳಿಗೆ 4 ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುವುದು ಎಂದು ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಕೊನೆ ಕಟ್ಟು ನೀರನ್ನು ನ.8 ರಿಂದ ನ.23ರವರೆಗೆ ಹರಿಸಿ ನ.24ರಿಂದ ಕಾಲುವೆಗಳಲ್ಲಿ ನೀರು ನಿಲ್ಲಿಸಬೇಕಾಗಿತ್ತು. ಆದರೆ, ನ.24ರಿಂದಲೂ ಕಾಲುವೆಗಳಲ್ಲಿ ನೀರು ಹರಿಯುತ್ತಲೇ ಇದೆ. ಆ ಮೂಲಕ 18 ದಿನಗಳಿಂದ ನಿರಂತರವಾಗಿ ನೀರನ್ನು ಹರಿಸಲಾಗುತ್ತಿದ್ದು, ಸಮಿತಿ ಈ ವಿಷಯ ಖಚಿತಪಡಿಸಿಕೊಂಡಿದೆ. ಕೆಆರ್‌ಎಸ್‌ನಲ್ಲಿ ಸದ್ಯ ಇರುವ ನೀರಿನಲ್ಲಿ ಇನ್ನೂ ಎರಡು ಕಟ್ಟು ನೀರನ್ನು ಬಿಡಬಹುದಿತ್ತು. ಆದರೆ ಸರ್ಕಾರ ವಾಮಮಾರ್ಗದಲ್ಲಿ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಖಂಡನೀಯ ಎಂದು ಕಿಡಿಕಾರಿದರು.

ಇದರಿಂದಾಗಿ ತಮಿಳುನಾಡು ಇದನ್ನೇ ದಾಖಲೆ ಮಾಡಿಕೊಂಡು ಭವಿಷ್ಯದಲ್ಲಿ ನಿರಂತರವಾಗಿ ನಮ್ಮಿಂದ ನೀರನ್ನು ದೋಚಲು ಅವಕಾಶ ಮಾಡಿಕೊಟ್ಟಂತಾಗಿದೆ. ಸರ್ಕಾರದ ಈ ನಡೆ ಕರ್ನಾಟಕಕ್ಕೆ ಮಾಡಿದ ದ್ರೋಹ ಎಂದರು.

ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕಾವೇರಿ ನೀರು ರಕ್ಷಣೆಗೆ ಒತ್ತಾಯ ಮಾಡುತ್ತಿದ್ದರೂ ಸಹ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಕಾವೇರಿ ನದಿ ನೀರಿನ ವಿಷಯದಲ್ಲಿ ಚರ್ಚಿಸಲು ಎರಡೂ ಸದನಗಳ ಜಂಟಿ ವಿಶೇಷ ಅಧಿವೇಶನ ಕರೆಯಲು ಮುಖ್ಯಮಂತ್ರಿಗಳಿಗೆ ಹಾಗೂ ಎರಡೂ ಸದನಗಳ ಅಧ್ಯಕ್ಷರಿಗೆ, ಬಿಜೆಪಿ, ಜೆಡಿಎಸ್ ಶಾಸನಸಭೆ ಮುಖ್ಯಸ್ಥರಿಗೆ ಪತ್ರ ಬರೆದು ಒತ್ತಾಯಿಸಲಾಗಿತ್ತು. ಆದರೂ ಈ ವಿಷಯದಲ್ಲಿ ಯಾವುದೇ ನಿಲುವು ಪ್ರಕಟಿಸದೇ ನಿರ್ಲಕ್ಷಿಸಲಾಗಿದೆ. ಅಲ್ಲದೇ ಕಾವೇರಿ ಕೊಳ್ಳದ ನೀರಾವರಿ ಅಭಿವೃದ್ಧಿ, ಅಂತರ್ಜಲ ಅಭಿವೃದ್ಧಿ, ವಿದ್ಯುತ್ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ಕ್ರಮ ತೆಗೆದುಕೊಳ್ಳಲು ಒತ್ತಾಯಿಸಲಾಗಿತ್ತು. ಇವುಗಳ ಬಗ್ಗೆಯೂ ಸರ್ಕಾರ ಮೌನ ವಹಿಸಿರುವುದು ಸರಿಯಲ್ಲ. ಒಟ್ಟಾರೆ ಸರ್ಕಾರ ಹಾಗೂ ವಿರೋಧ ಪಕ್ಷಗಳು ಕಾವೇರಿ ನದಿ ನೀರಿನ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದೆ ಅಸಡ್ಡೆ ತೋರುತ್ತಿವೆ. ಆದ್ದರಿಂದ ಕಾವೇರಿ ಕೊಳ್ಳದ ರೈತರು, ಸಾರ್ವಜನಿಕರು, ನಾಗರಿಕರು ಒಟ್ಟಾಗಿ ಕಾವೇರಿ ನದಿ ನೀರನ್ನು ಉಳಿಸಿ ರಕ್ಷಿಸಿಕೊಳ್ಳಲು ಹೋರಾಟ ಮಾಡಬೇಕಾಗಿದೆ. ಇಲ್ಲದಿದ್ದರೆ ಸರ್ಕಾರ ರೈತರ ಮರಣ ಶಾಸನ ಬರೆಯಲಿದೆ ಎಂದು ಎಚ್ಚರಿಸಿದರು.

ಇತ್ತೀಚೆಗೆ ನಮ್ಮ ಹೋರಾಟ ಮತ್ತು ಸಂಘಟನೆ ಕುರಿತು ಅಸಡ್ಡೆಯಿಂದ ಮಾತನಾಡುವವರಿಗೆ ಸದ್ಯದಲ್ಲೇ ತಕ್ಕ ಉತ್ತರ ನೀಡಲಾಗುವುದು ಎಂದು ತಿರುಗೇಟು ನೀಡಿದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ಕೆ.ಬೋರಯ್ಯ, ಚಂದ್ರಶೇಖರ್, ಮುದ್ದೇಗೌಡ, ಎಸ್.ನಾರಾಯಣ್, ಕೆ.ಶಂಕರ್, ಮಹಾಂತಪ್ಪ, ದಸಂಸದ ಎಂ.ವಿ.ಕೃಷ್ಣ ಉಪಸ್ಥಿತರಿದ್ದರು.

ಸಂಕ್ರಾಂತಿ ಹಬ್ಬಕ್ಕೆ ನಾಲೆಗಳಿಗೆ ನೀರು ಹರಿಸಿ

ಮಂಡ್ಯ, ಡಿ.12– ರಾಜ್ಯ ಸರ್ಕಾರ ತಮಿಳುನಾಡಿಗೆ ಕದ್ದು ಮುಚ್ಚಿ ನೀರು ಹರಿಸುತ್ತಿರುವುದು ಖಂಡನೀಯವಾಗಿದ್ದು, ಪ್ರಸ್ತುತ ನಾಲೆಗಳಿಗೆ ನೀರು ಬಿಟ್ಟರೆ ಏನೂ ಪ್ರಯೋಜನವಿಲ್ಲ. ಹೀಗಾಗಿ ಸಂಕ್ರಾಂತಿ ಹಬ್ಬದ ವೇಳೆಗೆ ರೈತರ ಅನುಕೂಲಕ್ಕಾಗಿ ನಾಲೆಗಳಿಗೆ ನೀರು ಹರಿಸಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ಸುಗ್ಗಿ ಹಬ್ಬ ಸಂಕ್ರಾಂತಿ ಅತಿದೊಡ್ಡ ಹಬ್ಬವಾಗಿದ್ದು, ಜಾನುವಾರು ತೊಳೆಯಲು ಹಾಗೂ ಇನ್ನಿತರೆ ಕಾರ್ಯಗಳಿಗೆ ನೀರಿನ ಅವಶ್ಯಕತೆ ಇದೆ. ಹೀಗಾಗಿ ಒಂದು ಕಟ್ಟು ನೀರು ಬಿಡಲೇಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಜಿಲ್ಲೆಯ 7 ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಈಗಾಗಲೇ ಘೋಷಿಸಿದ್ದು, ಬರದ ಜೊತೆಗೆ ಅಣೆಕಟ್ಟೆಯಿಂದ ಸಮರ್ಪಕವಾಗಿ ನೀರು ಬಿಡದ ಪರಿಣಾಮ ಬೆಳೆಗಳು ನಾಶವಾಗಿದೆ. ಈ ನಿಟ್ಟಿನಲ್ಲಿ ಬರ ಹಾಗೂ ಬೆಳೆ ಪರಿಹಾರವನ್ನು ಸರ್ಕಾರ ರೈತರಿಗೆ ಕೊಡಬೇಕು. ಎಕರೆಗೆ ಕನಿಷ್ಠ 25 ಸಾವಿರ ರೂ. ನೀಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ಲಿಂಗಪ್ಪಾಜಿ, ಪ್ರಸನ್ನಗೌಡ, ರವಿಕುಮಾರ್, ನಾಗರಾಜು, ಶಂಕರ್, ಚಂದ್ರು, ವಿಜಯ್‌ಕುಮಾರ್ ಉಪಸ್ಥಿತರಿದ್ದರು.

ಲೋಕಸಭೆಗೆ ನಿಖಿಲ್ ಸ್ಪರ್ಧಿಸದಿದ್ದರೆ ನಾನು ಮಂಡ್ಯ ಟಿಕೆಟ್ ಆಕಾಂಕ್ಷಿ

ಮಂಡ್ಯ, ಡಿ.12– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಬೇಕೆಂಬುದು ಜಿಲ್ಲಾ ಜೆಡಿಎಸ್ ನಾಯಕರ ಆಶಯವಾಗಿದೆ. ಒಂದು ವೇಳೆ ನಿಖಿಲ್ ಸ್ಪರ್ಧಿಸದಿದ್ದರೆ ನಾನು ಮಂಡ್ಯ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ತಿಳಿಸಿದರು.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನಿಖಿಲ್ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದಿದ್ದಾರೆ. ಕುಮಾರಸ್ವಾಮಿ ಅವರು ತಮ್ಮ ನಿರ್ಧಾರವನ್ನು ಮತ್ತೊಮ್ಮೆ ಮರು ಪರಿಶೀಲನೆ ನಡೆಸಲಿ. ಮಂಡ್ಯದಿಂದ ನಿಖಿಲ್ ಅವರೇ ಸ್ಪರ್ಧಿಸಬೇಕೆಂಬುದು ಜಿಲ್ಲೆಯ ಎಲ್ಲಾ ನಾಯಕರ ಒಕ್ಕೊರಲ ನಿರ್ಧಾರ ಎಂದರು.

ಕಳೆದ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ರಾಮನಗರದಲ್ಲೂ ಷಡ್ಯಂತ್ರಗಳಿಂದ ಸೋತಿದ್ದು, ನಮಗೆ ಅವರ ಬಗ್ಗೆ ಕೃತಜ್ಞತೆ ಇದ್ದು ಅವರೇ ಮತ್ತೆ ಸ್ಪರ್ಧಿಸಬೇಕೆಂಬುದು ನಮ್ಮ ಆಶಯವಾಗಿದೆ. ಈ ಬಗ್ಗೆ ವರಿಷ್ಠರ ಗಮನಕ್ಕೂ ತರಲಾಗಿದ್ದು, ಅವರು ಈ ಸಂಬಂಧ ನಿರ್ಧಾರ ಮಾಡಬೇಕು. ನಿಖಿಲ್ ಸ್ಪರ್ಧಿಸದಿದ್ದರೆ ನಾನೂ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ತಿಳಿಸಿದರು.

ನಮ್ಮ ಮೊದಲ ಆದ್ಯತೆ ನಿಖಿಲ್ ಕುಮಾರಸ್ವಾಮಿ. ಅವರು ನಿಲ್ಲುವುದಿಲ್ಲ ಎಂದಾಗ ನಾನು ಸಹ ಆಕಾಂಕ್ಷಿಯಾಗುತ್ತೇನೆ. ಬಿಜೆಪಿ–ಜೆಡಿಎಸ್ ನಡುವೆ ಕ್ಷೇತ್ರ ಹೊಂದಾಣಿಕೆಯಾಗಿ ನಮಗೆ ಕ್ಷೇತ್ರ ಬಿಟ್ಟುಕೊಟ್ಟರೇ ನಾನು ಟಿಕೆಟ್‌ಗೆ ಬೇಡಿಕೆ ಇಡುತ್ತೇನೆ. ನಾನು ಅಭ್ಯರ್ಥಿಯಾಗಿ ನನ್ನ ವಿರುದ್ಧ ಸಚಿವ ಚಲುವರಾಯಸ್ವಾಮಿ ನಿಂತರೆ ಒಳ್ಳೆಯದು. ಅವರ ಆಡಳಿತವನ್ನು ಜನ ಒಪ್ಪಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಅಭಿವೃದ್ಧಿ ಯುದ್ಧೋಪಾದಿಯಲ್ಲಿ ನಡೆಯುತ್ತಿದ್ದು, ಅವರಿಗಿಂತ ಜಿಲ್ಲೆಯಲ್ಲಿ ಸಮರ್ಥ ನಾಯಕರಿಲ್ಲ. ಜಿಲ್ಲೆಯಲ್ಲಿ ಕಾಂಗ್ರೆಸ್ ಉಳಿದಿರುವುದೇ ಚಲುವರಾಯಸ್ವಾಮಿ ಅವರಿಂದ ಎಂದು ವ್ಯಂಗ್ಯವಾಡಿದರು. ನನಗೆ ಚಲುವರಾಯಸ್ವಾಮಿ ವಿರುದ್ಧ ನಿಂತುಕೊಳ್ಳಬೇಕು ಎಂಬುದು ಆಸೆ. ಜನ ನನ್ನ ಮತ್ತೆ ತಿರಸ್ಕಾರ ಮಾಡಿದರೆ ರಾಜಕೀಯವಾಗಿ ನಾನು ಒಂದು ನಿರ್ಧಾರ ತಗೆದುಕೊಳ್ಳಬಹುದು. ಸಚಿವ ಚಲುವರಾಯಸ್ವಾಮಿ ಸತ್ತ ಮೇಲೂ ಅಧಿಕಾರದಲ್ಲಿರುತ್ತೇನೆ ಎಂದುಕೊಂಡಿದ್ದಾರೆ. ಅದಕ್ಕಾಗಿ ಅಧಿಕಾರ ಇದ್ದಾಗ ವಿರೋಧಿಗಳನ್ನು ಸೆದೆ ಬಡಿಯಬೇಕು ಅನ್ನುವುದು ಆತನ ಮನಸ್ಥಿತಿ ಎಂದು ಟೀಕಿಸಿದರು.

ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ಕದಂಬ ಕೆನ್ನಾಳು ತಂಡಕ್ಕೆ ಪ್ರಥಮ ಬಹುಮಾನ



ಭಾರತೀನಗರ, ಡಿ.12– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ಶ್ರೀಮಾರಮ್ಮ ಸೇವಾ ಸಮಿತಿ ಹಾಗೂ ಅರುಣೋದಯ ಯುವಕರ ಸಂಘದಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯಲ್ಲಿ ಕದಂಬ ಕೆನ್ನಾಳು ತಂಡ ಪ್ರಥಮ ಸ್ಥಾನ ಪಡೆದು 15 ಸಾವಿರ ರೂ. ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಇನ್ನು ಮಾರಮ್ಮ ದೇವಿ ಯುವಕರ ತಂಡ ಅಣ್ಣೂರು ದ್ವಿತೀಯ ಸ್ಥಾನ ಪಡೆದು 10 ಸಾವಿರ ರೂ. ಹಾಗೂ ಟ್ರೋಫಿ, ತುಮಕೂರು ತಂಡ ತೃತೀಯ ಸ್ಥಾನ ಪಡೆದು 5 ಸಾವಿರ ರೂ. ಹಾಗೂ ಟ್ರೋಫಿ, ತಿ.ನರಸೀಪುರ ತಂಡ ನಾಲ್ಕನೇ ಸ್ಥಾನ ಪಡೆದು 3 ಸಾವಿರ ರೂ. ಹಾಗೂ ಟ್ರೋಫಿ ಪಡೆದವು.

ತೀರ್ಪುಗಾರರಾಗಿ ಕುಮಾರ್, ಎನ್.ಬಿ.ಕೃಷ್ಣ, ಕೆ.ಜೆ.ರಮೇಶ್, ಡಿ.ಬಿ.ಶಿವಣ್ಣ, ಓದುಲಿಂಗ, ಎಂ.ಶ್ರೀನಿವಾಸ್, ಬಸವರಾಜು, ಸುದೀಪ್ ಭಾಗವಹಿಸಿದ್ದರು.

ಈ ವೇಳೆ ಪಂದ್ಯಾವಳಿ ಆಯೋಜಕರಾದ ಪುರುಷೋತ್ತಮ್, ಪ್ರಜ್ವಲ್, ಸುಮಂತ್, ಶ್ರೀಮಾರಮ್ಮ ಸೇವಾ ಸಮಿತಿ ಗೌರವಾಧ್ಯಕ್ಷ ನಾಡಗೌಡ ರಾಜೀವ್, ಅಧ್ಯಕ್ಷ ಎ.ಟಿ.ಸಿದ್ದರಾಮೇಗೌಡ, ಕಾರ್ಯದರ್ಶಿ ಸಿದ್ದೇಗೌಡ, ಖಜಾಂಚಿ ನವೀನ್, ಮುಖಂಡರಾದ ಹರ್ಷ ರಾಮಣ್ಣ, ಟಿ.ತಮ್ಮಣ್ಣ, ಎ.ಆರ್.ಚಂದ್ರೇಶ್ ಸೇರಿದಂತೆ ಇನ್ನಿತರರಿದ್ದರು

ಬನ್ನೂರು ಬಳಿ ಮನೆಯೊಂದರಲ್ಲಿ ಲಿಂಗಪತ್ತೆ ಕಾರ್ಯ: ತನಿಖೆಗೆ ಆಗ್ರಹ



ಬನ್ನೂರು, ಡಿ.12– ಪಟ್ಟಣದ ಮನೆಯೊಂದರಲ್ಲಿ ಈಚೆಗೆ ಕೆಲ ಪ್ರಭಾವಿ ಖಾಸಗಿ ವ್ಯಕ್ತಿಗಳು ತಮ್ಮ ಪ್ರಭಾವದಿಂದ ಲಿಂಗ ಪತ್ತೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅದರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರೂ ಇದುವರೆಗೂ ಕ್ರಮ ಕೈಗೊಂಡಿಲ್ಲ. ಕೂಡಲೇ ಅಂತಹವರ ಮೇಲೆ ಕ್ರಮ ಕೈಗೊಳ್ಳುವಂತೆ ರಾಜ್ಯ ರೈತ ಸಂಘ ಮೂಲ ಸಂಘಟನೆ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಆಗ್ರಹಿಸಿದ್ದಾರೆ.

ಪಟ್ಟಣದ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಲಿಂಗ ಪತ್ತೆ ಕಾನೂನು ಬಾಹಿರವಾಗಿದ್ದರೂ ಪಟ್ಟಣದ ವಿವಿಧ ಭಾಗಗಳಲ್ಲಿ ಯಾರಿಗೂ ಕಾಣದ ಸ್ಥಳಗಳಲ್ಲಿ ಕೆಲವರು ಲಿಂಗ ಪತ್ತೆ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಜೊತೆಗೆ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುತ್ತಿರುವುದರಿಂದ ಸಮಾಜದಲ್ಲಿ ಲಿಂಗ ಅಸಮಾನತೆಯನ್ನು ಉಂಟು ಮಾಡುವ ಮೂಲಕ ಪ್ರಕೃತಿಯ ವಿರುದ್ಧವಾದ ಕೆಲಸವನ್ನು ಮಾಡುತ್ತಿದ್ದಾರೆ ಎಂದು ದೂರಿದರು.

ಇತ್ತೀಚೆಗೆ ಮೈಸೂರಿನಲ್ಲಿ ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಸುದ್ದಿಯಾಯಿತು. ಅದಕ್ಕೂ ಮುನ್ನವೇ ಬನ್ನೂರಿನಲ್ಲಿ ಖಾಸಗಿ ವಾಹಿನಿಯೊಂದು ಲಿಂಗ ಪತ್ತೆ ಮಾಡುತ್ತಿರುವ ವ್ಯವಸ್ಥೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದರೂ ಅವರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಹಲವಾರು ಅನುಮಾನವನ್ನುಂಟು ಮಾಡುತ್ತಿದೆ ಎಂದು ಅವರು ಆಪಾದಿಸಿದರು.

ಯಾರೇ ಪ್ರಭಾವಿ ವ್ಯಕ್ತಿಯಾಗಿದ್ದರೂ ಸಾಕ್ಷಿ ಸಮೇತ ಮಾಹಿತಿ ನೀಡಿದಾಗ ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದಲ್ಲಿ ಜಿಲ್ಲಾ ಸಚಿವರ ವಿರುದ್ಧ, ಜಿಲ್ಲಾಧಿಕಾರಿಗಳ ವಿರುದ್ಧ, ಜಿಲ್ಲಾ ಆರೋಗ್ಯಾಧಿಕಾರಿಗಳ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮೇಗಳಕೊಪ್ಪಲಿನ ರಂಗಸ್ವಾಮಿ, ಎಂ.ವಿ. ಕೃಷ್ಣಪ್ಪ, ರಾಮಕೃಷ್ಣ, ಜಯರಾಮೇಗೌಡ, ಜಯರಾಂ, ಯಾಚೇನಹಳ್ಳಿ ಚಿನ್ನಸ್ವಾಮಿ, ತಮ್ಮಣ್ಣ, ಯೋಗೇಶ್, ರಾಜಣ್ಣ ಸೇರಿದಂತೆ ಪ್ರಮುಖರು ಇದ್ದರು.

ಮಹಿಳೆ ಬೆತ್ತಲೆ ಪ್ರಕರಣ: ಸಂತ್ರಸ್ತೆಯ ವಿಡಿಯೋ, ಫೋಟೋ ಪ್ರಸಾರ ಮಾಡದಂತೆ ಹೈಕೋರ್ಟ್ ಆದೇಶ

ಬೆಂಗಳೂರು: ಬೆಳಗಾವಿಯ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ ಕಂಬಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದ ಪ್ರಕರಣದ ಸಂತ್ರಸ್ತೆಯ ಗುರುತು ಪತ್ತೆಯಾಗುವಂತೆ ವರದಿ ಮಾಡಿದ ಮಾಧ್ಯಮಗಳ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಹೈಕೋರ್ಟ್, ಸಂತ್ರಸ್ತೆಯ ವಿಡಿಯೋ ಅಥವಾ ಫೋಟೋ ಪ್ರಸಾರ ಮಾಡದಂತೆ ಮಂಗಳವಾರ ಆದೇಶಿಸಿದೆ. ಮಹಿಳೆಯೊಬ್ಬರನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿದ ಬಗ್ಗೆ ಮಾಧ್ಯಮಗಳ ವರದಿಗಳನ್ನು ಗಮನಿಸಿದ ಹೈಕೋರ್ಟ್, ಈ ಸಂಬಂಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ ಮತ್ತು ಘಟನೆಗೆ ಸಂಬಂಧಿಸಿದ ಯಾವುದೇ ವೀಡಿಯೊಗಳನ್ನು ಪ್ರಸಾರ ಮಾಡದಂತೆ ಎಲ್ಲಾ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಆದೇಶಿಸಿದೆ.

ಸಾಲದ ಬಾಧೆ: ಕೆರೆಗೆ ಹಾರಿ ರೈತ ಆತ್ಮಹತ್ಯೆ

ಹುಣಸೂರು, ಡಿ.12– ಸಾಲದ ಭಾಧೆ ತಾಳಲಾರದೆ ರೈತನೋರ್ವ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ಹುಣಸೂರು ತಾಲೂಕು ಹನಗೋಡು ಹೋಬಳಿ ಅತ್ತಿಕುಪ್ಪೆ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಕುಮಾರ್(45) ಮೃತ ದುರ್ದೈವಿ. ಕರ್ನಾಟಕ ಬ್ಯಾಂಕ್‌ನಲ್ಲಿ 5ಲಕ್ಷ, ಕೈ ಸಾಲ 3ಲಕ್ಷ, ಒಟ್ಟು 10 ಲಕ್ಷ ರೂ. ಸಾಲ ಮಾಡಿದ್ದ ಕುಮಾರ್‌ಗೆ ಸಾಲಗಾರರು ಹಣ ವಾಪಸ್ ಕೊಡುವಂತೆ ಪೀಡಿಸಲಾರಂಭಿಸಿದರೆನ್ನಲಾಗಿದೆ ಇದರಿಂದ ಸಾಲ ಹಿಂದಿರುಗಿಸಲಾಗದ ಹಿನ್ನಲೆ ಹೆದರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಎರಡು ಎಕರೆ ಜಮೀನು ಇದ್ದು ತಂಬಾಕು ಮತ್ತೆ ಶುಂಠಿ ಬೆಳೆದು ಮಳೆ ಇಲ್ಲದೆ ನಷ್ಟ ಹೊಂದಿದ ಕುಮಾರ್ ಅತ್ತಿ ಕುಪ್ಪೆ ಗ್ರಾಮದ ಮನೆಯ ಸಮೀಪದಲ್ಲಿರುವ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರದಿಂದ ಪರಿಹಾರ ನೀಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕಟ್ಟೆಮಳಲವಾಡಿಯಲ್ಲಿ ಅಂಬೇಡ್ಕರ್ ಪ್ರತಿಮೆ ಗೋಪುರ ನಿರ್ಮಾಣ

10 ಲಕ್ಷ ರೂ. ಅನುದಾನ ನೀಡಿದ ಸಂಸದ ಪ್ರತಾಪ್ ಸಿಂಹ

ಹಿರೀಕ್ಯಾತನಹಳ್ಳಿ, ಡಿ.12– ಕೊಡಗು ಮೈಸೂರು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಸಂಸದರ ನಿಧಿಯಿಂದ ಕಟ್ಟೆಮಳಲವಾಡಿ ಗ್ರಾಮದಲ್ಲಿ ನಿರ್ಮಾಣಗೊಳ್ಳುತ್ತಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಗೋಪುರಕ್ಕೆ 10 ಲಕ್ಷ ಅನುದಾನ ನೀಡಿದ್ದಾರೆ.

ಹುಣಸೂರು ತಾಲೂಕಿನ ಕಟ್ಟೆ ಮಳಲವಾಡಿ ಗ್ರಾಮದಲ್ಲಿ ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಪ್ರತಿಮೆ ಕಾಮಗಾರಿ ವೀಕ್ಷಿಸಿ ಮಾತನಾಡಿ, ಇಂತಹ ಭವ್ಯವಾದ ಅಂಬೇಡ್ಕರ್ ಗೋಪುರವು ಸುಂದರವಾಗಿ ಮೂಡಿಬರುತ್ತಿದೆ. ಇದು ಭಾರತದಲ್ಲಿ ದೆಹಲಿಯಲ್ಲಿ ಬಿಟ್ಟರೆ ಕಟ್ಟೆ ಮಳಲವಾಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವುದು ಸಂತೋಷದ ವಿಷಯ. ಅಂಬೇಡ್ಕರ್ ಅವರ ಅನುಯಾಯಿಯಾಗಿದ್ದು ಸಂವಿಧಾನಕ್ಕೆ ಹೆಚ್ಚು ಗೌರವ ಕೊಡುವ ವ್ಯಕ್ತಿ ನಾನೂ ಒಬ್ಬ. ಹಾಗೂ ಜೊತೆಗೆ ಗೋಪುರದ ಪಕ್ಕದಲ್ಲಿ ಹೈಟೆಕ್ ಡಿಜಿಟಲ್ ಗ್ರಂಥಾಲಯ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿ ಸಹಾಯ ಮಾಡುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರತಿಮೆ ನಿರ್ಮಾಣದ ಸಮಿತಿಯಿಂದ ಸಂಸದ ಪ್ರತಾಪ್ ಸಿಂಹರವರನ್ನು ಸನ್ಮಾನಿಸಲಾಯಿತು. ಪ್ರತಿಮೆ ನಿರ್ಮಾಣ ಸಮಿತಿಯ ಅಧ್ಯಕ್ಷ ನಾಗರಾಜ್ ಮಲ್ಲಾಡಿ, ಪ್ರಧಾನ ಕಾರ್ಯದರ್ಶಿ ನಟರಾಜ್, ಸಮಿತಿ ನಿರ್ದೇಶಕರುಗಳಾದ ಶ್ರೀಧರ್,ಪುಟ್ಟರಾಜ್, ತಗಡಯ್ಯ, ರಾಜು, ಸಂತೋಷ್, ಮಹದೇವ, ಮಧು, ಕುಮಾರ್, ಹಾಗೂ ಹಲವರು ಹಾಜರಿದ್ದರು.



ಮೂಲಸೌಕರ್ಯಗಳಿಂದ ವಂಚಿತವಾಗಿರುವ ನಂ.ಗೂಡು 82 ಬಡಾವಣೆಗಳು

- ನೀರಿಲ್ಲ, ಲೈಟಿಲ್ಲ, ಚರಂಡಿಯಂತೂ ಇಲ್ಲವೇ ಇಲ್ಲ, ಗುಂಡಿಗಳೇ ರಸ್ತೆಗಳು
- ತೆರಿಗೆ ಬೇಕು, ಅಭಿವೃದ್ಧಿ ಮಾತ್ರ ಸಾಧ್ಯವಿಲ್ಲ, ಕೇಳೋರು ಯಾರಿಲ್ಲ ಸೋಳು





ಹೆಚ್.ಡಿ.ರಂಗಸ್ವಾಮಿ.

ನಂಜನಗೂಡು, ಡಿ.12– ಅಭಿವೃದ್ಧಿಯ ನಿರೀಕ್ಷೆಯೊಂದಿಗೆ ದೇವಿರಮ್ಮನಹಳ್ಳಿ ಹಾಗೂ ದೇಬೂರು ಗ್ರಾಪಂ ವ್ಯಾಪ್ತಿಯ 82 ಬಡಾವಣೆಗಳನ್ನು ನಗರಸಭೆ ವ್ಯಾಪ್ತಿಗೆ ಸೇರಿಸಿ 6 ವರ್ಷಗಳೇ ಕಳೆದರೂ ಯಾವುದೇ ಅಭಿವೃದ್ಧಿ ಕಾಣದೆ ಮೂಲೆಗುಂಪಾಗಿದೆ.

ತೆರಿಗೆ ಬೇಕು, ಮೂಲಸೌಕರ್ಯ ಒದಗಿಸಲು ನಮ್ಮಿಂದ ಸಾಧ್ಯವಿಲ್ಲ ಎಂಬಂತೆ ನಗರಸಭೆ ಆಡಳಿತ ವರ್ತಿಸುತ್ತಿದ್ದು, ಸಾರ್ವಜನಿಕರು ಕನಿಷ್ಠ ಮೂಲ ಸೌಕರ್ಯಗಳಿಲ್ಲದೆ ಪರದಾಡುವಂತಾಗಿದೆ.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲೇ ಉಳಿದರೆ ಎಲ್ಲಾ ಬಡಾವಣೆಗಳಿಗೂ ಮೂಲ ಸೌಕರ್ಯ ಒದಗಿಸಲು ಕಷ್ಟವಾಗಲಿದೆ. ನಗರಸಭೆ ವ್ಯಾಪ್ತಿಗೆ ಸೇರಿದರೆ ನಗರೋತ್ಥಾನ ಯೋಜನೆ, ಮುಡಾ ಅನುದಾನ ತಂದು ಎಲ್ಲಾ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಬಹುದು ಎಂಬ ನಿರೀಕ್ಷೆಯೊಂದಿಗೆ ಹಾಗೂ ನಂಜನಗೂಡು ನಗರ ವ್ಯಾಪ್ತಿಯ ಸಮೀಪವಿದ್ದ ಕಾರಣದಿಂದಾಗಿ ದೇವಿರಮ್ಮನಹಳ್ಳಿ ಮತ್ತು ದೇಬೂರು ಗ್ರಾಮ ಪಂಚಾಯ್ತಿಯ ಸುಮಾರು 82 ಬಡಾವಣೆಗಳನ್ನು ನಗರಸಭೆ ವ್ಯಾಪ್ತಿಗೆ ಸೇರಿಸಿ ನಗರಸಭೆಗೆ ಹಸ್ತಾಂತರಿಸಲಾಯಿತು. ಶಾಸನಬದ್ಧವಾಗಿ ಹಸ್ತಾಂತರವಾಗಿ ಸುಮಾರು 6 ವರ್ಷಗಳೇ ಕಳೆದರೂ ಸಹ ಬಡಾವಣೆಗಳಿಗೆ ಕನಿಷ್ಠ ಮೂಲಸೌಕರ್ಯ ಕಲ್ಪಿಸುವಲ್ಲಿ ನಗರಸಭೆ ಆಡಳಿತ ವಿಫಲವಾಗಿದೆ.

ಕನಿಷ್ಠ ಮೂಲಸೌಕರ್ಯಗಳಿಲ್ಲ: ನಗರಸಭೆಗೆ ಹಸ್ತಾಂತರವಾದ ನಂತರ ಈ ಬಡಾವಣೆಗಳಿಂದ ಕೋಟ್ಯಾಂತರ ರೂ.ಗಳ ತೆರಿಗೆ ಸಂಗ್ರಹವಾಗುತ್ತಿದೆ. ಆದರೂ ಸಹ ಈ ಬಡಾವಣೆಗಳಿಗೆ ಸಂಪರ್ಕ ರಸ್ತೆ ಸೌಕರ್ಯವಿಲ್ಲ, ಚರಂಡಿ ವ್ಯವಸ್ಥೆಯಂತೂ ಇಲ್ಲವೇ ಇಲ್ಲ, ಕುಡಿಯುವ ನೀರಿನ ಸೌಕರ್ಯ ಕೆಲವೇ ಕೆಲವು ಬೆರಳೆಣಿಕೆಯ ಬಡಾವಣೆಗಳಿಗೆ ಬಿಟ್ಟರೆ ಉಳಿದ ಬಡಾವಣೆಗಳ ಜನರು ಬೋರ್‌ವೆಲ್ ನೀರನ್ನೇ ಅವಲಂಬಿಸುವಂತಾಗಿದೆ ನಗರಸಭೆ ಆಡಳಿತ ಶಾಶ್ವತವಾಗಿ ನೀರಿನ ಸಮಸ್ಯೆ ಬಗೆಹರಿಸುವ, ನೀರಿನ ಸಂಪರ್ಕ ಕಲ್ಪಿಸುವಂತಹ ಸಣ್ಣ ಪ್ರಯತ್ನವನ್ನೂ ಮಾಡಿಲ್ಲ.

ಅಲ್ಲದೆ ಸರಿಯಾದ ಬೀದಿದೀಪಗಳಿಲ್ಲದೆ ಹಾಕಿರುವ ಬೀದಿದೀಪಗಳ ನಿರ್ವಹಣೆಯಿಲ್ಲದೆ ಜನರು ಪರದಾಡುವಂತಾಗಿದೆ. ಜೊತೆಗೆ ಸರಿಯಾದ ರಸ್ತೆ ಸಂಪರ್ಕವಿಲ್ಲದೆ ಮಳೆ ಬಂದಾಗ ಮಳೆ ನೀರು ತುಂಬಿಕೊಂಡು ಸಂಚಾರ ಕಷ್ಟವಾಗುವುದು ಒಂದೆಡೆಯಾದರೆ, ರಸ್ತೆಯ ಮೇಲಿನ ಮಣ್ಣು ಕೊಚ್ಚಿ ಹೋಗಿ ಹಳ್ಳವಾಗಿ ದ್ವಿಚಕ್ರ ವಾಹನವನ್ನೂ ಚಲಾಯಿಸಲು ಸಾಧ್ಯವಾಗದಷ್ಟು ರಸ್ತೆ ಹಾಳಾಗುತ್ತದೆ. ಇದರಿಂದ ಆಟೋ ಕೂಡ ಈ ಬಡಾವಣೆಗಳಿಗೆ ಬಾರದೆ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ತೆರಳಲೂ ಕೂಡ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಜನರು ಜೀವಿಸುತ್ತಿದ್ದಾರೆ. ಸಾರ್ವಜನಿಕರು, ವಯೋವೃದ್ಧರು, ಮಹಿಳೆಯರು ನಡೆದೇ ಬಡಾವಣೆಯಲ್ಲಿರುವ ತಮ್ಮ ಮನೆ ತಲುಪುವಂತಾಗಿದೆ.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದ್ದ ಸಂದರ್ಭದಲ್ಲಿ ಈ ಬಡಾವಣೆಗಳಿಗೆ ಟ್ಯೂಬ್‌ಲೈಟ್ ಅಳವಡಿಸಲಾಗಿತ್ತು. ಆದರೆ ನಗರಸಭೆ ವ್ಯಾಪ್ತಿಗೆ ಹಸ್ತಾಂತರವಾದ ನಂತರ ಈ ಬೀದಿದೀಪಗಳ ನಿರ್ವಹಣೆಯನ್ನೂ ಮಾಡದ ಕಾರಣ ಜನರು ಕತ್ತಲೆಯಲ್ಲೇ ಜೀವನ ದೂಡುವಂತಾಗಿದೆ. ಈ ಭಾಗದಲ್ಲಿ ಅತಿ ಹೆಚ್ಚು ಸರಗಳ್ಳತನ ಪ್ರಕರಣಗಳು, ಮನೆಕಳ್ಳತನ ಪ್ರಕರಣಗಳು ಜರುಗುತ್ತಿರುವ ಕಾರಣ ಸಾರ್ವಜನಿಕರು ಭಯದಲ್ಲೇ ಜೀವಿಸುತ್ತಿದ್ದಾರೆ. ಸಾರ್ವಜನಿಕರು ಈ ಬಗ್ಗೆ ಪ್ರಶ್ನಿಸಿದರೆ ನಗರಸಭೆಯ ಅಧಿಕಾರಿಗಳು ಸಣ್ಣಸಣ್ಣ ಬಲ್ಬ್ ಅಳವಡಿಸಿ ಕೈತೊಳೆದುಕೊಂಡಿದ್ದಾರೆ. ಈ ಬಡಾವಣೆಗಳಿಗೆ ತೆರಳುವ ರಸ್ತೆಯ ಬದಿಗಳಲ್ಲಿ ಗಿಡಗಂಟಿಗಳು ಬೆಳೆದುಕೊಂಡಿದ್ದರೂ ಸಹ ಆ ಗಿಡಗಂಟಿಗಳನ್ನೂ ತೆರವು ಮಾಡಲೂ ಸಹ ನಗರಸಭೆ ಆಡಳಿತ ಮುಂದಾಗಿಲ್ಲ. ಕಸ ಸಂಗ್ರಹಣೆ ವಾಹನ ಈ ಬಡಾವಣೆಗಳಿಗೆ ಬರುತ್ತದೆ ಆದರೆ ಕಸ ಗುಡಿಸುವ ಪೌರಕಾರ್ಮಿಕರು ಇತ್ತ ಸುಳಿಯುವುದಿಲ್ಲ.

ಉದ್ಯಾನವನದ ಅಭಿವೃದ್ಧಿ ಮರೀಚಿಕೆ: ಈ ಬಡಾವಣೆಗಳಲ್ಲಿರುವ ಉದ್ಯಾನವನಗಳ ಅಭಿವೃದ್ಧಿಗೆ ಈ ಬಡಾವಣೆಗಳಿಂದಲೇ ಸಂಗ್ರಹವಾಗುವ ಶೇ 50 ರಷ್ಟು ಹಣವನ್ನು ಮೀಸಲಿಟ್ಟು ಅಭಿವೃದ್ಧಿಪಡಿಸಬಹುದು. ಆದರೆ ಆ ಹಿತಾಶಕ್ತಿ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಇಲ್ಲ. ಆದ್ದರಿಂದ ಉದ್ಯಾನವನಗಳು ಹಾವು, ಚೇಳುಗಳ ವಾಸಸ್ಥಳವಾಗಿವೆ.

ಜನಪ್ರತಿನಿಧಿಗಳಿಲ್ಲದೆ ಸಮಸ್ಯೆ: ಈ ಮೊದಲು ಈ ಬಡಾವಣೆಗಳು ಗ್ರಾಪಂ ವ್ಯಾಪ್ತಿಗೆ ಒಳಪಟ್ಟದ್ದ ಕಾರಣದಿಂದ ಗ್ರಾಪಂ ಸದಸ್ಯರು ಆಯ್ಕೆಯಾಗುತ್ತಿದ್ದರು. ಅಲ್ಪ ಪ್ರಮಾಣದಲ್ಲಿ ಅಧಿಕಾರಿಗಳ, ಜನಪ್ರತಿನಿಧಿಗಳ ಬೆನ್ನು ಬಿದ್ದು ಕೆಲಸ ಮಾಡಿಸಲು ಮುಂದಾಗುತ್ತಿದ್ದರು. ಆದರೆ ನಗರಸಭೆಗೆ ಹಸ್ತಾಂತರಿಸುವ ಕಾರಣ ದೇವಿರಮ್ಮನಹಳ್ಳಿ, ದೇಬೂರು ಗ್ರಾಮ ಪಂಚಾಯ್ತಿಗಳಿಗೆ ಚುನಾವಣಾ ಪ್ರಕ್ರಿಯೆಯನ್ನೇ ನಡೆಸಿಲ್ಲ. ಇದರಿಂದಾಗಿ ಈ ಬಡಾವಣೆಗಳ ಜನರು ಸ್ಥಳೀಯ ಜನಪ್ರತಿನಿಧಿಗಳಿಲ್ಲದೆ ಪರದಾಡುವಂತಾಗಿದೆ. ಇತ್ತ ಗ್ರಾಮ ಪಂಚಾಯ್ತಿಯಲ್ಲೂ ಇಲ್ಲದೆ ಇತ್ತ ನಗರಸಭೆ ವ್ಯಾಪ್ತಿಯಲ್ಲೂ ಇಲ್ಲದೆ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಶಾಸಕ ದರ್ಶನ್ ಧ್ರುವನಾರಾಯಣ್ ಇಷ್ಟೆಲ್ಲಾ ಸಮಸ್ಯೆಗಳ ಆಗರವಾಗಿರುವ ಗೋವಿಂದರಾಜ ಬಡಾವಣೆ, ರಾಮಸ್ವಾಮಿ ಬಡಾವಣೆ, ಬುದ್ಧನಗರ, ರಾಮಸ್ವಾಮಿ 1ನೇ 2ನೇ ಹಂತ ಸೇರಿದಂತೆ ನಗರಸಭೆಗೆ ಸೇರ್ಪಡೆಯಾಗಿರುವ 82 ಬಡಾವಣೆಗಳಲ್ಲಿ ಕನಿಷ್ಠ ಮೂಲಸೌಕರ್ಯ ಮತ್ತು ಸಂಪರ್ಕ ರಸ್ತೆಗಳನ್ನು ಕಲ್ಪಿಸಲು ಮುಂದಾಗಿ ಸಮಸ್ಯೆ ಬಗೆಹರಿಸುವರೇ ಎಂಬ ನಿರೀಕ್ಷೆಯಲ್ಲಿದ್ದಾರೆ.

ಕೆಆರ್‌ಎಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ಪೋಕ್ಸೋ ಪ್ರಕರಣ ದಾಖಲು

● ಸಂತ್ರಸ್ತರ ಆರೋಗ್ಯ ವಿಚಾರಿಸಿದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ
● ಈ ಕಾಯ್ದೆಯಡಿ ಇರುವ ಶಿಕ್ಷೆ ಪ್ರಮಾಣ ಮನವರಿಕೆ ಮಾಡಿಕೊಟ್ಟರೆ ಪ್ರಕರಣ ತಡೆಯುವ ಪ್ರಯತ್ನ ಆಗಬಹುದು



ಮೈಸೂರು, ಡಿ.12(ಎಸ್‌ಬಿಡಿ)–ಪೋಕ್ಸೋ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ 11 ಇಲಾಖೆಗಳ ಸಾಮೂಹಿಕ ಕಾರ್ಯ ನಿರ್ವಹಣೆ ಸಂಬಂಧ ಚಿಂತನೆ ನಡೆದಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ತಿಳಿಸಿದರು.

ಮಂಡ್ಯ ಜಿಲ್ಲೆ ಕೆಆರ್‌ಎಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 59 ವರ್ಷದ ವ್ಯಕ್ತಿಯಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮೂರು ವರ್ಷದ ಮಗುವನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆ ಆವರಣದ 'ಸಖಿ ಒನ್ ಸ್ಟಾಪ್ ಸೆಂಟರ್'ನಲ್ಲಿ ದಾಖಲಿಸಿದ್ದು, ಇಲ್ಲಿಗೆ ಮಂಗಳವಾರ ಭೇಟಿ ನೀಡಿದ್ದ ವೇಳೆ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಕೆಆರ್‌ಎಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ಪೋಕ್ಸೋ ಪ್ರಕರಣಗಳು ದಾಖಲಾಗಿವೆ. 5ನೇ ತರಗತಿ ವಿದ್ಯಾರ್ಥಿನಿಗೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ ಪ್ರಕರಣ ಸಂಬಂಧ ಆರೋಪಿಯನ್ನು ಬಂಧಿಸಲಾಗಿದೆ. 3 ವರ್ಷದ ಮಗುವಿನ ಮೇಲೆ ದೌರ್ಜನ್ಯವೆಸಗಿರುವ ಸಂಬಂಧ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸುವ ನಿಟ್ಟಿನಲ್ಲಿ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ. ವಿಷಯ ತಿಳಿದು ಮಗುವಿನ ಆರೋಗ್ಯ ವಿಚಾರಿಸಿ, ಪೋಷಕರಿಗೆ ಸಾಂತ್ವನ ಹೇಳಲು ಬಂದಿದ್ದೇನೆ ಎಂದರು.

ಸಣ್ಣ ಮಕ್ಕಳ ಮೇಲೆ ಹೀಗೆ ದೌರ್ಜನ್ಯ ನಡೆಸುವಂತಹ ವ್ಯಾಘ್ರಗಳಿದ್ದಾರೆ. ಈ ರೀತಿಯ ಪೋಕ್ಸೋ ದೌರ್ಜನ್ಯಗಳು ಆಗದಂತೆ ತಡೆಗಟ್ಟಲು ಅಗತ್ಯ ಕ್ರಮಗಳನ್ನು ಮಕ್ಕಳ ರಕ್ಷಣಾ ಆಯೋಗ ಮತ್ತು ಸರ್ಕಾರದ ವತಿಯಿಂದ ಕೈಗೊಳ್ಳಲಾಗುವುದು. ಹೈಕೋರ್ಟ್‌ನ ಜೂನಿಯರ್ ಜಸ್ಟಿಸ್ ಕಮಿಟಿಯಲ್ಲಿ ಪ್ರತಿ ತಿಂಗಳು ಪೋಕ್ಸೋ ಪ್ರಕರಣ ಸಂಬಂಧ ಚರ್ಚೆಗಳಾಗುತ್ತಿವೆ. ಪೋಕ್ಸೋ ಕಾಯ್ದೆಯಡಿ 20 ವರ್ಷ ಜೈಲುಶಿಕ್ಷೆಯಿದ್ದು, ಮರಣದಂಡನೆ ಶಿಕ್ಷೆ ನೀಡಬೇಕೆಂಬ ಒತ್ತಾಯವಿದೆ ಎಂದರು. ಪೋಕ್ಸೋ ಕಾಯ್ದೆ ಪ್ರಕರಣಗಳು ಆಗದ ರೀತಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಿದೆ. ಈ ಪ್ರಕರಣಗಳ ಶಿಕ್ಷೆಯ ತೀವ್ರತೆಯನ್ನು ಮನದಟ್ಟು ಮಾಡಬೇಕಿದೆ. ಈ ನಿಟ್ಟಿನಲ್ಲಿ ಆರೋಗ್ಯ, ಪೊಲೀಸ್, ಶಿಕ್ಷಣ ಸೇರಿದಂತೆ 11 ಇಲಾಖೆಗಳು ಒಮ್ಮತದಿಂದ ಯಾವ ರೀತಿ ಪರಿಣಾಮಕಾರಿ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಪೋಕ್ಸೋ ಪ್ರಕರಣದಲ್ಲಿ ಖಂಡಿತವಾಗಿ ಕಾನೂನು ಬದ್ಧ ಶಿಕ್ಷೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗದಂತೆ ನಮ್ಮ ಆಯೋಗ ನಿಗಾ ವಹಿಸುತ್ತಿದೆ. ಒನ್ ಸ್ಟಾಪ್ ಸಖಿ ಸೆಂಟರ್‌ನಲ್ಲಿ ಕಾನೂನು, ವೈದ್ಯಕೀಯ, ಸಮಾಲೋಚನೆ, ಆಹಾರ, ರಕ್ಷಣೆ ಸೇರಿದಂತೆ ಒಂದೇ ಸೂರಿನಡಿ ಹತ್ತಾರು ಅನುಕೂಲತೆಗಳಿವೆ ಎಂದು ತಿಳಿಸಿದರು.

ಬಾಲ ತಾಯಂದಿರು ಹೆಚ್ಚಿದ್ದಾರೆ: ರಾಜ್ಯದಲ್ಲಿ ಬಾಲ್ಯ ವಿವಾಹಗಳಿಂದ ಬಾಲ ತಾಯಂದಿರ ಸಂಖ್ಯೆ ಹೆಚ್ಚಿದ್ದು 18 ವರ್ಷಕ್ಕಿಂತ ಕಡಿಮೆ ವಯಸ್ಸಿಗೆ ಮದುವೆ ಮಾಡುವುದರಿಂದ ಬಾಲ ತಾಯಂದಿರ ಸಂಖ್ಯೆ ಹೆಚ್ಚಳವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರಾಸರಿ 30–40 ಸಾವಿರ ಬಾಲ ತಾಯಂದಿರು ಪತ್ತೆಯಾಗುತ್ತಿದ್ದಾರೆ. ಬಾಲ್ಯವಿವಾಹವಾಗಿದ್ದ ಸಂದರ್ಭದಲ್ಲಿ ಪ್ರಕರಣ ಬೆಳಕಿಗೆ ಬಂದಿರುವುದಿಲ್ಲ. ಆದರೆ 18 ವರ್ಷದೊಳಗಿನ ಹೆಣ್ಣು ಮಕ್ಕಳು ತಾಯಿಯಾದಾಗ ಬಾಲ್ಯವಿವಾಹ ಪ್ರಕರಣಗಳು ಬಯಲಾಗುತ್ತಿವೆ. ಪೋಷಕರೇ ಮಕ್ಕಳಿಗೆ ಬಾಲ್ಯವಿವಾಹ ಮಾಡುವುದು ಒಂದೆಡೆಯಾದರೆ ಮತ್ತೊಂದೆಡೆ ಸಾಮಾಜಿಕ ಜಾಲತಾಣಗಳ ಮೂಲಕ ಯಾರೋ ಪರಿಚಯವಾಗಿ ಈ ರೀತಿಯ ಘಟನೆಗಳಾಗುತ್ತಿವೆ ಎಂದು ಹೇಳಿದರು.


18 ವರ್ಷದೊಳಗಿನವರು ತಾಯಿಯಾದರೆ ಆ ಕೂಡಲೇ ಸಂಬಂಧಪಟ್ಟವರ ವಿರುದ್ಧ ಬಾಲ್ಯವಿವಾಹ ಪ್ರಕರಣ ಹಾಗೂ ಪತಿ ಮೇಲೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗುತ್ತದೆ.

ಪತಿ ಜೈಲಿಗೆ ಹೋದರೆ ಸಂತ್ರಸ್ತೆ ನೆರವು ಕೇಂದ್ರದಲ್ಲಿರಬೇಕಾಗುತ್ತದೆ. ಹಾಗಾಗಿ ಚೈಲ್ಡ್ ಮ್ಯಾರೇಜ್ ಅಲ್ಲ ಅದು ಜೈಲ್ ಮ್ಯಾರೇಜ್. ರಾಮನಗರ ಜೈಲಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿದ್ದ 194 ವಾಸಿಗಳಲ್ಲಿ 120 ಪೋಕ್ಸೋ ಪ್ರಕರಣದಲ್ಲಿ ಜೈಲು ಸೇರಿದವರು ಎಂದು ತಿಳಿಯಿತು. ದೇಶದ ಸಂಪತ್ತಾಗಬೇಕಾದ ಯುವಕರು ಹೀಗೆ ಜೈಲು ಸೇರಿದರೆ ಹೇಗೆ?. ಸಾರ್ವಜನಿಕರಲ್ಲಿ ಇದರ ಕುರಿತು ಅರಿವು ಮೂಡಿಸುವುದರ ಜೊತೆಗೆ ಕಾನೂನು ತೀವ್ರತೆಯನ್ನೂ ಅರ್ಥ ಮಾಡಿಸಬೇಕಿದೆ ಎಂದರು.

> ಮೈಸೂರು ಜಿಲ್ಲೆಯಲ್ಲಿ ಪ್ರಸಕ್ತ ತಿಂಗಳ 10 ದಿನಗಳಲ್ಲಿ 10 ಪೋಕ್ಸೋ ಪ್ರಕರಣ ದಾಖಲಾಗಿವೆ. ಈ ಪ್ರಕರಣಗಳು ಘಟಿಸದಂತೆ ಆರೋಪಿಗಳಿಗೆ ಕಠಿಣಾತಿಕಠಿಣ ಶಿಕ್ಷೆಯಾಗಬೇಕು. ಈ ನಿಟ್ಟಿನಲ್ಲಿ ಆಯೋಗದಿಂದಲೂ ಸರ್ಕಾರಕ್ಕೆ ಸಾಕಷ್ಟು ಸಲಹೆಗಳನ್ನು ನೀಡಲಾಗುತ್ತಿದೆ.
> –ಕೆ.ನಾಗಣ್ಣಗೌಡ, ಅಧ್ಯಕ್ಷರು
> ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಭದ್ರಾವತಿ ಮೈಸೂರು ಕಾಗದ ಕಾರ್ಖಾನೆ ಪುನರಾರಂಭಕ್ಕೆ ಚಿಂತನೆ







ಬೆಂಗಳೂರು, ಡಿ. 12(ಕೆಎಂಶಿ)– ಭದ್ರಾವತಿಯಲ್ಲಿರುವ ಮೈಸೂರು ಕಾಗದ ಕಾರ್ಖಾನೆಯ ಪುನರಾರಂಭಕ್ಕೆ ಸರ್ಕಾರವು ಸಕಾರಾತ್ಮಕವಾಗಿ ಚಿಂತನೆ ನಡೆಸಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಎಸ್. ರುದ್ರೇಗೌಡ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮೈಸೂರು ಕಾಗದ ಕಾರ್ಖಾನೆಯು ತೀವ್ರ ತರಹದ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಿದ್ದ ಕಾರಣ ಎಲ್ಲಾ ಉತ್ಪಾದನಾ ಘಟಕಗಳನ್ನು 2015ರಲ್ಲಿ ಸ್ಥಗಿತಗೊಳಿಸಿದ್ದು, ಜೂ.2023ರ ಅಂತ್ಯಕ್ಕೆ ಒಟ್ಟು ಸಂಚಿತ ನಷ್ಟ 1,482ಕೋಟಿ ರೂ. ಆಗಿದೆ ಎಂದರು.

ಯುವ ಪೀಳಿಗೆಗೆ ಮಾರಕವಾದ ಹುಕ್ಕಾಬಾರ್‌ಗೆ ಕಡಿವಾಣ

● ಗೃಹ ಸಚಿವ ಡಾ.ಪರಮೇಶ್ವರ್ ಭರವಸೆ ● ಗೃಹ ರಕ್ಷಕರ ಭತ್ಯೆ ಶೀಘ್ರ ಪರಿಷ್ಕರಣೆ





ಬೆಂಗಳೂರು, ಡಿ. 12(ಕೆಎಂಶಿ)– ಯುವಪೀಳಿಗೆಯ ದಾರಿ ತಪ್ಪಿಸುತ್ತಿರುವ ಹುಕ್ಕಾಬಾರ್‌ಗೆ ಕಡಿವಾಣ ಹಾಕುವುದಾಗಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸಿ.ಕೆ. ರಾಮಮೂರ್ತಿ ಹಾಗೂ ಸುರೇಶ್ ಕುಮಾರ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆರೋಗ್ಯ ಹಾಗೂ ಆಹಾರ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಹುಕ್ಕಾಬಾರ್ ನಿಯಂತ್ರಣಕ್ಕೆ ಕಾನೂನು ರೂಪಿಸುವುದಾಗಿ ಹೇಳಿದರು. ನಮ್ಮ ಸರ್ಕಾರ ಡ್ರಗ್ಸ್ ಹಾಗೂ ಮಾದಕ ಪದಾರ್ಥಗಳ ಮಾರಾಟವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ, ನಾವು ಹುಕ್ಕಾಬಾರ್ ನಡೆಸಲು ಅವಕಾಶವನ್ನೂ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆದು ವ್ಯಾಪಾರಿಗಳು ಹುಕ್ಕಾಬಾರ್ ನಡೆಸುತ್ತಿದ್ದಾರೆ, ನ್ಯಾಯಾಲಯವೂ ಕೂಡ ಹುಕ್ಕಾ ಸೇದುವವರಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿ ಎಂದು ಹೇಳಿದೆ. ಆದರೆ, ವ್ಯಾಪಾರಿಗಳು ಇದನ್ನು ದುರುಪಯೋಗ ಮಾಡಿಕೊಂಡು ಹುಕ್ಕಾಬಾರ್ ಹೆಸರಿನಲ್ಲಿ ಮಾದಕ ದಂಧೆ ನಡೆಸುತ್ತಿವೆ, ಇದಕ್ಕೆ ಕಡಿವಾಣ ಹಾಕೇ ಹಾಕುತ್ತೇವೆ ಎಂದರು.

ಗೃಹ ರಕ್ಷಕರ ಭತ್ಯೆ ಪರಿಷ್ಕರಣೆ : ಶಶಿಕಲಾ ಜೊಲ್ಲೆ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಗೃಹ ರಕ್ಷಕರಿಗೆ ಬೇರೆ ರಾಜ್ಯಗಳಲ್ಲಿ ನೀಡುತ್ತಿರುವ ಭತ್ಯೆಯನ್ನು ಅವಲೋಕಿಸಿ ಶೀಘ್ರವೇ ಭತ್ಯೆ ಪರಿಷ್ಕರಿಸುವುದಾಗಿ ತಿಳಿಸಿದರು.

ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ ಸಚಿವರು, ಈಗಾಗಲೇ ಏಳು ಮಂದಿಯನ್ನು ಬಂಧಿಸಲಾಗಿದೆ, ಪ್ರೀತಿಸಿ ಗ್ರಾಮ ಬಿಟ್ಟು ಹೋದ ಪ್ರೇಮಿಗಳನ್ನು ಹುಡುಕಿ ಸರ್ಕಾರದಿಂದ ಸೂಕ್ತ ರಕ್ಷಣೆ ನೀಡುವುದಾಗಿಯೂ ಭರವಸೆ ನೀಡಿದರು.

ಸಮಾಜದಲ್ಲಿ ಪ್ರೀತಿಸಿ ಮದುವೆ ಆಗುವುದಕ್ಕೆ ಇಂದಿಗೂ ವಿರೋಧ ಕಂಡುಬರುತ್ತದೆ, ಕೆಲವು ಪ್ರಕರಣಗಳಲ್ಲಿ ಪೋಷಕರು ಒಪ್ಪಿ ಮದುವೆ ಮಾಡಿಸುತ್ತಾರೆ, ಆದರೆ ಇದಕ್ಕೆ ವಿರೋಧವೇ ಹೆಚ್ಚು ಎಂದರು.

ಸಿಬಿಎಸ್‌ಸಿ 10, 12ನೇ ತರಗತಿ ಪರೀಕ್ಷಾ ವೇಳಾಪಟ್ಟಿ ಪ್ರಕಟ

ನವದೆಹಲಿ, ಡಿ.12– ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಸಿ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷಾ ವೇಳಾಪಟ್ಟಿಯು ಮಂಗಳವಾರ ಪ್ರಕಟಗೊಂಡಿದ್ದು, ಫೆಬ್ರವರಿ 15ರಿಂದ ಪರೀಕ್ಷೆಗಳು ಪ್ರಾರಂಭಗೊಳ್ಳಲಿವೆ. ಹತ್ತನೇ ತರಗತಿ ಪರೀಕ್ಷೆಗಳು ಮಾರ್ಚ್ 12ರಂದು ಕೊನೆಗೊಳ್ಳಲಿದ್ದು, 12ನೇ ತರಗತಿಯ ಪರೀಕ್ಷೆಗಳು ಏಪ್ರಿಲ್ 2ರಂದು ಮುಕ್ತಾಯವಾಗಲಿದೆ. ವೇಳಾಪಟ್ಟಿ ತಯಾರಿಸುವಾಗ ಎರಡು ವಿಷಯಗಳ ನಡುವೆ ಪರೀಕ್ಷಾ ದಿನಾಂಕಗಳಲ್ಲಿ ಅಂತರ ಇರುವಂತೆ ನೋಡಿಕೊಳ್ಳಲಾಗಿದ್ದು, ಜೆಇಇಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು 12ನೇ ತರಗತಿಯ ಪರೀಕ್ಷಾ ವೇಳಾಪಟ್ಟಿಯನ್ನು ರೂಪಿಸಲಾಗಿದೆ ಎಂದು ಪರೀಕ್ಷಾ ನಿರ್ವಾಹಕ ಸನ್ಯಾಮ್ ಭಾರದ್ವಾಜ್ ತಿಳಿಸಿದ್ದಾರೆ.

ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ: ಹೈಕೋರ್ಟ್ ಕಳವಳ; ಸ್ವಯಂ ಪ್ರೇರಿತ ಪ್ರಕರಣ ದಾಖಲು

ಬೆಂಗಳೂರು, ಡಿ.12– ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದ ಮಹಿಳೆಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ ಥಳಿಸಿರುವ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಹೈಕೋರ್ಟ್, ಘಟನೆಯ ವರದಿಗಾರಿಕೆಗೆ ಸಂಬಂಧಿಸಿದಂತೆ ಮಾಧ್ಯಮಗಳ ವಿರುದ್ಧ ತೀವ್ರ ಅಸಮಾಧಾನ ದಾಖಲಿಸಿದೆ. ಈ ಸಂಬಂಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಮಂಗಳವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಈ ಪ್ರಕರಣವನ್ನು ಮುಕ್ತ ನ್ಯಾಯಾಲಯದಲ್ಲಿ ಪ್ರಸ್ತಾಪಿಸಿತು. ಒಂದೆಡೆ, ದೇಶವು 76ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಇಂತಹ ಘಟನೆ ನಡೆದಿರುವುದು ನಮ್ಮೆಲ್ಲರ ಅಂತಃಕರಣವನ್ನು ಕಲಕಿ, ತಲೆತಗ್ಗಿಸುವಂತೆ ಮಾಡಿದೆ. ಇದೊಂದು ಹೃದಯ ಮಿಡಿಯುವ ಆಘಾತಕಾರಿ ಘಟನೆ ಎಂದು ದಿಗ್ಭ್ರಮೆ ವ್ಯಕ್ತಪಡಿಸಿದೆ.

'ಸಂತ್ರಸ್ತೆಯ ವೈಯಕ್ತಿಕ ಘನತೆಯನ್ನು ಕಾಪಾಡಬೇಕಿದೆ' ಎಂದ ನ್ಯಾಯಪೀಠ, 'ಇನ್ನು ಮುಂದೆ ರಾಷ್ಟ್ರೀಯ, ರಾಜ್ಯ ಮತ್ತು ಯಾವುದೇ ಸ್ತರದ ಮಾಧ್ಯಮಗಳು ಸಂತ್ರಸ್ತೆಯ ಸಂದರ್ಶನ ಅಥವಾ ವಿಡಿಯೊಗ್ರಾಫ್ ಪ್ರಸಾರ ಮಾಡಬಾರದು' ಎಂದು ನಿರ್ದೇಶಿಸಿತು. ಈಗಾಗಲೇ ಮಾಡಿದ್ದರೆ ಅವುಗಳನ್ನು ತೆಗೆದುಹಾಕುವಂತೆಯೂ ತಾಕೀತು ಮಾಡಿತು. ಸುದ್ದಿ ಪ್ರಸಾರ ಮಾಡುವುದಕ್ಕೆ ಮಾಧ್ಯಮಗಳ ಮೇಲೆ ನಿಷೇಧ ಹೇರುತ್ತಿಲ್ಲ ಎಂದ ನ್ಯಾಯಪೀಠ, ನ್ಯಾಯಾಲಯ, ಮಾಧ್ಯಮದ ಸ್ವಾತಂತ್ರ್ಯವನ್ನು ಯಾವತ್ತೂ ಮನ್ನಿಸುತ್ತದೆ ಎಂದು ಸ್ಪಷ್ಟಪಡಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 14ರಂದು ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರಿಗೆ ನಿರ್ದೇಶಿಸಿತು.

ಕಾರ್ತಿಕ ಮಾಸದ ಪೂಜೆ ವೇಳೆ ಮಹಿಳೆಗೆ ಇರಿದು ಕೊಲೆ

ಪಾಂಡವಪುರದ ಎಲೆಕೆರೆ ಗ್ರಾಮದ ಬಳಿ ಘಟನೆ

ಪಾಂಡವಪುರ, ಡಿ.12– ಕಾರ್ತಿಕ ಮಾಸದ ಪೂಜೆಗೆ ತೆರಳಿದ್ದ ಮಹಿಳೆಯೊಬ್ಬರನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ತಾಲೂಕಿನ ಎಲೆಕೆರೆ ಗ್ರಾಮದ ವಿಸಿ ನಾಲೆ ಬಳಿ ಸೋಮವಾರ ರಾತ್ರಿ ನಡೆದಿದೆ. ಗ್ರಾಮದ ನಿವಾಸಿ ಲೇ.ಸ್ವಾಮೀಗೌಡರ ಪತ್ನಿ ಪಾರ್ವತಮ್ಮ ಹತ್ಯೆಗೊಳಗಾದವರು.

ವಿವರ: ಕಡೇ ಕಾರ್ತಿಕ ಸೋಮವಾರ ಹಿನ್ನೆಲೆಯಲ್ಲಿ ಪಾರ್ವ ತಮ್ಮ ಹಾಗೂ ಆಕೆಯ ಪುತ್ರಿ ಅರ್ಪಿತ ಗ್ರಾಮದ ಈಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿ, ಬಳಿಕ ಕಾವೇರಿ ಮಾತೆಗೆ ಪೂಜೆ ಸಲ್ಲಿಸಲು ವಿಸಿ ನಾಲೆಗೆ ಹೋಗುತ್ತಿದ್ದ ವೇಳೆ ಹಿಂದಿನಿಂದ ಬಂದ ವ್ಯಕ್ತಿಯೋರ್ವ ಪಾರ್ವತಮ್ಮ ಅವರಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ಈ ವೇಳೆ ಪಾರ್ವತಮ್ಮ ಅವರ ಮುಂದೆ ತೆರಳುತ್ತಿದ್ದ ಪುತ್ರಿ ಅರ್ಪಿತ ತಾಯಿಯ ಚೀರಾಟ ಕೇಳಿ ವಾಪಸ್ ಬಂದು ನೋಡಿದಾಗ ಚಾಕುವಿನಿಂದ ಇರಿದಿರುವುದು ಕಂಡು ಬಂದಿದೆ. ಈ ವೇಳೆ ಸ್ಥಳದಲ್ಲಿದ್ದವರು ಆಕೆಯನ್ನು ತಕ್ಷಣ ಮೈಸೂರಿನ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಕುಮಾರ್ ಹಾಗೂ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಮಂಗಳವಾರ ಬೆಳಗ್ಗೆ ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಕ್ಷ ಸಂಘಟಿಸಿ ಅಧಿಕಾರಕ್ಕೆ ತಂದು ಬೇರೆ ಪಕ್ಷಕ್ಕೆ ಹೋಗಲು ನಾನೇನು ಹುಚ್ಚನೇ...

● ಪ್ರಭಾವಿ ಸಚಿವ 50–60 ಶಾಸಕರೊಂದಿಗೆ ಪಕ್ಷ ತೊರೆಯುವ ಕುಮಾರಸ್ವಾಮಿ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ● ನಾನು ಹುಟ್ಟುತ್ತಲೇ ಕಾಂಗ್ರೆಸ್ಸಿಗ; ಕಾಂಗ್ರೆಸ್, ಗಾಂಧಿ ಕುಟುಂಬದ ಮೇಲೆ ಅಪಾರ ವಿಶ್ವಾಸವಿದೆ



ಬೆಂಗಳೂರು, ಡಿ. 12(ಕೆಎಂಶಿ)–ಪಕ್ಷ ಸಂಘಟಿಸಿ ಅಧಿಕಾರಕ್ಕೆ ತಂದು ಬೇರೆ ಪಕ್ಷಕ್ಕೆ ಹೋಗಲು ನಾನೇನು ಹುಚ್ಚನೇ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ನಾನು ಹುಟ್ಟುತ್ತಲೇ ಕಾಂಗ್ರೆಸ್ಸಿಗ, ನನಗೆ ನನ್ನದೇ ಆದ ಮೂಲ ಆದರ್ಶಗಳಿವೆ, ಗಾಂಧಿ ಕುಟುಂಬ ಹಾಗೂ ಕಾಂಗ್ರೆಸ್ ಮೇಲೆ ಅಪಾರವಾದ ನಂಬಿಕೆ ಇದೆ ಎಂದಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಪ್ರಭಾವೀ ಸಚಿವರೊಬ್ಬರು 50–60 ಶಾಸಕರ ಸಮೇತ ಬಿಜೆಪಿ ಸೇರುತ್ತಾರೆ ಎಂಬ ಹೇಳಿಕೆಗೆ ಬೆಳಗಾವಿಯ ಸುವರ್ಣ ಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಅವರು ಹೇಳಿದ್ದಕ್ಕೆಲ್ಲಾ ನಾನು ಏಕೆ ಹೊಣೆಯಾಗಬೇಕು. ಅವರು ಏನಾದರೂ ಹೇಳಿಕೊಂಡು ತಿರುಗಲಿ, ನಾನು ತಲೆ ಕೆಡಿಸಿಕೊಂಡಿಲ್ಲ. ನಾನು ಕಾಂಗ್ರೆಸ್ಸಿಗ, ಇದರ ಗಡಿ ಬಿಟ್ಟು ಒಂದು ಹೆಜ್ಜೆಯೂ ಹೊರಗಿಡುವವನಲ್ಲ. ತೆಲಂಗಾಣ ಚುನಾವಣಾ ಫಲಿತಾಂಶದ ನಂತರ ಕುಮಾರಸ್ವಾಮಿಯ ಇಂತಹ ಹೇಳಿಕೆ ಹಿಂದೆ ರಾಜಕೀಯ ಷಡ್ಯಂತ್ರ ಅಡಗಿದೆ. ತಮ್ಮವರನ್ನು ಹಿಡಿದಿಟ್ಟುಕೊಳ್ಳಲು ಬೇರೆಯವರ ಮೇಲೆ ಅಸ್ತ್ರಪ್ರಯೋಗ ಮಾಡುತ್ತಿದ್ದಾರೆ ಎಂದಿದ್ದಾರೆ.

ನನಗೆ ಥಳಕು ಹಾಕಬೇಡಿ: ಇದೇ ಸಂದರ್ಭದಲ್ಲಿ ಪ್ರತ್ಯೇಕವಾಗಿ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಬಿಜೆಪಿಗೆ ಹೋಗುವ ಪ್ರಭಾವೀ ಸಚಿವರು ಯಾರೆಂದು ಕುಮಾರಸ್ವಾಮಿ ಅವರೇ ಹೇಳಬೇಕು. ಈ ಪ್ರಶ್ನೆಯನ್ನು ನನಗೆ ಏತಕ್ಕೆ ಕೇಳುತ್ತೀರಿ ಎಂದರು. ನಾನು ಸ್ನೇಹಿತರ ಜೊತೆಗೂಡಿ ಪ್ರವಾಸ ಮಾಡಬೇಕೆಂದಿದ್ದೆ, ಅದಕ್ಕೆ ನೀವು ಕುಮಾರಸ್ವಾಮಿ ಹೇಳಿಕೆಯನ್ನು ನನಗೆ ಥಳಕು ಹಾಕಬೇಡಿ ಎಂದಿದ್ದಾರೆ.

ಹೆಚ್‌ಡಿಕೆಗೆ ಇನ್ನೂ ಬುದ್ಧಿ ಬಂದಿಲ್ಲ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಕುಮಾರಸ್ವಾಮಿ ಅಧಿಕಾರ ಇಲ್ಲದೆ ಭ್ರಮನಿರಸನರಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ, ಅವರ ಪಕ್ಷವನ್ನು ರಾಜ್ಯದ ಜನತೆ ತಿರಸ್ಕರಿಸಿದರೂ ಇನ್ನೂ ಅವರಿಗೆ ಬುದ್ಧಿ ಬಂದಿಲ್ಲ ಎಂದರು.

ಮಾಧ್ಯಮದವರಿಗೆ ಬುದ್ಧಿ ಇಲ್ಲ: ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಕುಮಾರಸ್ವಾಮಿ ಹೇಳಿಕೆಯನ್ನು ಲೇವಡಿ ಮಾಡಿ, ಅವರೊಬ್ಬ ಹಿಟ್ ಅಂಡ್ ರನ್ ಗಿರಾಕಿ, ತಾಕತ್ತಿದ್ದರೆ, ಪ್ರಭಾವೀ ಸಚಿವರ ಹೆಸರನ್ನು ಬಹಿರಂಗ ಪಡಿಸಲಿ, ಅವರ ಸುದ್ದಿ ಹೈಲೈಟ್ ಮಾಡುವ ಮಾಧ್ಯಮದವರಿಗೆ ಬುದ್ಧಿ ಇಲ್ಲ ಎಂದರು.

ಎಲ್ಲಾ ಮೂರು ಕ್ರಿಮಿನಲ್ ಕಾನೂನು ಮಸೂದೆ ಹಿಂಪಡೆದು; ಹೊಸ ಕರಡು ವಿಧೇಯಕ ಮಂಡಿಸಿದ ಕೇಂದ್ರ



ನವದೆಹಲಿ, ಡಿ.12– ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬ್ರಿಟಿಷ್ ಕಾಲದ ಹಳೆಯ ಮೂರು ಕ್ರಿಮಿನಲ್ ಕಾನೂನುಗಳನ್ನು ಬದಲಿಸುವ ಸಲುವಾಗಿ ಮೂರು ಮಸೂದೆಗಳನ್ನು ಮಂಗಳವಾರ ಹಿಂಪಡೆದಿದ್ದು, ಹೊಸ ಕರಡು ವಿಧೇಯಕಗಳನ್ನು ಮಂಡಿಸಿದ್ದಾರೆ.

ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸುಗಳ ನಂತರ ಕೇಂದ್ರ ಸರ್ಕಾರ ಈ ಹಿಂದೆ ಲೋಕಸಭೆಯಲ್ಲಿ ಮಂಡಿಸಿದ್ದ ಕ್ರಿಮಿನಲ್ ಪ್ರೊಸೀಜರ್ ಕೋಡ್–1898, ಭಾರತೀಯ ದಂಡ ಸಂಹಿತೆ–1860, ಇಂಡಿಯನ್ ಎವಿಡೆನ್ಸ್ ಆಕ್ಟ್–1872 ಒಳಗೊಂಡ ಮಸೂದೆಗಳನ್ನು ಹಿಂಪಡೆಯಲಾಗಿದೆ.

ಕಳೆದ ಆಗಸ್ಟ್ ತಿಂಗಳಲ್ಲಿ ನಡೆದ ಮುಂಗಾರು ಅಧಿವೇಶನದ ವೇಳೆ ಈ ಮೂರು ವಿಧೇಯಕಗಳನ್ನು ಮಂಡಿಸಲಾಗಿತ್ತು. ಆದರೆ ಅವುಗಳಿಗೆ ಸಂಸದೀಯ ಸ್ಥಾಯಿ ಸಮಿತಿ ಕೆಲವು ಬದಲಾವಣೆಗಳನ್ನು ಶಿಫಾರಸು ಮಾಡಿತ್ತು. ಹೀಗಾಗಿ ಇಂದು ಆ ಶಿಫಾರಸುಗಳನ್ನು ಒಳಗೊಂಡಿರುವ ಹೊಸ ಕರಡು ವಿಧೇಯಕಗಳನ್ನು ಮಂಡಿಸಿದರು. ಡಿಸೆಂಬರ್ 11 ರಂದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೂರು ಕ್ರಿಮಿನಲ್ ಕಾನೂನು ಮಸೂದೆಗಳನ್ನು ಹಿಂಪಡೆಯಲಾಗುವುದು ಮತ್ತು ಸಂಸದೀಯ ಸಮಿತಿ ಶಿಫಾರಸು ಮಾಡಿ ತಿದ್ದುಪಡಿಗಳನ್ನು ಒಳಗೊಂಡಿರುವ ಮೂರು ಹೊಸ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗುವುದು ಎಂದು ಹೇಳಿದ್ದರು.

ಇಂದು ಲೋಕಸಭೆಯಲ್ಲಿ ಮಾತನಾಡಿದ ಅಮಿತ್ ಶಾ, ಗೃಹ ಸಚಿವಾಲಯ, ಸಂಸದೀಯ ಸಮಿತಿಯ ಶಿಫಾರಸುಗಳನ್ನು ಅಳವಡಿಸಲು ಹಲವಾರು ತಿದ್ದುಪಡಿಗಳನ್ನು ತರುವ ಬದಲು, ಬದಲಾವಣೆಗಳನ್ನು ಒಳಗೊಂಡಿರುವ ಹೊಸ ಮಸೂದೆಗಳನ್ನು ಮಂಡಿಸಲು ಸರ್ಕಾರ ನಿರ್ಧರಿಸಿದೆ ಎಂದರು.

ಜಾತಿ ಗಣತಿಗೆ ನನ್ನ ವಿರೋಧವಿಲ್ಲ; ಸಮೀಕ್ಷೆ ವೈಜ್ಞಾನಿಕವಾಗಿರಬೇಕು

ಬೆಂಗಳೂರು, ಡಿ.12– ನಾನು ಜಾತಿ ಗಣತಿಗೆ ಎಲ್ಲಿಯೂ ವಿರೋಧ ವ್ಯಕ್ತಪಡಿಸಿಲ್ಲ. ಜಾತಿ ಗಣತಿಯ ಸಮೀಕ್ಷೆ ವೈಜ್ಞಾನಿಕವಾಗಿ ಹಾಗೂ ವ್ಯವಸ್ಥಿತವಾಗಿ ನಡೆಯಬೇಕು ಎಂಬುದಷ್ಟೇ ನಮ್ಮ ಅಭಿಪ್ರಾಯ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕರ್ನಾಟಕದಲ್ಲಿ ಜಾತಿ ಗಣತಿ ಜಾರಿ ವಿಚಾರವಾಗಿ ಬಿಜೆಪಿ ನಾಯಕರ ವಿರೋಧಕ್ಕೆ ಡಿಕೆಶಿ ಪ್ರತಿಕ್ರಿಯಿಸಿದರು.

ಜಾತಿ ಗಣತಿ ಸಮೀಕ್ಷೆ ಸರಿಯಾಗಿ ನಡೆದಿಲ್ಲ ಎಂದು ನಮ್ಮ ಅನೇಕ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮನೆ, ಮನೆಗೆ ತೆರಳಿ ಸಮೀಕ್ಷೆ ನಡೆಸಿಲ್ಲ ಎಂದು ದೂರುಗಳು ಬಂದಿವೆ. ಎಲ್ಲಾ ಸಮುದಾಯಗಳು ಅವರ ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಹಕ್ಕನ್ನು ಪಡೆಯಬೇಕು. ಅಲ್ಪಸಂಖ್ಯಾತರು, ಪರಿಶಿಷ್ಟರು ಸೇರಿದಂತೆ ಎಲ್ಲರೂ ತಮ್ಮ ಜನಸಂಖ್ಯೆ ಅನುಗುಣವಾಗಿ ಹಕ್ಕು ಹಾಗೂ ಅನುದಾನ ಕೇಳುತ್ತಾರೆ. ಈ ಜಾತಿ ಗಣತಿಯನ್ನು ವೈಜ್ಞಾನಿಕವಾಗಿ ಮಾಡಲಾಗಿದೆಯೇ ಎಂಬ ವಿಚಾರವಾಗಿ ನಾವು ಸ್ಪಷ್ಟೀಕರಣ ಕೇಳಿದ್ದೇವೆ. ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಮೇಲೆ ನಾವು ನಂಬಿಕೆ ಇಟ್ಟಿದ್ದೇವೆ ಎಂದು ಹೇಳಿದರು.

ಸಮಾಜದ ಎಲ್ಲಾ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುವ ಕಾಂಗ್ರೆಸ್ ಪಕ್ಷದ ಬದ್ಧತೆಗೆ ನಾನು ಬೆಂಬಲವಾಗಿ ನಿಲ್ಲುತ್ತೇನೆ. ಕೇಂದ್ರ ಸರಕಾರದ ವರ್ಗೀಕರಣದ ಅನ್ವಯ ನಾನು ಕೂಡ ಇತರೆ ಹಿಂದುಳಿದ ವರ್ಗದ ಸಮುದಾಯದ ನಾಯಕ. ಪಕ್ಷದ ಅಧ್ಯಕ್ಷನಾಗಿ ನಾನು ಎಲ್ಲಾ ವರ್ಗದ ಜನರನ್ನು ಸಮಾನವಾಗಿ ನೋಡಬೇಕು ಎಂದರು.

ಪ್ರಥಮ ಬಹುಮಾನ

ಇತ್ತೀಚೆಗೆ ನಡೆದ ಪ್ರತಿಭಾ ಕಾರಂಜಿಯಲ್ಲಿ ಮೈಸೂರಿನ ಲಿಟಲ್ ಇನ್‌ಫ್ಯಾಂಟ್ ಶಾಲೆಯ ವಿದ್ಯಾರ್ಥಿನಿ ಜೆ.ಶ್ರೀನಿಧಿ ಭರತನಾಟ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.



ಸದನದಲ್ಲಿ ಕೋಲಾಹಲ ಸೃಷ್ಟಿಸಿದ 'ಮುಸ್ಲಿಂ ಸ್ಪೀಕರ್' ಹೇಳಿಕೆ

ಜಮೀರ್ ಉಚ್ಚಾಟಿಸಲು ಪ್ರತಿಪಕ್ಷಗಳ ಆಗ್ರಹ



ಬೆಳಗಾವಿ, ಡಿ.12– ಇತ್ತೀಚೆಗೆ ತೆಲಂಗಾಣದಲ್ಲಿ ಚುನಾವಣಾ ಪ್ರಚಾರದ ವೇಳೆ ವಿವಾದಾತ್ಮಕ ಹೇಳಿಕೆ ನೀಡಿದ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸಂಪುಟದಿಂದ ಉಚ್ಚಾಟಿಸುವಂತೆ ಪ್ರತಿಪಕ್ಷಗಳ ಸದಸ್ಯರು ವಿಧಾನಸಭೆಯಲ್ಲಿ ಪಟ್ಟು ಹಿಡಿದಿದ್ದರು.

ಕರ್ನಾಟಕದ ಬಿಜೆಪಿ ಶಾಸಕರು ಈಗ ಮುಸ್ಲಿಂ ಸ್ಪೀಕರ್ ಎದುರು ಬಾಗಿ ಬೀಳುವಂತೆ ಮಾಡಲಾಗಿದೆ ಎಂದು ಜಮೀರ್ ಇತ್ತೀಚೆಗೆ ಹೇಳಿದ್ದರು. ಯುಟಿ ಖಾದರ್ ಅವರನ್ನು ಸ್ಪೀಕರ್ ಮಾಡಲಾಗಿದೆ. ಈಗ ಸದನದಲ್ಲಿರುವ ಬಿಜೆಪಿಯ ಹಿರಿಯ ನಾಯಕರೆಲ್ಲರೂ ನಮಸ್ಕಾರ ಸಾರ್ ಎಂದು ಹೇಳಬೇಕಾಗಿದೆ. ಇದೆಲ್ಲವೂ ಕಾಂಗ್ರೆಸ್‌ನಿಂದ ಸಾಧ್ಯವಾಗಿದೆ ಎಂದು ಜಮೀರ್ ನೀಡಿದ್ದ ಹೇಳಿಕೆ ಬಿಜೆಪಿ ಮತ್ತು ಜೆಡಿಎಸ್‌ನಿಂದ ತೀವ್ರ ಟೀಕೆಗೆ ಗುರಿಯಾಗಿದ್ದರು.

ಜಮೀರ್ ಸಾಂವಿಧಾನಿಕ ಹುದ್ದೆಯನ್ನು ಕೋಮುವಾದ ಮಾಡುವ ಮೂಲಕ ಅವಮಾನಿಸಿದ್ದಾರೆ ಎಂದು ಪ್ರತಿಪಕ್ಷದ ಸದಸ್ಯರು ಆರೋಪಿಸಿದರು. ಆದರೆ, ಪ್ರತಿಪಕ್ಷಗಳು ಅಡ್ಡಿಪಡಿಸುವ ತಂತ್ರಕ್ಕೆ ಮಣಿಯದ ಸ್ಪೀಕರ್ ಯುಟಿ ಖಾದರ್ ಅವರು ಗೊಂದಲದ ನಡುವೆಯೇ ಸದನವನ್ನು ನಡೆಸಿದರು.

ಪ್ರಶ್ನೋತ್ತರ ಅವಧಿ ಆರಂಭವಾದಾಗ ಪ್ರತಿಪಕ್ಷದ ಸದಸ್ಯರು ಜಮೀರ್ ಅವರ ಹೇಳಿಕೆಗೆ ಸಂಬಂಧಿಸಿದಂತೆ ಸ್ಪೀಕರ್ ಗಮನ ಸೆಳೆಯಲು ಯತ್ನಿಸಿದರು. ಪ್ರತಿಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ಸಭಾಪತಿ ಸ್ಥಾನವನ್ನು ಸಚಿವರು ಕೋಮುವಾದ ಮಾಡುವುದು ಸಲ್ಲದು. ಜಮೀರ್ ಸಚಿವರಾಗಿ ಮುಂದುವರಿಯಲು ಅನರ್ಹರಾಗಿದ್ದು, ಕೂಡಲೇ ಅವರನ್ನು ಸಂಪುಟದಿಂದ ಹೊರಹಾಕಬೇಕು ಎಂದು ಆಗ್ರಹಿಸಿದರು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಸ್ಪಷ್ಟನೆ ನೀಡಲು ಪ್ರಯತ್ನಿಸಿದರು. ಆದರೆ ವಿಪಕ್ಷ ಸದಸ್ಯರು ಮತ್ತೆ ಪ್ರತಿಭಟಿಸಲು ಮುಂದಾದ ಹಿನ್ನೆಲೆಯಲ್ಲಿ ಸ್ಪೀಕರ್ ಸದನವನ್ನು ಕೆಲಕಾಲ ಮುಂದೂಡಿದರು. ವಿರಾಮದ ವೇಳೆ ಸಭಾಧ್ಯಕ್ಷರು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರೊಂದಿಗೆ ಸಭೆ ನಡೆಸಿ ರಾಜಿ ಸಂಧಾನಕ್ಕೆ ಮುಂದಾದರು. ಆದರೆ ಬಿಜೆಪಿ ಸದಸ್ಯರು ಕದಲಲಿಲ್ಲ. 30 ನಿಮಿಷಗಳ ನಂತರ ಸದನ ಮತ್ತೆ ಸೇರಿದಾಗ ಪ್ರತಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಧರಣಿ ಮುಂದುವರಿಸಿದರು. ಸದನ ಸುಗಮವಾಗಿ ನಡೆಯಲು ಸಹಕರಿಸಬೇಕು ಹಾಗೂ ರಾಜ್ಯದಲ್ಲಿ ತತ್ತರಿಸಿರುವ ಬರ ಪರಿಸ್ಥಿತಿ ಹಾಗೂ ಉತ್ತರ ಕರ್ನಾಟಕಕ್ಕೆ ತೊಂದರೆಯಾಗುತ್ತಿರುವ ಸಮಸ್ಯೆಗಳ ಕುರಿತು ಮಹತ್ವದ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಸ್ಪೀಕರ್ ಖಾದರ್ ಮನವಿ ಮಾಡಿದರು. ಸದನದ ಅಮೂಲ್ಯ ಸಮಯವನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂದು ಹೇಳಿದರು. ಪ್ರತಿಭಟನಾನಿರತ ಸದಸ್ಯರು ಸಭಾಧ್ಯಕ್ಷರ ಮನವಿಗೆ ಕಿವಿಗೊಡದ ಕಾರಣ, ಗದ್ದಲದ ನಡುವೆಯೇ ಪ್ರಶ್ನೋತ್ತರ ಅವಧಿಯನ್ನು ಮುಂದುವರಿಸಿದ ಸದಸ್ಯರು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಮೀರ್ ಹೇಳಿಕೆಯನ್ನು ಲೇವಡಿ ಮಾಡಿದ ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಕಾಂಗ್ರೆಸ್ ಮುಸ್ಲಿಮರ ಓಲೈಕೆಯಲ್ಲಿ ನಿರತವಾಗಿದೆ ಎಂದು ಆರೋಪಿಸಿದರು. ಜೆಡಿಎಸ್ ಹೆಸರಿನಿಂದ 'ಜಾತ್ಯತೀತ' ಎಂಬ ಪದವನ್ನು ತೆಗೆದುಹಾಕುವಂತೆ ಕಾಂಗ್ರೆಸ್ ಮುಖಂಡರು ಜೆಡಿಎಸ್‌ಗೆ ಸೂಚಿಸಿದ್ದಾರೆ ಎಂದು ಅಶೋಕ ಆರೋಪಿಸಿದರು. ಆಗ ಕಾಂಗ್ರೆಸ್ ತನ್ನ ಹೆಸರಿಗೆ 'ಎಂ' ಸೇರಿಸಬೇಕು ಎಂದರು. ಮುಸ್ಲಿಮರನ್ನು ಸಂತೋಷವಾಗಿಡಲು ಕಾಂಗ್ರೆಸ್ ತನ್ನ ಸಚಿವರು ಸಾಂವಿಧಾನಿಕ ಹುದ್ದೆಯ ಬಗ್ಗೆ ತೋರಿದ ನಿರ್ಲಕ್ಷ್ಯದ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು. ಸರ್ಕಾರವಾಗಲೀ, ಸ್ಪೀಕರ್ ಆಗಲಿ ಪ್ರತಿಪಕ್ಷಗಳ ಮನವೊಲಿಸಲು ಹೋಗದ ಕಾರಣ, ದಿನವಿಡೀ ಬಾವಿಯಲ್ಲಿಯೇ ಇದ್ದರೂ, ಯಾವುದೇ ಅಡ್ಡಿಯಿಲ್ಲದೆ ಕಲಾಪ ಮುಂದುವರೆಯಿತು.

ಜಮೀರ್‌ಗೆ ಸಿಎಂ ಬೆಂಬಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಜಮೀರ್ ಅವರ ಬೆಂಬಲಕ್ಕೆ ಬಂದರು. ಜಮೀರ್, ಸ್ಪೀಕರ್ ಪೀಠದ ಬಗ್ಗೆ ನಿರ್ಲಕ್ಷ್ಯ ತೋರಿಲ್ಲ ಅಥವಾ ಬಿಜೆಪಿ ಸದಸ್ಯರ ವಿರುದ್ಧ ಯಾವುದೇ ಅಸಂಸದೀಯ ಪದ ಬಳಕೆ ಮಾಡಿಲ್ಲ ಎಂದು ಹೇಳಿದರು. ಪ್ರತಿಪಕ್ಷಗಳು ಸದನಕ್ಕೆ ಅಡ್ಡಿಪಡಿಸುತ್ತಿರುವುದನ್ನು ಖಂಡಿಸಿದ ಸಿಎಂ, ಈ ವಿಷಯದ ಬಗ್ಗೆ ಚರ್ಚಿಸಲು ಬಯಸಿದರೆ ಸರ್ಕಾರ ಉತ್ತರ ನೀಡಲು ಸಿದ್ಧವಿರುವುದರಿಂದ ಪ್ರತ್ಯೇಕ ನೋಟಿಸ್ ನೀಡಲಿ ಎಂದರು. ಪ್ರತಿಪಕ್ಷಗಳು ಪ್ರತಿಭಟನೆ ಹಿಂಪಡೆದು ಸದನ ಸುಗಮವಾಗಿ ನಡೆಯಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಮಿತ್ರ ಬುಧವಾರ 13 ಡಿಸೆಂಬರ್ 2023

ಕೇರಳ ಗುತ್ತಿಗೆದಾರನ ದೋಚಿದ ಪ್ರಕರಣ

ದರೋಡೆಕೋರರ ಬಂಧನಕ್ಕೆ ಪೊಲೀಸರ ತಂಡ ರಚನೆ

ಕೇರಳ, ಮಂಗಳೂರು ಸೇರಿ ಹಲವೆಡೆಗೆ ತಂಡ ಭೇಟಿ, ಮಾಹಿತಿ ಸಂಗ್ರಹ

ದಾಖಲೆಗಳಿಲ್ಲದ ಕಾರಣ ಮಾರಾಟ ಮಾಡಿದ್ದ ಚಿನ್ನ ವಶ



ಮಡಿಕೇರಿ, ಡಿ. 12(ಎಸ್.ಪ್ರಸಾದ್)– ಕೇರಳ ಮೂಲದ ಗುತ್ತಿಗೆದಾರ ಹಾಗೂ ಆತನ ಸ್ನೇಹಿತನನ್ನು ಅಪಹರಿಸಿ 50 ಲಕ್ಷ ರೂ. ದೋಚಿ ಬಿಡುಗಡೆಗೊಳಿಸಿದ್ದ ದರೋಡೆ ಪ್ರಕರಣವನ್ನು ಭೇದಿಸಲು ತಂಡಗಳನ್ನು ರಚಿಸಲಾಗಿದ್ದು, ಶೀಘ್ರದಲ್ಲೇ ಪ್ರಕರಣವನ್ನು ಭೇದಿಸಲಾಗುವುದು ಎಂದು ಕೊಡಗು ಜಿಲ್ಲಾ ಪೊಲೀಸರು ತಿಳಿಸಿದ್ದಾರೆ.

ಪೊನ್ನಂಪೇಟೆ ತಾಲೂಕು, ಗೋಣಿಕೊಪ್ಪ ಪಟ್ಟಣದ ದೇವರಪುರ ಗ್ರಾಮದ ಬಳಿ ಕಳೆದ ಶುಕ್ರವಾರ ಈ ದರೋಡೆ ಸಂಭವಿತ್ತು. ಪ್ರಕರಣದ ತನಿಖೆ ಕೈಗೊಂಡಿದ್ದ ಪೊಲೀಸರು, ಸೂಕ್ತ ದಾಖಲೆಗಳಿಲ್ಲದ ಕಾರಣ ಮೈಸೂರಿನ ಅಶೋಕ ರಸ್ತೆಯ ಜುವೆಲರಿ ಅಂಗಡಿಗೆ ತೆರಳಿ 99.99 ಪರ್ಸೆಂಟ್ ಶುದ್ಧ ಚಿನ್ನ (24 ಕ್ಯಾರೆಟ್) ವನ್ನು ವಶಪಡಿಸಿಕೊಂಡಿದ್ದು, ದರೋಡೆಕೋರರ ಪತ್ತೆಗೆ ತಂಡಗಳು ಕೇರಳ ಮತ್ತು ಮಂಗಳೂರು ಸೇರಿದಂತೆ ಕೆಲವು ಸೂಕ್ಷ್ಮ ಪ್ರದೇಶಗಳಿಗೆ ತೆರಳಿ ಮಾಹಿತಿ ಸಂಗ್ರಹಿಸಿ ದರೋಡೆಕೋರರ ಬಂಧನಕ್ಕೆ ಬಲೆ ಬೀಸಿದ್ದಾರೆ ಎಂದು ಕೊಡಗು ಎಸ್ಪಿ ಕೆ. ರಾಮರಾಜನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕೇರಳದ ಮಲಪ್ಪುರಂ ಜಿಲ್ಲೆ, ತಿರುರಂಗಡಿ ತಾಲೂಕು, ಕೊಡಕ್ಕಾಡನ ಗುತ್ತಿಗೆದಾರ ಕೆ. ಶಮ್ಜದ್ ಮತ್ತು ಆತನ ಸ್ನೇಹಿತ ಕೋಝಿಕೋಡ್ ಪಂಚಾಯ್ತಿ ವ್ಯಾಪ್ತಿಯ ಅದರುರ ಗ್ರಾಮದ ಅಫ್ನು ಅವರನ್ನು ದೇವರಪುರ ಬಳಿ 10ರಿಂದ 15 ಮಂದಿ ತಂಡ ತಡೆದು ಹಣಕ್ಕೆ ಒತ್ತಾಯಿಸಿತ್ತು.

ತಮ್ಮ ಬಳಿ ಹಣವಿಲ್ಲ ಎಂದು ಹೇಳಿದಾಗ ಇವರಿಬ್ಬರನ್ನು ಕಾರಿನ ಸಮೇತ ಅಪಹರಿಸಿತ್ತು. ಸುಮಾರು ದೂರ ತೆರಳಿದ ನಂತರ ಚಿನ್ನ ಮಾರಿದ್ದ 50 ಲಕ್ಷ ರೂ. ದೋಚಿ, ಕಾರಿನಿಂದ ಇವರಿಬ್ಬರನ್ನು ತಳ್ಳಿ ಪರಾರಿಯಾಗಿತ್ತು. ನಂತರ ದರೋಡೆಕೋರರು ವಿರಾಜಪೇಟೆ ಬಳಿ ಕಾರು ಬಿಟ್ಟು ಹೋಗಿದ್ದರು. ಕಾರು ಜಖಂಗೊಂಡಿತ್ತು.

ಪ್ರಕರಣದ ತನಿಖೆ ಆರಂಭಿಸಿದ ಕೊಡಗು ಪೊಲೀಸರು, ತನಿಖೆ ತೀವ್ರಗೊಳಿಸಿದ್ದು, ಹಳೆಯ ಚಿನ್ನ ವ್ಯಾಪಾರಿ, ಉದ್ಯಮಿಗಳು ಹಾಗೂ ವರ್ತಕರ ದರೋಡೆ ಪ್ರಕರಣಗಳೂ ಪತ್ತೆಯಾಗುವ ಸಾಧ್ಯತೆ ಇದೆ ಎಂದು ಎಸ್ಪಿ ತಿಳಿಸಿದ್ದಾರೆ.

ಚಿನ್ನದ ತೆರಿಗೆ ರಶೀದಿ ಇಲ್ಲ: 50 ಲಕ್ಷ ರೂ. ಹಣವನ್ನು ರಾತ್ರಿ ಕಾರಿನಲ್ಲಿ ಕೊಂಡೊಯ್ದಿದ್ದೇಕೆ? ಚಿನ್ನಕ್ಕೆ ತೆರಿಗೆ ಪಾವತಿಸಿದ ರಶೀದಿ ಅಥವಾ ದಾಖಲಾತಿಗಳೇಕಿಲ್ಲ ಎಂಬಿತ್ಯಾದಿ ಪ್ರಶ್ನೆಗಳನ್ನು ಹಲ್ಲೆಗೊಳದಾದವರಿಗೆ ಕೇಳಲಾಗಿದೆ. ಕೊಡಗು ಪೊಲೀಸರು ಕೇರಳಕ್ಕೆ ತೆರಳಿ ಶಮ್ಜದ್ ಪತ್ನಿಯನ್ನು ವಿಚಾರಣೆಗೊಳಪಡಿಸಿದ್ದು, ಆ ಚಿನ್ನ ತಮ್ಮದು, ಅದನ್ನು ಖರೀದಿಸಿರುವ ಕುರಿತು ರಶೀದಿಯನ್ನು ಕೊಡುವುದಾಗಿ ತಿಳಿಸಿದ್ದಾರೆ ಎನ್ನಲಾಗಿದೆ.

ಚಿನ್ನ ದರೋಡೆಗೊಳಗಾದ ಶಮ್ಜದ್ ಅವರಿಗೆ ಸೇರಿದ್ದು ಎಂಬ ವಿಚಾರ ತಿಳಿದ ಹಿನ್ನೆಲೆಯಲ್ಲಿ ಪೊಲೀಸರು ದರೋಡೆ ನಡೆದಿರುವುದು ಖಚಿತ ಎಂದು ದೃಢಪಟ್ಟ ಹಿನ್ನೆಲೆಯಲ್ಲಿ ತನಿಖೆ ತೀವ್ರಗೊಳಿಸಿದ್ದಾರೆ. ಶಮ್ಜದ್ ಅವರು ಶ್ರೀಮಂತ ಮನೆತನಕ್ಕೆ ಸೇರಿದವರು ಎಂದು ತಿಳಿದವರು ಮತ್ತು ಭಾರೀ ಪ್ರಮಾಣದ ಚಿನ್ನ ಮಾರಾಟ ಮಾಡಿರುವ ವಿಚಾರ ಬಲ್ಲವರು ಈ ದರೋಡೆ ನಡೆಸಿರಬಹುದು ಎಂದು ಸಂಶಯ ವ್ಯಕ್ತಪಡಿಸಿರುವ ಪೊಲೀಸರು, ಆ ದಿಕ್ಕಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ದರೋಡೆಯನ್ನು ವ್ಯವಸ್ಥಿತವಾಗಿ ನಡೆಸಿರುವುದನ್ನು ಸಹ ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಕೇರಳ ಮೂಲದ ದರೋಡೆಕೋರರೇ ಈ ದರೋಡೆ ನಡೆಸಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಆ ಬಗ್ಗೆಯೂ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಮೈಸೂರಲ್ಲಿ 993 ಗ್ರಾಂ ಚಿನ್ನ ಮಾರಾಟ

ಮೈಸೂರು, ಡಿ. 12(ಆರ್‌ಕೆ)– ದರೋಡೆಕೋರರಿಂದ ಹಲ್ಲೆಗೊಳಗಾಗಿ ಅಪರಹಣವಾಗಿದ್ದ ಕೇರಳ ಮೂಲದ ಗುತ್ತಿಗೆದಾರ ಕೆ. ಶಮ್ಜದ್ ಮೈಸೂರಿನ ಜುವೆಲರಿ ಅಂಗಡಿಗೆ ಬರೋಬ್ಬರಿ 993 ಗ್ರಾಂ (1 ಕೆಜಿಗೆ ಕೇವಲ 7 ಗ್ರಾಂ ಕಡಿಮೆ) ಚಿನ್ನ ಮಾರಿದ್ದಾರೆ ಎಂದು ತಿಳಿದು ಬಂದಿದೆ.

ನಿಜವಾಗಲೂ ವ್ಯವಹಾರವಾಗಿರುವುದು 62 ಲಕ್ಷ ರೂ.ಗಳಿಗೆ. ಆದರೆ ಘಟನೆ ನಡೆದಾಗ ಶಮ್ಜದ್ ಮಾಹಿತಿ ನೀಡಿರುವುದು 50 ಲಕ್ಷ ರೂ.ಗಳೆಂದು. ಚಿನ್ನ ಖರೀದಿಸಿದ ವ್ಯಾಪಾರಿ, ತಾನು 62 ಲಕ್ಷ ರೂ.ಗಳನ್ನು ಮಾರಾಟ ಮಾಡಿದವರಿಗೆ ಪಾವತಿಸಿದ್ದೇನೆ ಎಂದು ಕೊಡಗು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹಾಗಾದರೆ ಉಳಿದ 12 ಲಕ್ಷ ರೂ. ನಗದು ಏನಾಯಿತು? ಮಾರಾಟ ತೆರಿಗೆ, ಆದಾಯ ತೆರಿಗೆ ತಪ್ಪಿಸಲು ಈ ರೀತಿ ಸುಳ್ಳು ಹೇಳುತ್ತಿರಬಹುದೆಂದು ಶಂಕಿಸಿರುವ ತನಿಖಾಧಿಕಾರಿಗಳು, ಅಗತ್ಯ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಧೀರಜ್ ಸಾಹು ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ



ಮಡಿಕೇರಿ, ಡಿ.12– ಜಾರ್ಖಂಡ್‌ನ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಧೀರಜ್ ಸಾಹು ಅವರನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಧೀರಜ್ ಸಾಹುಗೆ ಸೇರಿದ್ದು ಎನ್ನಲಾದ ಕೋಟ್ಯಾಂತರ ರೂ. ನಗದು ಪತ್ತೆಯಾಗಿದೆ. ಇದು ಭ್ರಷ್ಟಾಚಾರಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಕಾಂಗ್ರೆಸ್ ತಕ್ಷಣ ಧೀರಜ್ ಸಾಹು ಅವರನ್ನು ಪಕ್ಷದಿಂದ ಅಮಾನತು ಮಾಡಿ, ರಾಜ್ಯಸಭಾ ಸ್ಥಾನದಿಂದ ಕೆಳಗಿಳಿಸಬೇಕು ಎಂದು ಆಗ್ರಹಿಸಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಐಟಿ ದಾಳಿ ವೇಳೆ ಅಪಾರ ಹಣ ಸಿಕ್ಕಿದೆ. ಈ ಹಣ ಎಲ್ಲಿಂದ ಬಂತು? ಕಾಂಗ್ರೆಸ್ ಲೂಟಿ ಮಾಡಿದ ಹಣವನ್ನು ಚುನಾವಣೆಗೆ ಬಳಸುತ್ತಿದೆ. ದೇಶವನ್ನೇ ಕಾಂಗ್ರೆಸ್‌ನವರು ಕೊಳ್ಳೆ ಹೊಡೆಯುತ್ತಿದ್ದಾರೆ. ಧೀರಜ್ ಸಾಹುಗೆ ಜೈಲು ಶಿಕ್ಷೆಯಾಗಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್, ವಿಧಾನ ಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಪಕ್ಷದ ಜಿಲ್ಲಾ ಉಪಾಧ್ಯಕ್ಷ ಅರುಣ್ ಕುಮಾರ್, ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ನಗರಾಧ್ಯಕ್ಷ ಮನು ಮಂಜುನಾಥ್, ನಗರಸಭೆ ಸದಸ್ಯರು ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ರಾಯಲ್ ಪೂಜಾರಿ ತಂಡ ಚಾಂಪಿಯನ್

ಮರಗೋಡುವಿನಲ್ಲಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ



ಮಡಿಕೇರಿ, ಡಿ.12– ಬಿಲ್ಲವ ಸಮುದಾಯದ ತಂಡಗಳ ನಡುವಿನ ಪೂಜಾರಿ ಪ್ರೀಮಿಯರ್ ಲೀಗ್ ಪ್ರಥಮ ಆವೃತ್ತಿಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಯಲ್ ಪೂಜಾರಿ ಕೊಡಗು ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಮರಗೋಡುವಿನ ಭಾರತಿ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ ಫೈನಲ್‌ಲ್ಲಿ ಬಿಲ್ಲವ ಟೈಗರ್ಸ್ ಅಮ್ಮತ್ತಿ ತಂಡವನ್ನು 26 ರನ್‌ಗಳಿಂದ ಮಣಿಸಿ ರಾಯಲ್ ಪೂಜಾರಿ ಕೊಡಗು ತಂಡ ಪ್ರಶಸ್ತಿ ಗಳಿಸಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಯಲ್ ಪೂಜಾರಿ ತಂಡ ನಿಗದಿತ 5 ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು 78 ರನ್ ಗಳಿಸಿತು. ಗೆಲುವಿನ ಗುರಿ ಬೆನ್ನತ್ತಿದ ಬಿಲ್ಲವ ಟೈಗರ್ಸ್ ತಂಡ 5 ಓವರ್‌ನಲ್ಲಿ 5 ವಿಕೆಟ್ ನಷ್ಟಕ್ಕೆ 52 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಇದಕ್ಕೂ ಮುನ್ನ ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಬಿಲ್ಲವ ಟೈಗರ್ಸ್ ತಂಡವನ್ನು ಸೂಪರ್ ಓವರ್‌ನಲ್ಲಿ ಮಣಿಸಿ ರಾಯಲ್ ಪೂಜಾರಿ ತಂಡ ಫೈನಲ್ ಪ್ರವೇಶಿಸಿತು. 2ನೇ ಕ್ವಾಲಿಫೈಯರ್‌ನಲ್ಲಿ ಬಿಲ್ಲವ ಪ್ಯಾಂಥರ್ಸ್ ವಿರುದ್ಧ 7 ರನ್ ಅಂತರದ ಗೆಲುವು ಸಾಧಿಸಿದ ಅಮ್ಮತ್ತಿ ತಂಡ ಫೈನಲ್‌ಗೆ ಅರ್ಹತೆ ಗಿಟ್ಟಿಸಿತು. ಬಿಲ್ಲವ ಪ್ಯಾಂಥರ್ಸ್ ತಂಡ ತೃತೀಯ ಬಹುಮಾನಕ್ಕೆ ತೃಪ್ತಿಪಟ್ಟಿತು.

ಪ್ರಥಮ 44,444 ರೂ., ದ್ವಿತೀಯ 24,444 ರೂ. ನಗದು ಹಾಗೂ ಟ್ರೋಫಿ ಹಾಗೂ ತೃತೀಯ ಬಹುಮಾನ ಟ್ರೋಫಿ ನೀಡಲಾಯಿತು. ಜಿಲ್ಲೆಯ ವಿವಿಧೆಡೆಯ ಬಿಲ್ಲವ ಸಮುದಾಯದ 10 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ತೀರ್ಪುಗಾರರಾಗಿ ಧ್ರುವ, ಪ್ರಿನ್ಸ್ ಕುಶಾಲಪ್ಪ, ಪ್ರಮೋದ್ ಕಾರ್ಯನಿರ್ವಹಿಸಿದರು. ಕಿಶೋರ್ ರೈ ಕತ್ತಲೆಕಾಡು, ಪ್ರೇಮ್ ಕಡಗದಾಳು ವೀಕ್ಷಕ ವಿವರಣೆ ನೀಡಿದರು.

ದೇವಟ್ ಪರಂಬುವಿನಲ್ಲಿ ಹಿರಿಯರ ಸಮಾಧಿಗೆ ನಮನ



ಮಡಿಕೇರಿ, ಡಿ.12–ದೇವಟ್ ಪರಂಬುವಿನಲ್ಲಿ ಕೊಡವರ ನರಮೇಧ ನಡೆದು 238 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಹಿರಿಯರ ಸಮಾಧಿಗೆ ಪುಷ್ಪ ನಮನ ಹಾಗೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಇದೇ ವೇಳೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, 1785ರ ಡಿ.12ರಂದು ಷಡ್ಯಂತ್ರದಿಂದ ಸಾವಿರಾರು ಕೊಡವರ ಹತ್ಯೆ ಮಾಡಲಾಗಿದೆ. ಮೈಸೂರು ಸೈನ್ಯವನ್ನು ವಿಶ್ವದ ಅತ್ಯಂತ ಬಲಿಷ್ಠ ಸೇನಾ ಶಕ್ತಿ ಎಂದು ಪರಿಗಣಿಸಲಾಗಿತ್ತು ಮತ್ತು ಯುರೋಪಿಯನ್ ಸೈನ್ಯಕ್ಕಿಂತ ಹೆಚ್ಚು ಶಕ್ತಿಶಾಲಿ ಸೈನ್ಯವಾಗಿತ್ತು. ಅಂತಹ ಪ್ರಬಲ ಸೈನ್ಯ ಕೊಡವ ಯೋಧ ಜನಾಂಗವನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಕೊಡವ ಬುಡಕಟ್ಟುಗಳು ಅಂತಹ ನುರಿತ ಮತ್ತು ಅತ್ಯುತ್ತಮ ಗೆರಿಲ್ಲಾ ಯೋಧರಾಗಿದ್ದರು. ಆದರೆ, ಅವರ ಮಿಲಿಟರಿ ಕೌಶಲ್ಯ ಮತ್ತು ಕುರುಡು ನಿಷ್ಠೆಯನ್ನು ಕೃತಘ್ನ ರಾಜ ಪರಿವಾರ ವ್ಯರ್ಥಮಾಡಿ, ದುರುಪಯೋಗಪಡಿಸಿಕೊಂಡಿತು. ಕೆಳದಿಯ ಸೈನ್ಯದ ವಿರುದ್ಧ ಸೇಡು ತೀರಿಸಿಕೊಳ್ಳಲು ಟಿಪ್ಪು ಕೊಡವರ ವಿರುದ್ಧ ಸೇಡು ತೀರಿಸಿಕೊಂಡಿದ್ದರು. ಈ ಕ್ರೂರ ಅನಾಗರಿಕ ರಾಜ ಪರಿವಾರ ಟಿಪ್ಪುವಿನ ಪಡೆ ಮತ್ತು ದೇವಟ್ ಪರಂಬ್‌ನಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯ ಮಿತ್ರ ಲೀಜಿಯೊನ್ನೈರ್‌ನಿಂದ ಹತ್ಯಾಕಾಂಡದ ಸಮಯದಲ್ಲಿ ಕೊಡವರನ್ನು ಎಂದಿಗೂ ಸಾಂತ್ವನಗೊಳಿಸಲಿಲ್ಲ ಎಂದು ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದರು.

ಅರಮನೆಯ ಸಂಚಿನಲ್ಲಿ ದೇವಟ್ ಪರಂಬು, ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ಕೊಡವ ಬುಡಕಟ್ಟು ಜನಾಂಗದ ಹತ್ಯೆಗಳು ಕೊಡವ ಇತಿಹಾಸದಲ್ಲಿ ಮರೆಯಲಾಗದ ಆಘಾತಕಾರಿ ಅಧ್ಯಾಯವಾಗಿದೆ. ಇದು ಸೂರ್ಯ ಮತ್ತು ಚಂದ್ರ ಇರುವವರೆಗೆ, ಎಂದಿಗೂ ವಾಸಿಯಾಗದ ಗಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಇದೇ ಸಂದರ್ಭ ಸಿಎನ್‌ಸಿ ಮೂಲಕ ಪ್ರಮುಖ ಹಕ್ಕೊತ್ತಾಯಗಳನ್ನು ಮಂಡಿಸಿದರು.

ಈ ವೇಳೆ ಪುಲ್ಲೇರ ಸ್ವಾತಿ ಕಾಳಪ್ಪ, ನಂದೇಟಿರ ಕವಿತಾ, ಚೋಳಪಂಡ ಜ್ಯೋತಿ ನಾಣಯ್ಯ, ಅಲ್ಮಂಡ ಜೈ, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಪಟ್ಟಮಾಡ ಅಶೋಕ್, ಮಂದಪಂಡ ವೇಣು ಅಯ್ಯಣ್ಣ, ಚೀಯಬೇರ ಸತೀಶ್, ಅಲ್ಮಂಡ ನೆಹರು, ಅಪ್ಪಚ್ಚಿರ ರಮ್ಮಿ ನಾಣಯ್ಯ, ಕಾಟುಮಣಿಯಂಡ ಉಮೇಶ್, ಮಣವಟ್ಟೀರ ಜಗದೀಶ್, ಕಾಂಡೇರ ಸುರೇಶ್, ಪಾರ್ವಂಗಡ ನವೀನ್, ಚಂಬಂಡ ಜನತ್, ಅಜ್ಜಿಕುಟ್ಟೀರ ಲೋಕೇಶ್, ಕಿರಿಯಮಾಡ ಶೆರಿನ್, ಅಪ್ಪೆಂಗಡ ಮಾಲೆ, ಪುಟ್ಟಿಚಂಡ ಡಾನ್ ದೇವಯ್ಯ, ಮಣವಟ್ಟೀರ ಚಿಣ್ಣಪ್ಪ, ಪುಲ್ಲೇರ ಕಾಳಪ್ಪ, ನಂದೇಟಿರ ರವಿ ಸುಬ್ಬಯ್ಯ, ಪುದಿಯೊಕ್ಕಡ ಕಾಶಿ, ಚೋಳಪಂಡ ನಾಣಯ್ಯ ಮತ್ತಿತರರು ಸಮಾಧಿಗೆ ಪುಷ್ಪ ನಮನ ಸಲ್ಲಿಸಿದರು.

ಜನರ ಕುಂದುಕೊರತೆ ಶೀಘ್ರ ವಿಲೇವಾರಿಗೊಳಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸೂಚನೆ



> ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕಂಪನಿಗಳು ಸ್ಥಳೀಯರಿಗೆ ಉದ್ಯೋಗ ನೀಡಬೇಕು. ಈ ಸಂಬಂಧ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಗ್ರಾಮಗಳ 150 ಯುವಕರಿಗೆ ತಾಂತ್ರಿಕ ವಿಷಯಗಳ ಕುರಿತು ತರಬೇತಿ ನೀಡುವ ಜೊತೆಗೆ ಕೆಲಸ ದೊರೆಯುವಂತಾಗಬೇಕು. ಮುಖ್ಯವಾಗಿ ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕು. -ಶಿಲ್ಪಾನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ, ಡಿ.12–ಸಾರ್ವಜನಿಕರ ದೂರು ಹಾಗೂ ಕುಂದುಕೊರತೆಗಳನ್ನು ಪರಾಮರ್ಶಿಸಿ ಯಾವುದೇ ವಿಳಂಬವಾಗದಂತೆ ಶೀಘ್ರವಾಗಿ ವಿಲೇವಾರಿಗೊಳಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ ವ್ಯವಸ್ಥೆಯ ಐಪಿಜಿಆರ್‌ಎಸ್, ಸಿಪಿಜಿಆರ್‌ಎಎಂಎಸ್, ಸಿಎಂಜೆಡಿ ಹಾಗೂ ಜನತಾ ದರ್ಶನ ಪೋರ್ಟಲ್‌ನಲ್ಲಿ ದಾಖಲಾಗಿರುವ ದೂರುಗಳ ಪರಿಹಾರಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ ವ್ಯವಸ್ಥೆಯಡಿ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುವ ದೂರುಗಳಿಗೆ ಪರಿಹರಿಸಲು ಯಾವುದೇ ವಿಳಂಬಕ್ಕೆ ಅವಕಾಶವಿಲ್ಲ. ನಿಗದಿತ ಕಾಲಮಿತಿಯಲ್ಲಿ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅರಿತು ಇತ್ಯರ್ಥಪಡಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ಯಾವುದೇ ಸಬೂಬು ಹೇಳಿಕೆಯನ್ನು ಸಹಿಸುವುದಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಯೋಜನೆಗಳ ಗುರಿ, ಸಾಧನೆಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸುವ ಜೊತೆಗೆ ಸಾರ್ವಜನಿಕರ ಸಮಸ್ಯೆ, ದೂರುಗಳನ್ನು ಆಲಿಸಬೇಕು. ದೂರು ದಾಖಲಿಸುವ ಸಾರ್ವಜನಿಕರಿಗೆ ದೂರವಾಣಿ ಕರೆ ಮಾಡಿ, ಸಮಸ್ಯೆಗಳ ಬಗ್ಗೆ ಖುದ್ದಾಗಿ ವಿಚಾರಿಸಬೇಕು. ಆಡಳಿತದ ಬಗ್ಗೆ ಜನರಲ್ಲಿ ನಂಬಿಕೆ, ಭರವಸೆ ಮೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಜನತಾ (ಸಿಎಂಜೆಡಿ) ದರ್ಶನ, ಸೆಂಟ್ರಲ್ ಪೋರ್ಟಲ್‌ಗ್ರ್ಯಾಮ್ (ಸಿಪಿಜಿಆರ್‌ಎಎಂ)ನಲ್ಲಿನ ಆನ್‌ಲೈನ್ ವ್ಯವಸ್ಥೆಯಡಿ ಹಾಗೂ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ ಜನತಾ (ಡಿಸಿಜೆಡಿ) ದರ್ಶನದಲ್ಲಿ ಸ್ವೀಕರಿಸುವ ಅರ್ಜಿಗಳ ಕ್ರೋಢಿಕೃತ ದೂರುಗಳ ಮಾಹಿತಿ ಐಪಿಜಿಆರ್‌ಎಸ್‌ನಲ್ಲಿ ದೊರೆಯಲಿದೆ. ದಾಖಲಾಗುವ ದೂರುಗಳನ್ನು ಆಯಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಪರಿಹರಿಸಲು ಕಾರ್ಯೋನ್ಮುಖರಾಗಬೇಕು ಎಂದರು.

ಸಕಾಲ ಸೇವೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಿಗದಿತ ಅವಧಿಯಲ್ಲಿ ಈ–ಸ್ವತ್ತು ನೀಡದ ಬಗ್ಗೆ ಸಾಕಷ್ಟು ದೂರುಗಳು ಮೊಬೈಲ್ ಆ್ಯಪ್, ವೆಬ್ ಪೋರ್ಟಲ್ ಹಾಗೂ ಸಹಾಯವಾಣಿ (1902) ಮೂಲಕ ಆನ್‌ಲೈನ್‌ನಲ್ಲಿ ಸ್ವೀಕೃತವಾಗುತ್ತಿವೆ. ಈ–ಸ್ವತ್ತು ನೀಡಿಕೆಯಲ್ಲಿ ಭೌತಿಕ ರಶೀದಿಗಳನ್ನು ನೀಡಬೇಕು. ಕಂದಾಯ ಹಾಗೂ ಆರ್‌ಡಿಪಿಆರ್ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿವೆ. ಈ ದೂರುಗಳನ್ನು ಅದಷ್ಟು ಬೇಗ ಪರಿಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚಿಸಿದರು.

ನಗರಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ, ಸಹಕಾರ, ಬಿಸಿಎಂ, ಕೆಎಸ್‌ಆರ್‌ಟಿಸಿ ಸೇರಿದಂತೆ ಇನ್ನಿತರ ಇಲಾಖೆಗಳಿಗೆ ಸಂಬಂಧಿಸಿದಂತೆ ದಾಖಲಾಗಿರುವ ದೂರುಗಳನ್ನು ಜಿಲ್ಲಾಧಿಕಾರಿ ಸಭೆಯಲ್ಲಿ ಸಮಗ್ರವಾಗಿ ಪರಿಶೀಲಿಸಿ, ಅಧಿಕಾರಿಗಳಿಗೆ ಸಲಹೆ, ಸೂಚನೆ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಸಾರ್ವ ಜನಿಕ ದೂರು ನಿವಾರಣಾ ತಂತ್ರಾಂಶ ವ್ಯವಸ್ಥೆಯ ಸಮಾಲೋಚಕ ಪ್ರಭುಸ್ವಾಮಿ, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಮಹದೇವಸ್ವಾಮಿ ಆಯ್ಕೆ



ಚಾಮರಾಜನಗರ, ಡಿ.12–ತಾಲೂಕು ಪ್ರಾಥಮಿಕ ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಎಚ್.ಎಸ್.ಮಹದೇವಸ್ವಾಮಿ (ಎನ್‌ರಿಚ್) ಹಾಗೂ ಉಪಾಧ್ಯಕ್ಷರಾಗಿ ಕೆ.ಬಿ.ಭಾನುಪ್ರಕಾಶ್ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷರಾಗಿದ್ದ ಎಚ್.ಎಂ.ಬಸವಣ್ಣ ಹಾಗೂ ಉಪಾಧ್ಯಕ್ಷ ಮಹದೇವನಾಯಕ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಮಹದೇವಸ್ವಾಮಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಭಾನುಪ್ರಕಾಶ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿಯಾದ ಸಹಕಾರ ಅಭಿವೃದ್ಧಿ ಅಧಿಕಾರಿ ತ್ಯಾಗರಾಜು ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ರೈತ ಅಭಿವೃದ್ಧಿಗೆ ಶ್ರಮ: ಅಧಿಕಾರ ವಹಿಸಿಕೊಂಡು ಮಾತನಾಡಿದ ಅಧ್ಯಕ್ಷ ಮಹದೇವಸ್ವಾಮಿ, ಸಂಘದ ನಿರ್ಗಮಿತ ಅಧ್ಯಕ್ಷ ಎಚ್.ಎಂ.ಬಸವಣ್ಣ ಮಾರ್ಗದರ್ಶನದಲ್ಲಿ ಎಲ್ಲಾ ನಿರ್ದೇಶಕರ ಸಹಕಾರ ಮತ್ತು ವಿಶ್ವಾಸದೊಂದಿಗೆ ಬ್ಯಾಂಕ್ ಅಭಿವೃದ್ಧಿ ಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಮಾಜಿ ಅಧ್ಯಕ್ಷ ಎಚ್.ಎಂ.ಬಸವಣ್ಣ, ಮಾಜಿ ಉಪಾಧ್ಯಕ್ಷ ಮಹದೇವನಾಯಕ, ನಿರ್ದೇಶಕರಾದ ನಲ್ಲೂರು ಮಹದೇವಪ್ಪ, ಜನ್ನೂರು ಎ.ದೊರೆಸ್ವಾಮಿ, ಬದನಗುಪ್ಪೆ ಬಸವರಾಜು, ಶಿವಪುರದ ಎಸ್.ರಾಜು, ಬೆಟ್ಟದಪುರದ ಶಿವಶಂಕರಪ್ಪ, ಬಿಸಲವಾಡಿ ಸಾಕಮ್ಮ, ಕಲ್ಪುರ ರತ್ನಮ್ಮ, ಮ್ಯಾನೇಜರ್ ಸತೀಶ್, ಶಶಿಕಿರಣ್, ನವೀನ್, ದಿನಾಕರ್, ಮೊದಲಾದವರು ಇದ್ದರು.

ಇದೇ ವೇಳೆ ಮಾಜಿ ಶಾಸಕರಾದ ಎನ್.ಮಹೇಶ್, ಎಸ್.ಬಾಲರಾಜು, ಹಿರಿಯ ಸಹಕಾರಿ ಧುರೀಣ ಕೋಡಿಮೋಳೆ ರಾಜಶೇಖರ್, ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ, ಮಾಜಿ ನಿರ್ದೇಶಕ ಬಸವರಾಜು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ನಾಗೇಂದ್ರ ಮಹದೇವಪ್ರಸಾದ್ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಶುಭ ಕೋರಿದರು.

ತೆಪ್ಪದ ಶುಲ್ಕ ಹೆಚ್ಚಿಸುವಂತೆ ಮನವಿ ಸಲ್ಲಿಕೆ

ಚಾಮರಾಜನಗರ, ಡಿ.12–ಜಿಲ್ಲೆಯ ಪ್ರವಾಸಿ ತಾಣವಾದ ಹೊಗೆನಕಲ್ ಜಲಪಾತ ವೀಕ್ಷಣೆಯ ಪ್ರವಾಸಿ ತೆಪ್ಪದ ಶುಲ್ಕವನ್ನು ಹೆಚ್ಚಿಸುವಂತೆ ಒತ್ತಾಯಿಸಿ ಹನೂರು ತಾಲೂಕಿನ ಗೋಪಿನಾಥಂ ಮಾರುಕೊಟ್ಟಾಯ್ ಗ್ರಾಮದ ಹೊಗೇನಕಲ್ ಫಾಲ್ಸ್ ತೆಪ್ಪ ಓಡಿಸುವವರ ಸಂಘದ ಪದಾಧಿಕಾರಿಗಳು ಕೊಳ್ಳೇಗಾಲ ಕಾವೇರಿ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಸುರೇಂದ್ರ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಂಕರಾಜು ಅವರಿಗೆ ಮನವಿ ಸಲ್ಲಿಸಿದರು.

ದೋಣಿಗೆ ನಿಗದಿಪಡಿಸಿರುವ 500 ರೂ. ಶುಲ್ಕದಿಂದ ಸಂಘದ ಎಲ್ಲಾ ಸದಸ್ಯರಿಗೆ ಸರಾಸರಿ ಕೂಲಿ ದೊರೆಯುವುದಿಲ್ಲ. ದೋಣಿ ಒಂದಕ್ಕೆ 1500 ರೂ. ಶುಲ್ಕ ಹೆಚ್ಚಳ ಮಾಡುವಂತೆ ಈಗಾಗಲೇ ಒಂದು ವರ್ಷದ ಹಿಂದೆ ಮನವಿ ಸಲ್ಲಿಸಲಾಗಿದೆ. ಆದರೆ, ಯಾವುದೇ ಶುಲ್ಕ ಹೆಚ್ಚು ಮಾಡಿಲ್ಲ. ತಮಿಳುನಾಡು ಸರ್ಕಾರದ ಮಾದರಿಯಲ್ಲಿ 1500 ರೂ. ಶುಲ್ಕ ಹೆಚ್ಚಳ ಮಾಡಬೇಕು. ಇಲ್ಲದಿದ್ದರೆ ತೆಪ್ಪ ಓಡಿಸುವುದನ್ನು ಸ್ಥಗಿತಗೊಳಿಸುವುದಾಗಿ ಮನವಿಯಲ್ಲಿ ಎಚ್ಚರಿಸಿದ್ದಾರೆ.

ಶುಲ್ಕ ಹೆಚ್ಚಳಕ್ಕೆ ಪ್ರಸ್ತಾವನೆ: ಮನವಿ ಸ್ವೀಕರಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಸುರೇಂದ್ರ ಮಾತನಾಡಿ, ನಿಮ್ಮ ಪರಿಶ್ರಮ ನಮಗೆ ತಿಳಿದಿದೆ. ಇಲಾಖೆಯ ಮೇಲಧಿಕಾರಿಗಳಿಗೆ 1500 ರೂ. ಶುಲ್ಕ ಹೆಚ್ಚಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗುವುದು. ಅನುಮೋದನೆ ಬರುವ ತನಕ ಹಳೇ ದರದಲ್ಲಿ ತೆಪ್ಪ ಓಡಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕು ಎಂದರು. ಈ ಸಂದರ್ಭದಲ್ಲಿ ಬೋಟ್ ಮೆನ್ ಸಂಘದ ಅಧ್ಯಕ್ಷ ರತ್ನವೇಲು, ಕೆ.ಪಳನಿಸ್ವಾಮಿ, ಪ್ರಶಾಂತ್, ತೆರುಮಾಲ್, ಧರ್ಮರಾಜು, ಮುತ್ತು, ಪಳನಿಸ್ವಾಮಿ ಇತರರು ಹಾಜರಿದ್ದರು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸುವ ವಾತಾವರಣ ನಿರ್ಮಿಸಿ



ಚಾಮರಾಜನಗರ, ಡಿ.12–ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸಲು ಹಾಗೂ ಅವರ ಸಾಮರ್ಥ್ಯ ಪರೀಕ್ಷಿಸುವ ವಾತಾವರಣಗಳನ್ನು ಶಾಲಾ–ಕಾಲೇಜುಗಳಲ್ಲಿ ನಿರ್ಮಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಹೇಳಿದರು.

ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು, ಪೋಷಕರು ಬೋಧನೆಯೊಂದಿಗೆ ಮಕ್ಕಳಲ್ಲಿ ಮೌಲ್ಯವನ್ನು ಸಹ ಬೆಳೆಸಲು ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇಅರಸ್ ಮಾತನಾಡಿ, ಮಕ್ಕಳಲ್ಲಿ ಸಕಾರಾತ್ಮಕ ಭಾವನೆಗಳನ್ನು ಬೆಳೆಸಬೇಕು. ಬಾಲ್ಯದಲ್ಲೇ ಮಕ್ಕಳು ಶ್ರೀಮಂತಿಕೆ, ದುಬಾರಿ ವಸ್ತುಗಳತ್ತ ಆಕರ್ಷಣೆಯಾಗದಂತೆ ನಿಗಾವಹಿಸಬೇಕು. ಜಿಲ್ಲೆಯ ಶೈಕ್ಷಣಿಕ ಪ್ರಗತಿ ಚೆನ್ನಾಗಿದ್ದು, ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ರಾಜ್ಯದಲ್ಲಿ ಮೊದಲ ಐದು ಸ್ಥಾನ ಪಡೆಯುವ ಸಾಮರ್ಥ್ಯವಿದೆ ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಮಕ್ಕಳಲ್ಲಿ ಪರಿಸರ ಸಂರಕ್ಷಣೆ ಜ್ಞಾನ ಬೆಳೆಸಬೇಕು. ರ‍್ಯಾಂಕ್‌ಗೆ ಮಾತ್ರ ಗಮನಹರಿಸದೇ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಶಿಕ್ಷಣ ಹಾಗೂ ಶಾಲೆಯ ಪರಿಸರ ಪೂರಕವಾಗಿರಬೇಕು ಎಂದರು.

ಇದೇ ವೇಳೆ ಶಾಲಾ ವಾರ್ಷಿಕೋತ್ಸವ ಅಂಗವಾಗಿ ದಶಪಥ ಶೀರ್ಷಿಕೆಯಡಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ.ಸ್ವಾಮಿ, ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲ ಎಚ್.ಎಂ.ಉಮೇಶ್, ಸಹಶಿಕ್ಷಕರು, ಸಿಬ್ಬಂದಿ ಹಾಜರಿದ್ದರು.

ಉಡ ಸಾಗಿಸುತ್ತಿದ್ದ ಇಬ್ಬರ ಬಂಧನ

ಕೊಳ್ಳೇಗಾಲ, ಡಿ.12–ಬೈಕ್‌ನಲ್ಲಿ ಉಡ ಸಾಗಿಸುತ್ತಿದ್ದ ಇಬ್ಬರನ್ನು ಅರಣ್ಯ ಸಂಚಾರಿ ದಳದವರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಶಿಕಾರಿಪುರ ಗ್ರಾಮದ ರಜಿನಿಕಾಂತ್ (31) ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಕೆ.ಎಡತೊರೆ ಅಂಚೆಯ ಟೈಗರ್ ಬ್ಲಾಕ್ ಗ್ರಾಮದ ಸಾರ್ತಾಜ್ (55) ಬಂಧಿತರು. ಇವರು ಜಾಗೇರಿ ಅರಣ್ಯ ಪ್ರದೇಶದಲ್ಲಿ ಉಡವನ್ನು ಭೇಟೆಯಾಡಿ ಅಂಜಿ ವೃತ್ತದಿಂದ ಚೆನ್ನಿಪುರದೊಡ್ಡಿ ಗ್ರಾಮಕ್ಕೆ ತೆರಳುವ ಚಾನಲ್ ರಸ್ತೆಯಲ್ಲಿ ಸಾಗಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಅರಣ್ಯ ಸಂಚಾರಿ ದಳದ ಎಸ್ಐ ವಿಜಯರಾಜ್ ಹಾಗೂ ಸಿಬ್ಬಂದಿ ಉಡ ಹಾಗೂ ಬೈಕ್ ಅನ್ನು ವಶಪಡಿಸಿಕೊಂಡು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಈ ಸಂಬಂಧ ಎಫ್‌ಎಂಎಸ್ ಕಚೇರಿಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಮುಖ್ಯ ಪೇದೆಗಳಾದ ರಾಮಚಂದ್ರ, ಬಸವರಾಜು, ಶಂಕರ, ಸ್ವಾಮಿ, ಲತಾ, ಪೇದೆ ಬಸವರಾಜು, ಚಾಲಕ ಪ್ರಭಾಕರ್ ಭಾಗವಹಿಸಿದ್ದರು.

ಡಿ.15, ಜಾನಪದ ಕಲಾ ಪ್ರದರ್ಶನ

ಚಾಮರಾಜನಗರ, ಡಿ.12–ಪ್ರಸಕ್ತ ಸಾಲಿನ ಐಇಸಿ ಕಾರ್ಯಕ್ರಮದಡಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಿ.15ರಂದು ಜಾನಪದ ಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆಯುವ ಕಲಾ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋರಾಟದಿಂದ ಮಾತ್ರ ಕನ್ನಡ ಉಳಿವು ಸಾಧ್ಯ



ಗುಂಡ್ಲುಪೇಟೆ, ಡಿ.12– ಕನ್ನಡಪರ ಸಂಘಟನೆಗಳು ಹೋರಾಡಿದಾಗ ಮಾತ್ರ ಕನ್ನಡ ನೆಲ, ಜಲ ಹಾಗೂ ಮಾತೃಭಾಷೆಯ ಉಳಿವು ಸಾಧ್ಯ ಎಂದು ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡಪ್ರಸಾದ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸಿಎಂಎಸ್ ಮಕ್ಕಳ ಮನೆಯಲ್ಲಿ ಅಖಿಲ ಭಾರತ ಕರುನಾಡ ಯುವಶಕ್ತಿ ಸಂಘಟನೆ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ಸುವರ್ಣ ಕರ್ನಾಟಕ ಮಹೋತ್ಸವ ಹಾಗೂ ಸಂಘಟನೆಯ 3ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದ ಗಡಿಭಾಗವಾದ ಇಲ್ಲಿ ದಿನೇ ದಿನೇ ಅನ್ಯಭಾಷಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಇಲ್ಲಿಯೇ ಭೂಮಿ ಖರೀದಿಸಿ ದೊಡ್ಡಮಟ್ಟದಲ್ಲಿ ವ್ಯವಹಾರಗಳನ್ನು ನಡೆಸುತ್ತಿದ್ದು, ಕೆಲಸ ಕಾರ್ಯಗಳಿಗೆ ತಮ್ಮ ಊರುಗಳಿಂದಲೇ ಜನರನ್ನು ಕರೆತರುತ್ತಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಕನ್ನಡಿಗರನ್ನು ಹುಡುಕುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಕನ್ನಡಪರ ಸಂಘಟನೆಗಳು ಇದನ್ನು ಮನಗಂಡು ಕನ್ನಡದ ಉಳಿವಿಗಾಗಿ ಹೋರಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಸೋಮಶೇಖರ್ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮುನೀರ್ ಪಾಷಾ, ರಾಜ್ಯ ಕಾನೂನು ಸಲಹೆಗಾರ ಉಮೇಶ್, ಯುವಘಟಕದ ರಾಜ್ಯಾಧ್ಯಕ್ಷ ಈಶ್ವರ್, ಬಿಎಸ್ಪಿ ಅಧ್ಯಕ್ಷ ಗೋವಿಂದರಾಜು, ಅಕ್ಷರ ಸಾಹಿತಿ ನಾಗಭೂಷಣ ಬಸವಾಪುರ, ಖಜಾನಾಧಿಕಾರಿ ನಾಗರತ್ನಮ್ಮ, ಸಿಎಂಎಸ್ ಮಕ್ಕಳ ಮನೆಯ ವ್ಯವಸ್ಥಾಪಕ ಶರವಣ ಮತ್ತಿತರರು ಭಾಗವಹಿಸಿದ್ದರು.

ರಾಜ್ಯದಲ್ಲಿ 34,115 ಕೋಟಿ ರೂ. ಹೂಡಿಕೆಯ 14 ಉದ್ಯಮ ಸ್ಥಾಪನೆ; 13,308 ಉದ್ಯೋಗ ಸೃಷ್ಟಿ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮಂಗಳವಾರ ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ ಸಭೆಯಲ್ಲಿ, ಒಟ್ಟು 34,115 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯ 14 ಉದ್ಯಮಗಳ ಸ್ಥಾಪನೆಗೆ ಅನುಮೋದನೆ ನೀಡಲಾಯಿತು. ಇದರಿಂದ 13,308 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ.

ಹೆಚ್ಚುವರಿ 13,911 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಮಾಡುವ ಫಾಕ್ಸ್‌ಕಾನ್‌ನ ಪ್ರಸ್ತಾವನೆಯನ್ನು ಸಮಿತಿಯು ಅನುಮೋದಿಸಿದೆ. ಸೆಮಿಕಂಡಕ್ಟರ್ ಕ್ಷೇತ್ರದ ದೈತ್ಯ ಸಂಸ್ಥೆಯಾಗಿರುವ ಫಾಕ್ಸ್‌ಕಾನ್, ಈಗಾಗಲೇ ರಾಜ್ಯದಲ್ಲಿ ರೂ 8,000 ಕೋಟಿ ಬಂಡವಾಳ ಹೂಡಿಕೆ ಮಾಡಲು ಅನುಮೋದನೆ ಪಡೆದಿದೆ.

ಜೆಎಸ್‌ಡಬ್ಲ್ಯು ರಿನ್ಯೂ ಎನರ್ಜಿ ಫೋರ್ ಲಿಮಿಟೆಡ್ (ರೂ 4,960 ಕೋಟಿ), ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್(ರೂ 3,804 ಕೋಟಿ), ಟೊಯೊಟಾ ಕಿರ್ಲೋಸ್ಕರ್ ಮೋಟರ್ ಪ್ರೈವೇಟ್ ಲಿಮಿಟೆಡ್ (ರೂ 3237.30 ಕೋಟಿ), ಟಿಆರ್‌ಐಎಲ್ ಬೆಂಗಳೂರು ರಿಯಲ್ ಎಸ್ಟೇಟ್ ಸಿಕ್ಸ್ ಲಿಮಿಟೆಡ್ (ರೂ. 3273 ಕೋಟಿ ಹೂಡಿಕೆ), ಜಾನಕಿ ಕಾರ್ಪ್ ಲಿಮಿಟೆಡ್ (ರೂ. 607 ಕೋಟಿ ಮೊತ್ತದ ಹೆಚ್ಚುವರಿ ಹೂಡಿಕೆ) ಪ್ರಸ್ತಾವನೆಗಳು 'ಎಸ್‌ಎಚ್‌ಎಲ್‌ಸಿಸಿ' ಅನುಮೋದನೆ ಪಡೆದಿರುವ ದೊಡ್ಡ ಮೊತ್ತದ ಬಂಡವಾಳ ಹೂಡಿಕೆ ಯೋಜನೆಗಳಲ್ಲಿ ಸೇರಿವೆ.

ಸಮಿತಿಯ ಮುಂದೆ ಮಂಡಿಸಲಾದ ಪ್ರಸ್ತಾವನೆಗಳ ಪರಿಶೀಲನೆಯ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೂಡಿಕೆದಾರರು ಉದ್ಯಮ ಸ್ಥಾಪನೆಗೆ ಸಲ್ಲಿಸಿದ ಅರ್ಜಿಗಳ ಕುರಿತು ಎಲ್ಲ ಇಲಾಖೆಗಳು ನಿಗದಿತ ಕಾಲಮಿತಿಯಲ್ಲಿ ತಮ್ಮ ಅಭಿಪ್ರಾಯ ನೀಡಬೇಕು. ಎಲ್ಲ ಷರತ್ತುಗಳನ್ನು ಪೂರೈಸುವ ಸಂದರ್ಭದಲ್ಲಿ ಏಕಗವಾಕ್ಷಿ ವ್ಯವಸ್ಥೆಯಲ್ಲಿ 30 ದಿನಗಳಲ್ಲಿ ಅನುಮೋದನೆ ನೀಡಬೇಕು. ನಂತರ ಉದ್ಯಮಿಗಳು ಪುನಃ ವಿವಿಧ ಇಲಾಖೆಗಳಿಗೆ ಅಲೆಯುವಂತಾಗಬಾರದು ಎಂದು ಸೂಚನೆ ನೀಡಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪ್ರಸ್ತಾವನೆಗಳ ಪರಿಶೀಲನೆಯಲ್ಲಿ ವಿಳಂಬವಾಗುತ್ತಿರುವುದನ್ನು ಗಮನಿಸಿದ ಮುಖ್ಯಮಂತ್ರಿಗಳು, ನಿಗದಿತ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಿದರು.

ಒಂದನೇ ಪುಟದಿಂದ

ರಾಜಭವನಕ್ಕೆ ಬಾಂಬ್ ಬೆದರಿಕೆ ಕರೆ

ಸುದ್ದಿಯನ್ನು ಭಾಸ್ಕರ್ ತಿಳಿದುಕೊಂಡಿದ್ದ. ಈ ಬಗ್ಗೆ ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದ ಬಗ್ಗೆಯೂ ತಿಳಿದುಕೊಂಡಿದ್ದ. ಸೋಮವಾರ ಊರಿನಿಂದ ಬೆಂಗಳೂರಿಗೆ ಬಂದಿದ್ದ ಈತ ಬೆಂಗಳೂರು ಪೊಲೀಸರನ್ನು ಮತ್ತೆ ಆಟವಾಡಿಸಬೇಕು ಎಂದು ನಿರ್ಧರಿಸಿದ್ದ. ಇದಕ್ಕಾಗಿ ಗೂಗಲ್‌ನಲ್ಲಿ ಸರ್ಚ್ ಮಾಡಿ ಎನ್‌ಐಎ ನಂಬರ್ ಪಡೆದುಕೊಂಡಿದ್ದ. ನಂತರ ರಾಜಭವನಕ್ಕೆ ಬಾಂಬ್ ಇಟ್ಟಿರುವುದಾಗಿ ಕರೆ ಮಾಡಿದ್ದ. ಕರೆ ಕಟ್ ಮಾಡಿ ಬಳಿಕ ಸ್ಥಳದಿಂದ ಎಸ್ಕೇಪ್ ಆಗಿದ್ದ. ಇತ್ತ ಬೆದರಿಕೆ ಕರೆಯಿಂದ ಗಾಬರಿಯಾದ ಎನ್‌ಐಎ (NIA) ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಂತೆಯೇ ಪೊಲೀಸರು ಬಾಂಬ್ ಬೆದರಿಕೆ ಕರೆ ನಂತರ ಕರೆ ಬಂದ ನೆಟ್ವರ್ಕ್ ಟ್ರ್ಯಾಕ್ ಮಾಡುತ್ತಿದ್ದರು. ಆದರೆ ಆರೋಪಿ ಬೆಂಗಳೂರಿನಿಂದ ನೇರವಾಗಿ ಆಂಧ್ರದ ಚಿತ್ತೂರಿನ ದೇವಸ್ಥಾನವೊಂದಕ್ಕೆ ತೆರಳಿದ್ದ. ಅಂತೆಯೇ ಚಿತ್ತೂರಿನಿಂದ ತನ್ನೂರಿಗೆ ವಾಪಸ್ ಆಗುವಾಗ ಭಾಸ್ಕರ್‌ನನ್ನು ಪೊಲೀಸರು ಬಂಧಿಸಿದ್ದಾರೆ. ವಿಧಾನಸೌಧ ಠಾಣೆ ಪೊಲೀಸರು ಭಾಸ್ಕರ್‌ನ ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.

ವಿದ್ಯಾಶಾಲಾ ಆವರಣದಲ್ಲಿ ಚಿರತೆ ಪ್ರತ್ಯಕ್ಷ

ಬಳಿ ರೈಲ್ವೆ ಹಳಿ ಪಕ್ಕದ ರಸ್ತೆಯುದ್ದಕ್ಕೂ ಗಿಡಗಂಟಿಗಳಿವೆ. ಇಂತಹ ಸ್ಥಳಗಳಲ್ಲಿ ಜನ ಎಚ್ಚರಿಕೆಯಿಂದಿರುವುದು ಒಳ್ಳೆಯದು. ಕೆಲ ವರ್ಷದ ಹಿಂದೆ ಗೋಕುಲಂ ಮೂರನೇ ಹಂತದ ಬಯಲು ಪ್ರದೇಶದಲ್ಲಿ ಪತ್ತೆಯಾಗಿದ್ದ ಚಿರತೆಯನ್ನು ಅರಣ್ಯ ಇಲಾಖೆ ಸುರಕ್ಷಿತವಾಗಿ ಸೆರೆ ಹಿಡಿದಿತ್ತು. ಪ್ರಸಕ್ತ ವರ್ಷಾರಂಭದಲ್ಲಿ ಸಿಎಫ್‌ಟಿಆರ್ ಆವರಣದಲ್ಲಿ ಎರಡು ಚಿರತೆಗಳು ಪ್ರತ್ಯಕ್ಷವಾಗಿದ್ದವು. ಬೋನ್ ಇಟ್ಟು, ಕ್ಯಾಮರಾ ಟ್ರ್ಯಾಪ್ ಅಳವಡಿಸಿ ಕಾರ್ಯಾಚರಣೆ ನಡೆಸಿದ್ದರೂ ಪತ್ತೆಯಾಗಿರಲಿಲ್ಲ. ಆ ಚಿರತೆಗಳೇ ಯಾವುದೋ ಸ್ಥಳದಲ್ಲಿ ಅಡಗಿ ಸುತ್ತಮುತ್ತ ಅಡ್ಡಾಡುತ್ತಿರಬಹುದು ಎಂಬ ಮಾತುಗಳೂ ಕೇಳಿಬರುತ್ತಿವೆ. ಆದರೆ ಈವರೆಗೆ ಜನ–ಜಾನುವಾರುಗಳ ಮೇಲೆ ಚಿರತೆ ದಾಳಿ ನಡೆಸದಿರುವುದು ಸಮಾಧಾನದ ಸಂಗತಿ.

ಈ ಬಗ್ಗೆ ಅನಗತ್ಯವಾಗಿ ಆತಂಕಕ್ಕೆ ಒಳಗಾಗದೆ, ಎಚ್ಚರಿಕೆ ವಹಿಸುವುದು ಒಳ್ಳೆಯದು. ರಾತ್ರಿ ವೇಳೆ ಕುರುಚಲು ಗಿಡಗಂಟಿಗಳಿರುವ ಜಾಗದಲ್ಲಿ ಅಥವಾ ನಿರ್ಜನ ಪ್ರದೇಶದಲ್ಲಿ ಒಂಟಿಯಾಗಿ ಓಡಾಡುವುದನ್ನು ಮಾಡಬಾರದು. ನಿವಾಸಿಗಳಲ್ಲಿ ಎಚ್ಚರಿಕೆ ಮೂಡಿಸುವ ಉದ್ದೇಶ ಹಾಗೂ ಸಾರ್ವಜನಿಕ ಕಳಕಳಿಯಿಂದ ಈ ವರದಿ ಪ್ರಕಟಿಸುತ್ತಿದ್ದೇವೆ.

ಡಿ.21ರಿಂದ 'ಯುವ ನಿಧಿ'ಗೆ ನೋಂದಣಿ

2022–23ರಲ್ಲಿ ತೇರ್ಗಡೆ ಹೊಂದಿದ ವೃತ್ತಿ ಶಿಕ್ಷಣ ಸೇರಿದಂತೆ ಎಲ್ಲಾ ಪದವಿ ಪೂರೈಸಿದ ಯುವಕ ಯುವತಿಯರಿಗೆ ನೀಡಲು ತೀರ್ಮಾನಿಸಲಾಗಿದೆ. ನೋಂದಣಿ ಮಾಡಿಕೊಂಡ ದಿನದಿಂದ 2 ವರ್ಷದ ವರೆಗೆ ಪ್ರತಿ ತಿಂಗಳು 3 ಸಾವಿರ ರೂ., ಡಿಪ್ಲೊಮಾ ಪದವೀಧರರಿಗೆ 1,500 ರೂ. ನೀಡಲಾಗುತ್ತದೆ. ಅಷ್ಟರೊಳಗೆ ಉದ್ಯೋಗ ಪಡೆದವರು ಘೋಷಿಸಿಕೊಳ್ಳಬೇಕು. 24 ತಿಂಗಳ ಒಳಗೆ ಉದ್ಯೋಗ ಸಿಕ್ಕರೆ ಈ ಯೋಜನೆ ರದ್ದಾಗುತ್ತದೆ. ಯುವಕ, ಯುವತಿ ಹಾಗೂ ತೃತೀಯ ಲಿಂಗಿಗಳಿಗೂ ಈ ಯೋಜನೆ ಅನ್ವಯ ಆಗಲಿದೆ.

ಭಜನ್ ಲಾಲ್ ಶರ್ಮಾ ಆಯ್ಕೆ

ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಭೇಟಿ ಮಾಡಿದ್ದರು. ಚುನಾವಣಾ ಗೆಲುವಿನ ನಂತರ ಪಕ್ಷದ ಹಲವು ಶಾಸಕರಿಗೆ ವಸುಂಧರಾ ಅವರು ಔತಣಕೂಟ ನೀಡಿದ್ದು, ಒತ್ತಡದ ರಾಜಕಾರಣವೆಂಬಂತಾಗಿತ್ತು. ಆದರೆ, ನಡ್ಡಾ ಅವರನ್ನು ಭೇಟಿಯಾದ ನಂತರ ವಸುಂಧರಾ ಅವರ ಸ್ವರ ಬದಲಾಯಿತು. ತಾವು ಪಕ್ಷದ ಶಿಸ್ತಿನ ಕಾರ್ಯಕರ್ತೆ ಎಂದು ಬಣ್ಣಿಸಿದರು.

ರಾಜಸ್ಥಾನ ವಿಧಾನಸಭಾ ಚುನಾವಣೆಯ ರಾಜಕೀಯ ಕದನದಲ್ಲಿ ಕಾಂಗ್ರೆಸ್ ಅನ್ನು ಸೋಲಿಸುವ ಮೂಲಕ ಬಿಜೆಪಿ 115 ಸ್ಥಾನಗಳನ್ನು ಗೆದ್ದಿದೆ. ಆದರೆ ಕಾಂಗ್ರೆಸ್‌ಗೆ 69 ಸ್ಥಾನಗಳು ಮಾತ್ರ ಸಿಗಲಿವೆ. ಇದಲ್ಲದೇ 15 ಸ್ಥಾನಗಳು ಇತರರ ಪಾಲಾಗಿವೆ. ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಭಜನ್‌ಲಾಲ್ ಶರ್ಮಾ ಇಂದು ಸಂಜೆ ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿಯಾಗಿ, ಸರ್ಕಾರ ರಚನೆಯ ಹಕ್ಕು ಪ್ರತಿಪಾದಿಸಿದರು.

ಆದಿವಾಸಿಯ ಛಿದ್ರಗೊಂಡ ದೇಹ ಪತ್ತೆ

ಈ ವೇಳೆ ಅಲ್ಲಿ ಕತ್ತಿ, ಹಗ್ಗ ಹಾಗೂ ರಕ್ತದ ಕಲೆಗಳ ಬಟ್ಟೆ ಪತ್ತೆಯಾಗಿವೆ. ಇದರಿಂದ ಭಯಗೊಂಡ ಸೊತ್ತಮಾದಯ್ಯ ತಕ್ಷಣ ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದಾರೆ.

ನಂತರ ಸ್ಥಳಕ್ಕೆ ತೆರಳಿದ ಎಸ್‌ಟಿಪಿಎಫ್ ಸಿಬ್ಬಂದಿ, ನಂಜೇಗೌಡನಕಟ್ಟೆ ಬಳಿ ಹುಡುಕಾಟ ನಡೆಸಿದಾಗ ಛಿದ್ರಗೊಂಡಿರುವ ಬಸವಯ್ಯನ ದೇಹ ಪತ್ತೆಯಾಗಿದೆ. ಈತನ ಹೊಟ್ಟೆಯ ಭಾಗವನ್ನು ಯಾವುದೋ ಪ್ರಾಣಿ ಸಂಪೂರ್ಣ ತಿಂದುಹಾಕಲಾಗಿದೆ. ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಹುಲಿ ಯೋಜನೆ ಕ್ಷೇತ್ರ ನಿರ್ದೇಶಕ ಡಾ.ರಮೇಶ್‌ಕುಮಾರ್, ಎಸಿಎಫ್ ನವೀನ್, ಆರ್‌ಎಫ್‌ಓ ದೀಪಾ, ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಸಬ್‌ಇನ್ಸ್‌ಪೆಕ್ಟರ್ ಸಾಹೇಬಗೌಡ, ಶಿವಶಂಕರಪ್ಪ, ಸಿಬ್ಬಂದಿ ರಂಗಸ್ವಾಮಿ, ನಾಗರಾಜು ಸಿಂಗಂ ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು. ಸ್ಥಳದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಶವವನ್ನು ನೀಡಲಾಯಿತು. ಬಸವಯ್ಯಗೆ ಪತ್ನಿ ಜಯಮ್ಮ, ಪುತ್ರ ಕೆಂಪ ಹಾಗೂ ಪುತ್ರಿ ಕುಳ್ಳಮ್ಮ ಇದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ವರ್ಷ ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಹೆಡಿಯಾಲ ಅರಣ್ಯ ಉಪವಿಭಾಗದಲ್ಲಿ ಹುಲಿ ದಾಳಿಗೆ ಇಬ್ಬರು ಹಾಗೂ ಆನೆ ದಾಳಿಗೆ ಮೂವರು ಬಲಿಯಾಗಿದ್ದು, ಈಗ ಆದಿವಾಸಿಯೊಬ್ಬರು ವನ್ಯಜೀವಿಗೆ ಬಲಿಯಾಗಿರುವುದು ಈ ಭಾಗದ ರೈತರಲ್ಲಿ ಮತ್ತಷ್ಟು ಭೀತಿ ಮೂಡಿಸಿದೆ. ಬಸವಯ್ಯ ಹುಲಿ ಅಥವಾ ಚಿರತೆಗೆ ಬಲಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಈತನ ಶವ ಪತ್ತೆಯಾದ ಸ್ಥಳದಲ್ಲಿ ವನ್ಯಜೀವಿಗಳ ಕೂದಲುಗಳನ್ನು ಸಂಗ್ರಹಿಸಲಾಗಿದೆ. ಇದು ಯಾವ ಪ್ರಾಣಿಯ ಕೂದಲು ಎಂದು ತಿಳಿಯಲು ಪ್ರಾಯೋಗಾಲಯಕ್ಕೆ ಕಳುಹಿಸಲಾಗಿದೆ. ಜೊತೆಗೆ ಶವ ಪತ್ತೆಯಾದ ಜಾಗವನ್ನು ಪರೀಶಿಲಿಸಿ, ತನಿಖೆ ನಡೆಸಲಾಗುತ್ತಿದೆ. ಈ ಎಲ್ಲಾ ವರದಿ ಬಂದ ನಂತರ ಯಾವ ಪ್ರಾಣಿಗೆ ಬಲಿಯಾಗಿದ್ದಾರೆ ಎಂದು ಪತ್ತೆಯಾಗಲಿದೆ ಎಂದು ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಹುಲಿ ಯೋಜನೆ ಕ್ಷೇತ್ರ ನಿರ್ದೇಶಕ ಡಾ.ರಮೇಶ್‌ಕುಮಾರ್ ತಿಳಿಸಿದ್ದಾರೆ.

ಈತ ಕಿರು ಅರಣ್ಯ ಉತ್ಪನ್ನಗಳನ್ನು ಅರಸಿ ಅಕ್ರಮವಾಗಿ ಅರಣ್ಯ ಪ್ರದೇಶಿಸಿದ್ದು, ಇದರಿಂದ ಕಾಡುಪ್ರಾಣಿ ದಾಳಿಯಿಂದ ಮೃತಪಟ್ಟಿದ್ದಾರೆ ಎಂದು ಪರಿಗಣಿಸಿ, ಪರಿಹಾರ ನೀಡಲು ಬರುವುದಿಲ್ಲ. ಮನವೀಯತೆ ದೃಷ್ಟಿಯಿಂದ ಸರ್ಕಾರದ ಮಟ್ಟದಲ್ಲಿ ಪರಿಹಾರ ನೀಡಬಹುದೇ ಎಂದು ಚರ್ಚಿಸಲಾಗುವುದು ಎಂದು ತಿಳಿಸಿದರು.

40 ಸಾವಿರ ಸೀಟು ಭರ್ತಿಗೆ ಫೆ.18ಕ್ಕೆ ಪರೀಕ್ಷೆ

ಅಡಿಯಲ್ಲಿ ದೇವದಾಸಿಯರು ಮತ್ತು ಎಚ್‌ಐವಿ ಪೀಡಿತರ ಮಕ್ಕಳು, ಅನಾಥ ಮಕ್ಕಳು, ಏಕ ಪೋಷಕರು, ವಿಧವೆಯರು, ಬಾಲಕಾರ್ಮಿಕರು, ಯೋಜನಾ ನಿರಾಶ್ರಿತರು, ಚಿಂದಿ ಆಯುವವರು, ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಮಕ್ಕಳು ಮತ್ತು ಕೋವಿಡ್ ಸೋಂಕಿನಲ್ಲಿ ತಂದೆ–ತಾಯಿ ಇಬ್ಬರನ್ನೂ ಕಳೆದುಕೊಂಡಿರುವ ಮಕ್ಕಳು ಬರುತ್ತಾರೆ ಎಂದು ಸಂಘವು ಮಾಹಿತಿ ನೀಡಿದೆ.

ನೂರಾರು ಜನರ ಬಲಿ ಪಡೆದ ನಂತರ ತಿ.ನರಸೀಪುರ ರಸ್ತೆಯಲ್ಲಿ ಸುರಕ್ಷತಾ ಕ್ರಮ!

- ಅಪಘಾತಕ್ಕೆ ತಡೆ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಳ್ಳಿವರೆಗೆ ಚತುಷ್ಪಥ ರಸ್ತೆ ನಿರ್ಮಾಣ
- 2.6 ಕಿಲೋ ಮೀಟರ್ ಗೆ 9 ಕೋಟಿ ವೆಚ್ಚ
- 5 ಅಡಿ ಎತ್ತರದ ಕಾಂಕ್ರಿಟ್ ವಿಭಜಕ
- ಇಳಿಜಾರು ತಗ್ಗಿಸಿ, ತಿರುವು ಅಗಲೀಕರಣ
- ಕೊನೆಗೂ ಬ್ಲ್ಯಾಕ್ ಸ್ಪಾಟ್‌ನಿಂದ ಮುಕ್ತಿ







ಬಾಪುಲಿಂಗರಾಜ್ ಅರಸ್

ಮೈಸೂರು, ಡಿ.12– ಅವೈಜ್ಞಾನಿಕ ರಸ್ತೆ ನಿರ್ಮಾಣದಿಂದ ಸರಣಿ ಅಪಘಾತ ಸಂಭವಿಸಿ ನೂರಾರು ಜನರ ಸಾವಿಗೆ ಕಾರಣವಾಗಿದ್ದ ಮೈಸೂರಿನ ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಹಳ್ಳಿವರೆಗಿನ ಮಾರ್ಗವನ್ನು ಈಗ ಅಭಿವೃದ್ಧಿಪಡಿಸಿ, ಮೇಲ್ದರ್ಜೆಗೇರಿಸಲಾಗಿದೆ. 9 ಕೋಟಿ ರೂಪಾಯಿ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಾಣ ಮಾಡಿರುವ ಚತುಷ್ಪಥ ರಸ್ತೆಯಲ್ಲಿ ಎತ್ತರದ ವಿಭಜಕ(ಡಿವೈಡರ್) ನಿರ್ಮಿಸಿದ್ದು, ಇದು ಕರ್ನಾಟಕದ ಅತೀ ಎತ್ತರದ ಎರಡನೇ ರಸ್ತೆ ವಿಭಜಕವಾಗಿದೆ.

ಮೈಸೂರಿನ ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಳ್ಳಿವರೆಗಿನ ಎರಡೂವರೆ ಕಿಲೋ ಮೀಟರ್ ರಸ್ತೆ ಬ್ಲ್ಯಾಕ್ ಸ್ಪಾಟ್ ಆಗಿತ್ತು. ದೊಡ್ಡ ತಿರುವಿನಲ್ಲಿ ಕಿರಿದಾದ ರಸ್ತೆ ನಿರ್ಮಾಣ ಮಾಡಿದ್ದ ಕಾರಣ ಅಪಘಾತಕ್ಕೆ ಬಾಯ್ತೆರೆದುಕೊಂಡಿತ್ತು. ಅವೈಜ್ಞಾನಿಕ ರಸ್ತೆ ನಿರ್ಮಾಣದಿಂದ ಪರಸ್ಪರ ಎದುರು ಬರುವ ವಾಹನಗಳು ಸರಿಯಾಗಿ ಕಾಣಿಸುತ್ತಿರಲ್ಲಿಲ್ಲ. ಇಳಿಜಾರು ಕೂಡ ಇರುವುದರಿಂದ ವಾಹನಗಳು ವೇಗವಾಗಿ ಚಲಿಸುತ್ತಿದ್ದ ಕಾರಣ ಸರಣಿ ಅಪಘಾತಗಳು ಸಂಭವಿಸುತ್ತಿತ್ತು.

ರಿಂಗ್ ರೋಡ್ ಜಂಕ್ಷನ್‌ನಿಂದ ಪೊಲೀಸ್ ಲೇಔಟ್‌ವರೆಗಿನ ಮಾರ್ಗದಲ್ಲಿ ಕೂಡ ಸರಣಿ ಅಪಘಾತವಾಗುತ್ತಿತ್ತು. ಅದರಲ್ಲೂ ಡಾ. ರಾಜಶೇಖರ್ ಆಸ್ಪತ್ರೆಯಿಂದ ರಿಂಗ್ ರೋಡ್ ಜಂಕ್ಷನ್ ವರೆಗಿನ ತಿರುವಿನಲ್ಲಿ ಇಳಿಜಾರು ಇರುವ ಕಾರಣ ವೇಗವಾಗಿ ಬರುವ ವಾಹನಗಳು ಅಪಘಾತಕ್ಕೀಡಾಗುತ್ತಿದ್ದವು.

ಮೈಸೂರು ಹಾಗೂ ತಿ.ನರಸೀಪುರ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೆಲವು ವರ್ಷದ ಹಿಂದೆ ಅಭಿವೃದ್ಧಿಪಡಿಸಿತ್ತು. ಆ ಸಂದರ್ಭದಲ್ಲೂ ಎರಡು ಕಡೆ ತಿರುವು ಸರಿಪಡಿಸುವ ಗೋಜಿಗೆ ಹೋಗಲಿಲ್ಲ. ಕಿರಿದಾದ ರಸ್ತೆಯನ್ನು ಸ್ವಲ್ಪ ಅಗಲೀಕರಣಗೊಳಿಸಿ ಮತ್ತೆ ಅವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿತು. ಇದರಿಂದ ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಳ್ಳಿವರೆಗಿನ ಮಾರ್ಗದಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿತ್ತು.

ರೋಡ್ ಹಂಪ್ಸ್ ನಿರ್ಮಾಣ, ಅಪಘಾತ ವಲಯ ಹಾಗೂ ವೇಗ ನಿಯಂತ್ರಿತ ಎಚ್ಚರಿಕೆ ಫಲಕಗಳನ್ನು ಅಳವಡಿಸಿದ್ದರೂ ಅಪಘಾತಗಳಿಗೆ ಬ್ರೇಕ್ ಹಾಕಲು ಸಾಧ್ಯವೇ ಆಗಲಿಲ್ಲ. ಎರಡೂವರೆ ಕಿಲೋ ಮೀಟರ್ ಅಂತರದಲ್ಲಿ ಹಲವು ಕಡೆ ಜಿಗ್ ಜಾಗ್ ಬ್ಯಾರಿಕೇಡ್ ಅಳವಡಿಸಿದ್ದರೂ ಅಪಘಾತಗಳು ನಿಯಂತ್ರಣಕ್ಕೆ ಬರಲಿಲ್ಲ. ವೇಗವಾಗಿ ಬರುವ ಬಹಳಷ್ಟು ವಾಹನಗಳು ಬ್ಯಾರಿಕೇಡ್ ಗೆ ಡಿಕ್ಕಿ ಹೊಡೆಯುತ್ತಿದ್ದವು.

ಪೊಲೀಸ್ ಅಧಿಕಾರಿಗಳು ಸೇರಿದಂತೆ ನೂರಾರು ಜನರು ಈ ಮಾರ್ಗದಲ್ಲಿ ಅಪಘಾತದಿಂದ ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಇದನ್ನು ಬ್ಲ್ಯಾಕ್ ಸ್ಪಾಟ್ ಎಂದು ಗುರುತಿಸಿತು.

ರಸ್ತೆ ಅಪಘಾತದಿಂದ ಮೃತಪಟ್ಟವರ ಅಂಕಿ ಅಂಶ

ತಿ.ನರಸೀಪುರ ರಸ್ತೆ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಳ್ಳಿವರೆಗೆ ಸಿದ್ಧಾರ್ಥನಗರ ಸಂಚಾರಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡುತ್ತದೆ.

2020 ರಿಂದ 2023ರ ಈ ದಿನದವರೆಗೆ ಈ ಮಾರ್ಗದಲ್ಲಿ ಸಂಭವಿಸಿರುವ ಅಪಘಾತದಲ್ಲಿ 50 ಜನರು ಮೃತಪಟ್ಟಿದ್ದರೆ, 40 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಇನ್ನು 2020ರ ಹಿಂದಿನ ಅಂಕಿ ಅಂಶಗಳು ಲಭ್ಯವಾಗಿಲ್ಲ. ಅದನ್ನೆಲ್ಲಾ ಲೆಕ್ಕ ಹಾಕಿದರೆ ಈ ಮಾರ್ಗದಲ್ಲಿ ನೂರಾರು ಜನರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಅಪಘಾತ ಮುಕ್ತ ವಲಯ ಮಾಡುವ ನಿಟ್ಟಿನ'ಲ್ಲಿ ವೈಜ್ಞಾನಿಕವಾಗಿ ರಸ್ತೆ ನಿರ್ಮಿಸುವಂತೆ ಪೊಲೀಸ್ ಇಲಾಖೆ ಜಿಲ್ಲಾಡಳಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿತ್ತು.

ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎನ್‌ಹೆಚ್ 766 ಅನ್ನು ಮೇಲ್ದರ್ಜೆಗೇರಿಸಿದೆ. ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಳ್ಳಿವರೆಗೆ 2.6 ಕಿಲೋ ಮೀಟರ್ ರಸ್ತೆಯನ್ನು ಅಗಲೀಕರಣಗೊಳಿಸಿದೆ. 9 ಕೋಟಿ ರೂಪಾಯಿ ವೆಚ್ಚದಲ್ಲಿ ಈ ರಸ್ತೆ ನಿರ್ಮಿಸಲಾಗಿದೆ. ಅಂದರೆ ಒಂದು ಕಿಲೋ ಮೀಟರ್ ಗೆ 3.46 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ.

ಚತುಷ್ಪಥ ರಸ್ತೆಯ ಅಗಲ 60 ಅಡಿಗಳಾಗಿದ್ದು, ಮಧ್ಯೆ ಕಾಂಕ್ರಿಟ್ ವಿಭಜಕ ನಿರ್ಮಿಸಿ ಡಬಲ್ ರೋಡ್ ನಿರ್ಮಾಣ ಮಾಡಲಾಗಿದೆ 2.6 ಕಿಲೋ ಮೀಟರ್ ವ್ಯಾಪ್ತಿಯ ಈ ಮಾರ್ಗದಲ್ಲಿದ್ದ ದೊಡ್ಡ ತಿರುವು ಕಡಿತ ಮಾಡಿ, ಇಳಿಜಾರು ತಗ್ಗಿಸಲಾಗಿದೆ.

ರಸ್ತೆ ವಿಭಜಕವನ್ನು 5 ಅಡಿ ಎತ್ತರ ನಿರ್ಮಾಣ ಮಾಡಲಾಗಿದೆ. ಎತ್ತರದ ವಿಭಜಕ ನಿರ್ಮಿಸಿರುವ ಕಾರಣ ಜನರು ಹಾಗೂ ಪ್ರಾಣಿಗಳು ರಸ್ತೆ ದಾಟಲು ಸಾಧ್ಯವಾಗುವುದಿಲ್ಲ. ಇದರಿಂದ ಅಪಘಾತಗಳು ನಿಯಂತ್ರಣಕ್ಕೆ ಬರುತ್ತವೆ.

ಬೆಂಗಳೂರಿನ ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಜನರು ರಸ್ತೆ ದಾಟುವಾಗ ಸಂಭವಿಸುತ್ತಿದ್ದ ಅಪಘಾತ ತಪ್ಪಿಸಲು ಎತ್ತರದ ವಿಭಜಕ ನಿರ್ಮಾಣ ಮಾಡಲಾಗಿತ್ತು ಅದು ಬಿಟ್ಟರೆ ಕರ್ನಾಟಕದಲ್ಲಿ ಅತೀ ಹೆಚ್ಚು ಎತ್ತರದ ವಿಭಜಕ ಇದಾಗಿದೆ.

ಆದರೆ ಬಡಾವಣೆಗಳ ಪ್ರವೇಶ ದ್ವಾರವಿರುವ ಮೂರು ಸ್ಥಳಗಳಲ್ಲಿ ಜನರು ಹಾಗೂ ವಾಹನಗಳು ರಸ್ತೆ ದಾಟಲು ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ಮಾಡಲಾಗಿದೆ.

ಈ ವರ್ಷದ ಏಪ್ರಿಲ್ ತಿಂಗಳಿನಲ್ಲಿ ರಸ್ತೆ ಅಗಲೀಕರಣ ನಿರ್ಮಾಣ ಕಾರ್ಯ ಆರಂಭವಾಗಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಧರಿಸಿದಂತೆ ಈ ತಿಂಗಳಾಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ.

ಮೈಸೂರಿನಲ್ಲಿ ಇದೇ ರೀತಿಯ 14 ಬ್ಲ್ಯಾಕ್ ಸ್ಪಾಟ್‌ಗಳಿದ್ದು, ಅಲ್ಲಿಯೂ ವೈಜ್ಞಾನಿಕವಾಗಿ ಕ್ರಮ ಕೈಗೊಳ್ಳಬೇಕಿದೆ. ಇಲ್ಲದಿದ್ದರೆ ಅಪಘಾತಕ್ಕೆ ಅಮಾಯಕರು ಬಲಿಯಾಗಬೇಕಾಗುತ್ತದೆ.

ಮೊದಲ ಟಿ20: ಭಾರತದ ವಿರುದ್ಧ ದ.ಆಫ್ರಿಕಾಕ್ಕೆ ಜಯ



ಗೆಬೆರ್ಹಾ, ಡಿ.12– ಮಳೆಬಾಧಿತ ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ದಕ್ಷಿಣ ಆಫ್ರಿಕಾ ಭಾರತದ ವಿರುದ್ಧ ಡಕ್‌ವರ್ತ್ ನಿಯಮದ ಅನ್ವಯ 5 ವಿಕೆಟ್‌ಗಳ ಜಯ ಸಾಧಿಸಿದೆ.

ಇಲ್ಲಿನ ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಶುಭ್‌ಮನ್ ಗಿಲ್ ಹಾಗೂ ಯಶಸ್ವಿ ಜೈಸ್ವಾಲ್ ತಂಡದ ಮೊತ್ತ 6 ರನ್ ಆಗುವಷ್ಟರಲ್ಲೇ ಶೂನ್ಯಕ್ಕೆ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ತಿಲಕ್ ವರ್ಮಾ ಹಾಗೂ ನಾಯಕ ಸೂರ್ಯ ಕುಮಾರ್ ಯಾದವ್ 49 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ತಿಲಕ್ ವರ್ಮಾ 20 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ರಿಂಕು ಸಿಂಗ್ ಬಿರುಸಿನ ಬ್ಯಾಟಿಂಗ್ ನಡೆಸಿ ಅರ್ಧಶತಕ ಸಿಡಿಸಿದರು. ಮತ್ತೊಂದೆಡೆ ಅಬ್ಬರಿಸಿದ ಸೂರ್ಯಕುಮಾರ್ ಯಾದವ್ 36 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 56 ರನ್ ಗಳಿಸಿ ಔಟಾದರು. ಮತ್ತೊಂದೆಡೆ ರವಿಂದ್ರ ಜಡೇಜಾ 19ರನ್ ಗಳಿಸಿದರೇ, ರಿಂಕು ಸಿಂಗ್ 39 ಎಸೆತಗಳಲ್ಲಿ 2 ಸಿಕ್ಸರ್, 9 ಬೌಂಡರಿ ಒಳಗೊಂಡ 68 ರನ್ ಗಳಿಸಿ ಅಜೇಯರಾಗಿ ಉಳಿದರು. ತಂಡದ ಮೊತ್ತ 19.3 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿದ್ದ ವೇಳೆ ಮಳೆ ಬಂದ ಕಾರಣ ಪಂದ್ಯವನ್ನು ಕೆಲಕಾಲ ಸ್ಥಗಿತಗೊಳಿಸಲಾಯಿತು. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೊಯೆಟ್ಜಿ 3, ಮಾರ್ಕೊ ಜಾನ್ಸೆನ್, ಶಂಸಿ, ವಿಲಿಯಮ್ಸ್ ಹಾಗೂ ಐಡೆನ್ ಮಾರ್ಕ್ರಾಮ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಮಳೆ ಹಿನ್ನೆಲೆಯಲ್ಲಿ ಡಕ್‌ವರ್ತ್ ನಿಯಮದ ಅನ್ವಯ ದಕ್ಷಿಣ ಆಫ್ರಿಕಾಕ್ಕೆ 15 ಓವರ್‌ಗಳಲ್ಲಿ 152 ರನ್‌ಗಳ ಗೆಲುವಿನ ಗುರಿ ನೀಡಲಾಯಿತು. ಈ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 13.5 ಓವರ್‌ಗಳಲ್ಲಿ ಇನ್ನೂ 7 ಎಸೆತ ಬಾಕಿ ಉಳಿದಿರುವಂತೆಯೇ 5 ವಿಕೆಟ್ ನಷ್ಟಕ್ಕೆ 154 ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ರೀಜಾ ಹೆಂಡ್ರಿಕ್ಸ್ 49, ಮ್ಯಾಥ್ಯೂ ಬ್ರೀಟ್ಜ್ಕೆ 16, ಐಡೆನ್ ಮಾರ್ಕ್ರಾಮ್ 30, ಡೇವಿಡ್ ಮಿಲ್ಲರ್ 17, ಟ್ರಿಸ್ಟಾನ್ ಸ್ಟಬ್ಸ್ 14, ಆಂಡಿಲೆ ಫೆಹ್ಲುಕ್ವಾಯೊ 10ರನ್ ಗಳಿಸಿದರು. ಭಾರತದ ಪರ ಮುಖೇಶ್ ಕುಮಾರ್ 2, ಕುಲದೀಪ್ ಯಾದವ್, ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ದ.ಆಫ್ರಿಕಾ ಪರ ಶಂಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಭತ್ತ, ರಾಗಿ ಕಟಾವು ಯಂತ್ರಗಳಿಗೆ ಹಿಂದಿನ ವರ್ಷದ ದರವೇ ಮುಂದುವರಿಕೆ



ಮೈಸೂರು, ಡಿ.12(ಎಸ್‌ಬಿಡಿ)– ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಭತ್ತ ಹಾಗೂ ರಾಗಿ ಕಟಾವು ಯಂತ್ರಗಳಿಗೆ ಹಿಂದಿನ ವರ್ಷದ ದರವನ್ನೇ ಮುಂದುವರೆಸಲಾಗಿದೆ.

ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ಅವರು, ಕೃಷಿ, ಸಾರಿಗೆ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ರೈತ ಮುಖಂಡರೊಂದಿಗೆ ಸಭೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿದ ನಂತರ ಈ ತೀರ್ಮಾನ ಕೈಗೊಳ್ಳಲಾಗಿದೆ.

ಅಂದರೆ ಈ ಬಾರಿಯೂ ಭತ್ತ ಕಟಾವು ಮಾಡಲು ಪ್ರತಿ ಗಂಟೆಗೆ ಚೈನ್ ಮಾದರಿ ಯಂತ್ರಕ್ಕೆ 2,500 ರೂ., ಟೈರ್ ಗ್ರೀಪ್ ಮಾದರಿ ಯಂತ್ರಕ್ಕೆ 2 ಸಾವಿರ, ಟೈರ್ ಸಾಮಾನ್ಯ ಮಾದರಿ ಯಂತ್ರಕ್ಕೆ 1,800 ರೂ. ಹಾಗೂ ರಾಗಿ ಕಟಾವು ಯಂತ್ರಕ್ಕೆ 2,900 ದರ ನಿಗದಿಪಡಿಸಲಾಗಿದೆ.

ಸಭೆಯಲ್ಲಿ ಜಿಲ್ಲಾಧಿಕಾರಿಗಳು ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 2023–24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 76,950 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆಯಿದ್ದು, ಈಗಾಗಲೇ ಹಲವಡೆ ಕಟಾವು ಪ್ರಾರಂಭವಾಗಿದೆ. ಕಳೆದ ವರ್ಷ ಬೇಡಿಕೆ ಹೆಚ್ಚಾಗಿದ್ದರಿಂದ ಕಟಾವು ಯಂತ್ರದ ಮಾಲೀಕರು ಹೆಚ್ಚಿನ ಹಣ ಪಡೆದಿದ್ದರೆಂಬ ದೂರುಗಳು ಬಂದಿದ್ದವು. ಆದ್ದರಿಂದ ತಮಿಳುನಾಡಿನಿಂದ ಕಟಾವು ಯಂತ್ರಗಳನ್ನು ತರುವವರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ ಎಂದು ಆರ್‌ಟಿಓ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೂರು ನೀಡಿ: ರೈತರು ಸಂಕಷ್ಟದಲ್ಲಿರುವುದರಿಂದ ಕಟಾವು ಯಂತ್ರದ ಬಾಡಿಗೆ ಮೊತ್ತವನ್ನು ಹೆಚ್ಚಿಗೆ ಪಡೆಯಕೂಡದು. ಒಂದು ವೇಳೆ ನಿಗದಿಗಿಂತ ಹೆಚ್ಚು ಹಣ ಪಡೆದರೆ ರೈತರು ಕಟಾವು ಯಂತ್ರದ ಮಾಲೀಕರ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ 2005ರ ಪ್ರಕಾರ ಸಂಬಂಧಪಟ್ಟ ತಹಶೀಲ್ದಾರ್, ಪೊಲೀಸ್ ಅಥವಾ ತಾಲೂಕು ಕೃಷಿ ನಿರ್ದೇಶಕರಿಗೆ ದೂರು ನೀಡಬೇಕೆಂದು ತಿಳಿಸಿದರು.

ಹಿರಿಯ ನಾಗರಿಕರು ತಮ್ಮ ಜ್ಞಾನ, ಅನುಭವದ ಬಗ್ಗೆ ಪುಸ್ತಕ ಬರೆಯಬೇಕು

ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಸಲಹೆ



ಮೈಸೂರು, ಡಿ.12(ಬಿಎಲ್‌ಯು)– ಹಿರಿಯ ನಾಗರಿಕರು ತಮ್ಮ ಜೀವನದ ಅನುಭವ ಹಾಗೂ ಜ್ಞಾನವನ್ನು ಕುಟುಂಬ ಹಾಗೂ ಸಮಾಜಕ್ಕೆ ಧಾರೆ ಎರೆಯಲು ಪುಸ್ತಕಗಳನ್ನು ಬರೆಯಬೇಕು ಎಂದು ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಯಲಕ್ಷ್ಮಿಪುರಂನ ಸರಸ್ವತಿ ಸಮುದಾಯ ಭವನದಲ್ಲಿ ಇಂದು ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಹಾಗೂ ಹಿರಿಯ ನಾಗರಿಕ ಮಂಡಳಿಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿರಿಯ ನಾಗರಿಕರ ಮೂಲಕ ಜ್ಞಾನ ಯಜ್ಞ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆ ಆಗಬೇಕು ಎಂದು ಹೇಳಿದರು.

ಪ್ರತಿಯೊಬ್ಬ ಹಿರಿಯ ನಾಗರಿಕ ತನ್ನಲ್ಲಿರುವ ಅಪಾರ ಜ್ಞಾನ ಮತ್ತು ಅನುಭವವನ್ನು ಕ್ರೂಢಿಕರಿಸಬೇಕು. ತಾವು ನಡೆದು ಬಂದ ದಾರಿಯನ್ನು ಸತ್ಯ ಶೋಧನೆಗೊಳಪಡಿಸಬೇಕು. ತರುವಾಯ ಅದನ್ನು ದಾಖಲಿಸಲು ಪುಸ್ತಕದ ರೂಪ ನೀಡಬೇಕು. ಪ್ರತಿಯೊಬ್ಬ ಹಿರಿಯ ನಾಗರಿಕನ ಮಕ್ಕಳು, ಮೊಮ್ಮಕ್ಕಳು ಹಾಗೂ ಸಮಾಜಕ್ಕೆ ಇದು ಮಾರ್ಗದರ್ಶನವಾಗುತ್ತದೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ಜ್ಞಾನ ಹೊಂದಲು ವಯಸ್ಸಿನ ಅಂತರವಿಲ್ಲ. ಇದರಿಂದ ಹಿರಿಯ ನಾಗರಿಕರು ಜ್ಞಾನ ಯಜ್ಞ ಮಾಡಿ ಪುಸ್ತಕ ಬರೆಯಬೇಕು ಎಂದು ಸಲಹೆ ನೀಡಿದರು.

ಭಾರತದ ಸನಾತನ ಸಂಸ್ಕೃತಿ ವಿಶ್ವಕ್ಕೆ ಆದರ್ಶವಾದ ಮಹಾನ್ ಸಂಸ್ಕೃತಿಯಾಗಿದೆ. ಇದರಲ್ಲಿ ಜ್ಞಾನ ರಾಶಿ ಇದೆ. ಸತ್ಯ ಶೋಧನೆಯ ಅನುಸಂಧಾನಕ್ಕೆ ಅವಶ್ಯವಿರುವ ವಿವೇಚನೆ ಇದೆ ಎಂದು ಹೇಳಿದರು.

ಭಾರತೀಯ ಸಂಸ್ಕೃತಿಯ ಪ್ರಾಣ, ಸಾರ, ಬುನಾದಿ ಆಧ್ಯಾತ್ಮವಾಗಿದೆ. ಭಾರತದ ಆಧ್ಯಾತ್ಮಿಕ ಜೀವನದ ಪಯಣ ವರ್ಣನೆಗೂ ಮೀರಿದೆ ಎಂದು ತಿಳಿಸಿದರು.

ಧರ್ಮವೆಂದರೆ ಸಾಂತ್ವನ, ನೆಮ್ಮದಿ, ಜ್ಞಾನ. ಆದರೆ ಇಂದು ಎಲ್ಲೆ ಹೋದರೂ ಧರ್ಮದ ಬಗ್ಗೆ ಗೊಂದಲವಿದೆ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು.

ಹಿರಿಯ ನಾಗರಿಕರಾದ ಗೋವಿಂದೇಗೌಡ, ಎಸ್.ವಿ.ವೆಂಕಟೇಶಯ್ಯ, ಡಾ.ಎಂ.ಟಿ.ನಾಗರಾಜ್, ಸುಧಾ ಹರೀಶ್, ಶಂಕರ ನಾರಾಯಣ ಅವರಿಗೆ ಈ ವೇಳೆ ಸನ್ಮಾನಿಸಲಾಯಿತು.

ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಅಧ್ಯಕ್ಷ ಎಸ್.ವಿ.ಗೌಡಪ್ಪ, ಟ್ರಸ್ಟಿ ಡಾ.ಎನ್.ಕೆ.ರಾಮಚಂದ್ರೇಗೌಡ, ಕೃಷ್ಣ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಭಾರತದ ಪ್ರಶಸ್ತಿ ವಿಜೇತ ಎಕ್ಸಿಬಿಷನ್ ಕಂಪನಿ ಫ್ಯಾಷನಿಸ್ಟಾದಿಂದ ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಫ್ಯಾಷನಿಸ್ಟಾ ಪ್ರದರ್ಶನದ 4ನೇ ಆವೃತ್ತಿಯ ಫ್ಯಾಷನವ್ಯಾವಸ್ತುಪ್ರದರ್ಶನ ಆರಂಭವಾಗಿದೆ. ಈ ವೇಳೆ ದಿಯಾ ಫೌಂಡೇಷನ್ ಸ್ಥಾಪಕ ಟ್ರಸ್ಟಿ ನಮ್ರತಾ ಶೆಣೈ, ಹೋಂ ಮೇಕರ್ ಜುನೂ ಅಹ್ಲುವಾಲಿಯಾ, ಸುಕ್ರುತಿ ಇನ್ಫೋಟೆಕ್ ನಿರ್ದೇಶಕರಾದ ಸುಮಾ ಕೃಷ್ಣ, ಕಲಿನರಿ ಎಂಟ್ರಪ್ರಿನರ್ ರತಿ ವಿಕ್ರಂ, ಎ. ಶಂಕರ ಶೆಟ್ಟಿ ಅಂಡ್ ಸನ್ಸ್ ನಿರ್ದೇಶಕರಾದ ಪಲ್ಲವಿ ಆದರ್ಶ್ ಅವರನ್ನು ಕಾಣಬಹುದು. ಚಲನಚಿತ್ರ ನಟ ಪವನ್ ಶಂಕರ್ ಫ್ಯಾಷನಿಸ್ಟಾದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಈ ಪ್ರದರ್ಶನವು ಬೆಳಗ್ಗೆ 11 ರಿಂದ ರಾತ್ರಿ 9 ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ ಮೈನ್ ಡೈಮಂಡ್ ಫೆಸ್ಟಿವಲ್



ಮೈಸೂರು, ಡಿ. 12– ಮಲಬಾರ್ ಗೋಲ್ಡ್ & ಡೈಮಂಡ್ಸ್ 'ಮೈನ್ ಡೈಮಂಡ್ ಫೆಸ್ಟಿವಲ್', ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟವನ್ನು ಮೈಸೂರು ಶೋರೂಮ್‌ನಲ್ಲಿ ಮಲಬಾರ್ ಚಿನ್ನದ ವಿಶೇಷ ಗ್ರಾಹಕರಾದ ಅನುಷಾ, ಅಪೂರ್ವ ಶಿವಣ್ಣ ಮತ್ತು ಅವಿಷ್ಕಾ ಸುರೇಶ್ ಅನಾವರಣಗೊಳಿಸಿದರು.

ಮೈನ್ ಡೈಮಂಡ್, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಅಡಿಯಲ್ಲಿ ಪ್ರದರ್ಶಿಸಲಾದ ಚಿನ್ನ, ಬಿಳಿ ಮತ್ತು ಪ್ಲಾಟಿನಂನಲ್ಲಿ ರಚಿಸಲಾದ ವ್ಯಾಪಕ ಶ್ರೇಣಿಯ ಆಭರಣಗಳೊಂದಿಗೆ ಗ್ರಾಹಕರನ್ನು ಆಕರ್ಷಿಸುವುದರ ಜೊತೆಗೆ ಈ ಹಬ್ಬದ ಅವಧಿಯಲ್ಲಿ ವಜ್ರದ ಮೌಲ್ಯದ ಮೇಲೆ 25% ವರೆಗೆ ರಿಯಾಯಿತಿಯನ್ನು ನೀಡುತ್ತಿದೆ. ಮೈನ್ ಡೈಮಂಡ್ ಫೆಸ್ಟಿವಲ್‌ನಲ್ಲಿ ಗ್ರಾಹಕರಿಗೆ ವಜ್ರದ ಆಭರಣಗಳನ್ನು ಅತ್ಯಂತ ಕೈಗೆಟಕುವ ಬೆಲೆಯಲ್ಲಿ ಖರೀದಿಸುವ ಅಪರೂಪದ ಅವಕಾಶವಿದೆ.

ಗುಣಮಟ್ಟದ ಆಭರಣಗಳ ಅತ್ಯುನ್ನತ ಮಟ್ಟಗಳು ಮತ್ತು ಅಂತರರಾಷ್ಟ್ರೀಯ ಗುಣಮಟ್ಟವನ್ನು ನೀಡಲು, ಮೈನ್ ವಜ್ರದ ಆಭರಣಗಳು 28–ಪಾಯಿಂಟ್ ಕಟ್ಟುನಿಟ್ಟಾದ ಆಂತರಿಕ ಗುಣಮಟ್ಟದ ಪರಿಶೀಲನೆಯ ಮೂಲಕ ಹಾದುಹೋಗುತ್ತವೆ. ಅಲ್ಲದೆ ಈ ವಜ್ರಗಳು ಅಂತಾರಾಷ್ಟ್ರೀಯ ಲ್ಯಾಬ್‌ಗಳಾದ GIA ಮತ್ತು IGI ನಿಂದ ಪ್ರಮಾಣೀಕರಿಸಲ್ಪಟ್ಟಿವೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಸಮಗ್ರ ಶ್ರೇಣಿಯ ಆಭರಣಗಳನ್ನು ಹೊರ ತಂದಿದೆ, ಎಲ್ಲಾ ವಯೋಮಾನದವರ ಅಭಿರುಚಿಯನ್ನು ಪೂರೈಸುತ್ತದೆ, ಇದು ದೇಶದ ಆದ್ಯತೆಯ ಆಭರಣ ಬ್ರ್ಯಾಂಡ್‌ಗಳಲ್ಲಿ ಒಂದಾಗಿದೆ. ಕಂಪನಿಯು ಇತ್ತೀಚೆಗೆ 'ಒನ್ ಇಂಡಿಯಾ ಒನ್ ಗೋಲ್ಡ್ ರೇಟ್' ಯೋಜನೆಯನ್ನು ಪ್ರಾರಂಭಿಸಿದೆ, ಇದರ ಅಡಿಯಲ್ಲಿ ಚಿನ್ನದ ಆಭರಣಗಳನ್ನು ದೇಶಾದ್ಯಂತ ಏಕರೂಪದ ಬೆಲೆಗೆ ಮಾರಾಟ ಮಾಡಲಾಗುತ್ತದೆ.

ಸುತ್ತ್ಯಾರ್ಹ, ಜನಹಿತಕ್ಕೆ ಸಂದ ಜಯ

ಮೈಸೂರು, ಡಿ. 12– ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿ ರದ್ದುಗೊಳಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಸುಪ್ರಿಂಕೋರ್ಟ್‌ನ



ಪಂಚ ಸದಸ್ಯರ ಸಾಂವಿಧಾನಿಕ ಪೀಠ ಎತ್ತಿ ಹಿಡಿದಿರುವುದು ಸುತ್ತ್ಯಾರ್ಹ ಹಾಗೂ ಜನಹಿತಕ್ಕೆ ಸಂದ ಜಯವಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ ಟಿ ಪ್ರಕಾಶ್ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಭಾರತೀಯ ನ್ಯಾಯದಾನ ವ್ಯವಸ್ಥೆ ಅತ್ಯಂತ ಶ್ರೇಷ್ಠ, ಸುಪ್ರೀಂಕೋರ್ಟ್ ತೀರ್ಪಿನಿಂದ ಪ್ರತಿಯೊಬ್ಬ ಭಾರತೀಯರಿಗೂ ಅತ್ಯಂತ ಸಂತೋಷವಾಗಿದೆ. ಕಣಿವೆ ರಾಜ್ಯ ಕಾಶ್ಮೀರ ಪ್ರಗತಿಯಾಗಲು ಈ ವಿಧಿ ರದ್ದಾಗುವುದು ಅವಶ್ಯಕವಾಗಿತ್ತು, ಹೀಗಾಗಿ ಕೇಂದ್ರ ದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ಈ ವಿಧಿ ರದ್ದುಗೊಳಿಸುವ ಮೂಲಕ ದಿಟ್ಟ ಹೆಜ್ಜೆ ಇರಿಸಿತ್ತು, ಆ ಮೂಲಕ ಕಾಶ್ಮೀರ ಪ್ರಗತಿಗೆ ಹೊಸ ಶಕೆ ಆರಂಭವಾದಂತಾಯಿತು. ಆದರೆ ಕೆಲವರು ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಲೇರಿದ್ದರು, ಈ ಬಗ್ಗೆ ವಾದ–ಪ್ರತಿವಾದ ಆಲಿಸಿದ ಸುಪ್ರೀಂಕೋಟ್ ಪಂಚ ಸದಸ್ಯರ ನ್ಯಾಯಪೀಠವು ಜಮ್ಮು– ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370 ನೇ ವಿಧಿ ರದ್ದುಗೊಳಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದಿದೆ, ಇದು ಸತ್ಯ ಹಾಗೂ ಜನರ ಹಿತರಕ್ಷಣೆಗಾಗಿ ಕೈಗೊಂಡ ಸರ್ಕಾರದ ಕ್ರಮಕ್ಕೆ ಜಯ ದೊರಕಿದಂತಾಗಿದೆ ಎಂದು ಅವರು ಹೇಳಿದ್ದಾರೆ.



ಮೈಸೂರಿನ ಕೆ.ಆರ್.ಮೊಹಲ್ಲಾ ಹುಲ್ಲಿನಬೀದಿಯ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ತೀಕ ಮಾಸದ ಅಮಾವಾಸ್ಯೆ ಅಂಗವಾಗಿ ಮಂಗಳವಾರ ಶ್ರೀ ಮಹದೇಶ್ವರ ಸ್ವಾಮಿಯ 143ನೇ ವರ್ಷದ ಹಾಲರವಿ ಹಾಗೂ ಅಗ್ನಿಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಇಂದು ಹರಿಹರಪುರದಲ್ಲಿ ಪ್ರಾಚೀನ ದೇವಾಲಯಗಳ ಹವ್ಯಾಸಿ ವೀಕ್ಷಣಾ ಬಳಗ ಸುವರ್ಣ ಸಂಭ್ರಮ

ಮೈಸೂರು, ಡಿ. 12– ದೇಶ ಸುತ್ತು ಕೋಶ ಓದು ಎಂಬ ನಮ್ಮ ಹಿರಿಯರ ಮಾತಿನಂತೆ ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿರುವ ನಮ್ಮ ಪ್ರಾಚೀನ ದೇವಾಲಯಗಳು ಕೆಲ, ವಾಸ್ತುಶಿಲ್ಪ, ಮೂರ್ತಿ ಶಿಲ್ಪಿಗಳು, ಮತ್ತು ಪುರಾತನ ಪರಂಪರೆ ಮತ್ತು ದೇವಾಲಯ ರಚನೆಯ ಕಾಲ ಘಟ್ಟದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸುವ ಪ್ರಮುಖ ಆಕರಗಳಾಗಿವೆ.

ಈ ಬಗೆಯ ವಿಚಾರಗಳನ್ನು ಹೊಂದಿರುವ ಪ್ರಾಚೀನ ದೇವಾಲಯಗಳ ಮಹತ್ವವನ್ನು ಅರಿತ ಬೆಂಗಳೂರು ದೂರವಾಣಿ ನೌಕರರ ಪ್ರಾಚೀನ ದೇವಾಲಯಗಳ ವೀಕ್ಷಣಾ ಬಳಗ ಮತ್ತು ಅವರ ಸ್ನೇಹಿತರು ತಮ್ಮ ಕೆಲಸದ ಬಿಡುವಿನ ವೇಳೆಯಲ್ಲಿ ಕನ್ನಡ ನಾಡಿನಾದ್ಯಂತ ಇರುವ ಪ್ರಾಚೀನ ದೇವಾಲಯಗಳ ವೀಕ್ಷಣೆ ಮತ್ತು ಅವುಗಳ ರಕ್ಷಣೆಯ ಬಗ್ಗೆ ಬೆಳಕನ್ನು ಚೆಲ್ಲುವ ಕಾರ್ಯವನ್ನು ಮಾಡುತ್ತಾ 49 ಪ್ರವಾಸಗಳನ್ನು ಯಶಸ್ವಿಯಾಗಿ ಮುಗಿಸಿ 50ನೇ ಪ್ರವಾಸದ ಹೊಸ್ತಿನಲ್ಲಿರುವ ಈ ಬಳಗವು ನಾಳೆ (ಬುಧವಾರ) ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರದಲ್ಲಿ ಸುವರ್ಣ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ಪ್ರಾಚೀನ ದೇವಾಲಯಗಳ ರಕ್ಷಣೆಗಾಗಿ ಶ್ರಮಿಸುತ್ತಿರುವ ಎನ್.ಆರ್.ಕೃಷ್ಣಮೂರ್ತಿ, ಕೆ.ಎಸ್. ವಿಶ್ವನಾಥ, ಟಿ.ವಿ.ನಟರಾಜಪಂಡಿತ್, ಮಹಮದ್ ಕಲೀಂಉಲ್ಲ, ಎಸ್.ಜಿ.ಶಶಿಧರ್ ಅವರಿಗೆ ಸನ್ಮಾನ ಮತ್ತು ಲಕ್ಷ್ಮೀ ನರಸಿಂಹ ಪೀಠಂನ ಪೀಠಾಧ್ಯಕ್ಷರಾದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸ್ವರಸ್ವತಿ ಮಹಾಸ್ವಾಮಿಗಳವರ ದಿವ್ಯ ಅಮೃತ ಹಸ್ತದಿಂದ ಬಳಗದ ಕಾರ್ಯದರ್ಶಿಯಾದ ಕೆಂಗೇರಿ ಚಕ್ರಪಾಣೀಯವರ 'ದೇಗುಲಗಳ ದಾರಿ' ಆರನೇ ಸಂಪುಟ ಮತ್ತು "ಸುವರ್ಣ ಸೌರಭ" ಎಂಬ ಸ್ಮರಣ ಹಂಚಿಕೆಯ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಜಾತಿ ಗಣತಿಗಾಗಿ ಚಳುವಳಿ ನಡೆಸಲು ಎಸ್‌ಡಿಪಿಐ ನಿರ್ಧಾರ

ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಬಳಿಕ ಕರ್ನಾಟಕ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾಹಿತಿ



ಮೈಸೂರು,ಡಿ.12(ಪಿಎಂ)– ಬಿಹಾರ ಮಾದರಿಯಲ್ಲಿ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಜಾತಿ ಗಣತಿಯಾಗಬೇಕೆಂದು ಆಗ್ರಹಿಸಿ ಚಳುವಳಿ ಕೈಗೆತ್ತಿಕೊಳ್ಳಲು ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಲ್ಲದೆ, ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷ ಸಜ್ಜುಗೊಳಿಸಲೂ ಚರ್ಚೆ ನಡೆಸಲಾಗಿದೆ.

ಮೈಸೂರಿನ ನೆಲ್ಸನ್ ಮಂಡೇಲಾ ರಸ್ತೆಯಲ್ಲಿರುವ ಕ್ಯೂ ಸ್ಟಾರ್ ಹೋಟೆಲ್‌ನಲ್ಲಿ ಮಂಗಳವಾರ ಸದರಿ ಸಭೆ ಮುಗಿದ ಬಳಿಕ 'ಮೈಸೂರು ಮಿತ್ರ'ನಿಗೆ ಎಸ್‌ಡಿಪಿಐ ಕರ್ನಾಟಕ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಈ ವಿಷಯ ತಿಳಿಸಿದರು.

ದೇಶದಲ್ಲಿ ಜಾತಿ ಗಣತಿಯಾಗಬೇಕು. ಆ ಮೂಲಕ ಶೋಷಿತ ವರ್ಗಗಳಿಗೆ ನ್ಯಾಯ ದೊರೆಯಬೇಕು. ಈ ನಿಟ್ಟಿನಲ್ಲಿ ಚಳವಳಿ ಕೈಗೆತ್ತಿಕೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಜಾತಿ ಜನಗಣತಿಯಿಂದ ಹಿಂದುಳಿದ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಪೂರಕ ಕಾರ್ಯಕ್ರಮ ರೂಪಿಸಿ, ಅಗತ್ಯ ಅನುದಾನ ಹಂಚಿಕೆ ಮಾಡಲು ಸಹಾಯಕವಾಗಲಿದೆ ಆ ಮೂಲಕ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಯಾವುದೇ ಒಂದು ದೇಶದ ಅಭಿವೃದ್ಧಿಯಾಗಬೇಕೆಂದರೆ ದೇಶದ ಜನತೆ ಅಭಿವೃದ್ಧಿಯಾಗಬೇಕು. ಅಂದರೆ ಜನತೆಯ ತಲಾದಾಯ ಹೆಚ್ಚಳವಾಗಬೇಕು. ಇದರಿಂದ ಜನತೆಯ ಕೊಳ್ಳುವಿಕೆಯ ಶಕ್ತಿ ವೃದ್ಧಿಸಲಿದೆ. ಆಗ ಆರ್ಥಿಕಾಭಿವೃದ್ಧಿ ಸಾಧ್ಯವಾಗಲಿದೆ. ಜಾತಿ ಜನಗಣತಿಯಿಂದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಕಾರ್ಯಯೋಜನೆ ರೂಪಿಸಬಹುದು. ಹಾಗಾಗಿ ಜಾತಿ ಜನಗಣತಿ ಎಲ್ಲಾ ರಾಜ್ಯಗಳಲ್ಲೂ ಆಗಬೇಕೆಂದು ಒತ್ತಾಯಿಸಿ ಚಳುವಳಿ ರೂಪಿಸಬೇಕೆಂಬ ಬಗ್ಗೆ ಇಂದಿನ ಸಭೆಯಲ್ಲಿ ಮುಖ್ಯವಾಗಿ ಚರ್ಚೆಯಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯದಲ್ಲಿನ ಜಾತಿ ಜನಗಣತಿ ಸಂಬಂಧ ಪ್ರತಿಕ್ರಿಯಿಸಿ, ಈ ಕುರಿತಂತೆ ಎಸ್‌ಡಿಪಿಐ ಕರ್ನಾಟಕ ವತಿಯಿಂದ ಕಳೆದ ಎರಡು ತಿಂಗಳಿಂದ ನಿರಂತರವಾಗಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಎಲ್ಲಾ ಜಿಲ್ಲೆಗಳಲ್ಲಿ ಧರಣಿ ಸತ್ಯಾಗ್ರಹ ಮಾಡಲಾಗಿದೆ.

ಜೊತೆಗೆ ಬಿಜೆಪಿಯೇತರ ಶಾಸಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಡಿ.6ರಿಂದ 6 ದಿನಗಳ ಕಾಲ 'ಸಾಮಾಜಿಕ ನ್ಯಾಯಕ್ಕೆ ಚಲೋ ಬೆಳಗಾವಿ– ಅಂಬೇಡ್ಕರ್ ಜಾಥಾ' ಶೀರ್ಷಿಕೆಯಡಿ 10 ಜಿಲ್ಲೆಗಳಲ್ಲಿ ಜಾಥಾ ನಡೆಸಿ, ಆ ಮೂಲಕ ಸುವರ್ಣಸೌಧ ಬಳಿಗೆ ತಲುಪಿ, ಅಲ್ಲಿ ಬೃಹತ್ ಪ್ರತಿಭಟನೆ ಮಾಡಿದ್ದೇವೆ ಎಂದು ತಿಳಿಸಿದರು.

ಜಾತಿ ಜನಗಣತಿ ವರದಿ, ನ್ಯಾಸದಾಶಿವ ಆಯೋಗದ ಒಳಮೀಸಲಾತಿ ವರದಿ ಜಾರಿಯಾಗಬೇಕು ಹಾಗೂ ಕಳೆದ ಬಿಜೆಪಿ ಸರ್ಕಾರ ರದ್ದುಪಡಿಸಿರುವ ಮುಸಲ್ಮಾನ ಸಮುದಾಯದ 2ಬಿ ಮೀಸಲಾತಿಯನ್ನು ಮರು ಸ್ಥಾಪಿಸಿ, ಶೇ.8ರಷ್ಟಕ್ಕೆ ಹೆಚ್ಚಳ ಮಾಡಬೇಕು ಎಂಬ ಮೂರು ಬೇಡಿಕೆಗಳೊಂದಿಗೆ ಈ ಬೃಹತ್ ಹೋರಾಟ ನಡೆಸಿದೆವು. ಪ್ರತಿಭಟನಾ ಸ್ಥಳಕ್ಕೆ ಮುಖ್ಯಮಂತ್ರಿಗಳ ಪರವಾಗಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಬಂದ ಮನವಿ ಸ್ವೀಕರಿಸಿದರು. ಮುಂದೆಯೂ ಈ ಸಂಬಂಧ ಬೇರೆ ಬೇರೆ ಮಾದರಿಯಲ್ಲಿ ಹೋರಾಟ ಕೈಗೆತ್ತಿಕೊಳ್ಳಲಿದ್ದೇವೆ ಎಂದು ವಿವರಿಸಿದರು.

ಎಂಪಿ ಚುನಾವಣೆಗೆ ಪಕ್ಷ ಸಜ್ಜು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಯಾವ್ಯಾವ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಬೇಕೆಂದು ಚರ್ಚೆ ಮಾಡಲಾಗಿದೆ.

ಉಳಿ ದಂತೆ ಪಕ್ಷ ಸಂಘಟನೆ ದೃಷ್ಟಿಯಲ್ಲಿ ಈಗಾಗಲೇ ಜಾರ್ಖಂಡ್‌ನಲ್ಲಿ ಹೊಸದಾಗಿ ಪಕ್ಷದ ರಾಜ್ಯ ಸಮಿತಿ ಪ್ರಾರಂಭ ಮಾಡಲಾಗಿದೆ. ಎಲ್ಲಾ ರಾಜ್ಯಗಳಲ್ಲೂ ಪಕ್ಷ ಸಂಘಟಿಸ ಬೇಕೆಂಬ ವಿಚಾರಗಳು ಚರ್ಚೆಯಾಗಿದೆ ಎಂದು ಅವರು ಮಾಹಿತಿ ನೀಡಿದರು.

ಇಂದು ಮುಂದುವರೆಯಲಿದೆ ಸಭೆ

ಮೈಸೂರಿನಲ್ಲಿ ಇಂದು ಆರಂಭಗೊಂಡಿರುವ ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ, ನಾಳೆಯೂ (ಡಿ.13) ಮುಂದುವರೆಯಲಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಝಿ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ರಾಷ್ಟ್ರೀಯ ಉಪಾಧ್ಯಕ್ಷರಾದ ಬಿ.ಎಂ.ಕಾಂಬ್ಳೆ, ಶರ್ಫುದ್ದೀನ್ ಅಹಮದ್, ಮೊಹಮ್ಮದ್ ಶಾಫಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಇಲ್ಯಾಸ್ ತುಂಬೆ, ಕರ್ನಾಟಕ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಸೇರಿದಂತೆ ವಿವಿಧ ರಾಜ್ಯಗಳ ಅಧ್ಯಕ್ಷರು ಹಾಗೂ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಇಂದು ಸಭೆ ಬಳಿಕ ಬೈಕ್ ರ್‍ಯಾಲಿ ನಡೆಸಲಾಯಿತು. ಫೌಂಟೇನ್ ವೃತ್ತದಿಂದ ಆರಂಭಗೊಂಡ ರ್‍ಯಾಲಿಯು ಫೈವ್‌ಲೈಟ್ ವೃತ್ತ, ಎಫ್‌ಟಿಎಸ್ ವೃತ್ತ ಸೇರಿದಂತೆ ಮೊದಲಾದ ರಸ್ತೆಗಳಲ್ಲಿ ಸಾಗಿ ರಾಜೀವ್‌ನಗರದ ದಸ್ತಗೀರ್ ಫಂಕ್ಷನ್ ಹಾಲ್ ಬಳಿ ಮುಕ್ತಾಯಗೊಂಡಿತು. ಬಳಿಕ ಇದೇ ಫಂಕ್ಷನ್ ಹಾಲ್‌ನಲ್ಲಿ ಪಕ್ಷದ ರಾಷ್ಟ್ರೀಯ ನಾಯಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು.

ಅಕ್ರಮ ಕಲ್ಲು ಗಣಿಗಾರಿಕೆದಾರರಿಂದ ಆರು ಸಾವಿರ ಕೋಟಿ ದಂಡ ಬಾಕಿ ಇದೆ

● ಒಮ್ಮೆ ರಿಯಾಯ್ತಿ ನೀಡಲು ಸದನದಲ್ಲಿ ಪ್ರಸ್ತಾಪ

ಬೆಂಗಳೂರು, ಡಿ. 12(ಕೆಎಂಶಿ)–



ಅಕ್ರಮ ಕಲ್ಲು ಗಣಿಗಾರಿಕೆದಾರರಿಂದ ಆರು ಸಾವಿರ ಕೋಟಿ ರೂ. ದಂಡ ಬಾಕಿ ಉಳಿದಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ನಾರಾಯಣಸ್ವಾಮಿ ಅವರ ಪಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯಾದ್ಯಂತ ಬಹುತೇಕ ಕಲ್ಲು ಗಣಿಗಾರಿಕೆಗಳು ನಿಯಮ ಮೀರಿ ಕಾರ್ಯ ನಿರ್ವಹಿಸುತ್ತಿವೆ ಎಂದರು.

ಗಣಿಗಾರಿಕೆಗೆ ಪಾರದರ್ಶಕ ಕಾನೂನು ತರಲು ಸರ್ಕಾರ ಮುಂದಾಗಿರುವುದಲ್ಲದೆ, ಬೃಹತ್ ಬಾಕಿ ಮೊತ್ತವನ್ನು ವಸೂಲಿ ಮಾಡುವುದಾಗಿಯೂ ತಿಳಿಸಿದರು. ಕಳೆದ ಮೂರು ವರ್ಷದಲ್ಲಿ ಅಧಿಕೃತ ಪರವಾನಗಿ ಇಲ್ಲದೆ ಕಲ್ಲು ಸಾಗಣೆ ಮಾಡಿದ ಆರೋಪದ ಮೇಲೆ 485 ಪ್ರಕರಣಗಳನ್ನು ದಾಖಲಿಸಿದ್ದು, 2060 ಕೋಟಿ ರೂ. ದಂಡ ವಿಧಿಸಲಾಗಿದೆ. ಹಿಂದಿನ ಸರ್ಕಾರಗಳು ಜನರಿಗೆ ಜಲ್ಲಿ ಮತ್ತು ಕಲ್ಲುಗಳು ಅಗತ್ಯ ಇದೆ ಎಂಬ ಕಾರಣಕ್ಕೆ ದಂಡ ವಸೂಲಿಗೆ ಕಠಿಣ ಕ್ರಮ ತೆಗೆದುಕೊಂಡಿರಲಿಲ್ಲ.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿಯವರೂ ಸಹ ಜನರ ಅವಶ್ಯಕತೆಗೆ ತಕ್ಕಂತೆ ಕಲ್ಲು ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಿದ್ದರು. ಆದರೆ, ಕಾಂಗ್ರೆಸ್ ಸರ್ಕಾರ ಇಂತಹ ಬಾಕಿ ಹಣ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವ ಸಂಬಂಧ ಈವರೆಗೆ ಎರಡು ಬಾರಿ ಕ್ಯಾಬಿನೆಟ್ ಉಪಸಮಿತಿ ಸಭೆ ನಡೆಸಿ ಚರ್ಚಿಸಿದೆ.

ಅಕ್ರಮ ಕಲ್ಲುಗಣಿಗಾರಿಕೆ ನಡೆಸುತ್ತಿರುವವರಿಗೆ ಒಂದು ಬಾರಿಗೆ ಅನ್ವಯವಾಗುವಂತೆ ರಿಯಾಯಿತಿ ನೀಡುವ ಬಗ್ಗೆ ಸದನದಲ್ಲೇ ಚರ್ಚಿಸಲಾಗಿದೆ. ಪರವಾನಗಿ ಪಡೆದ ಕ್ವಾರಿ ಜಾಗದಲ್ಲಿ ಗಣಿಗಾರಿಕೆ ನಡೆಸಿದರೆ 1:1 ರ ಅನುಪಾತ ಹಾಗೂ ಪರವಾನಗಿ ಪ್ರದೇಶ ಮೀರಿ ಒತ್ತುವರಿ ಜಾಗದಲ್ಲಿ ಗಣಿಗಾರಿಕೆ ನಡೆಸಿದ್ದರೆ 1:2ರ ಅನುಪಾತದಲ್ಲಿ ದಂಡ ವಿಧಿಸುವ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆದರೆ, ಈವರೆಗೆ ದಂಡ ವಸೂಲಿಯಾಗಿಲ್ಲ. ಮುಂದಿನ ತಿಂಗಳು ಮತ್ತೊಂದು ಸಭೆ ನಡೆಸಿ ದಂಡ ವಸೂಲಾತಿ ಹಾಗೂ ಗಣಿಗಾರಿಕೆಗಳನ್ನು ಕಾನೂನು ಪಾರದರ್ಶಕತೆಯ ಅಡಿಯಲ್ಲಿ ತರಲು ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.



ಮೈಸೂರು ನಗರದ ಅನಂತಗೀತ ವಿದ್ಯಾಲಯದಲ್ಲಿ ರೋಟರಿ ಕ್ಲಬ್ ಮಿಡ್ ಟೌನ್ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಕಣ್ಣಿನ ಪರೀಕ್ಷೆಗೊಳಗಾದವರಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀನಿವಾಸ್, ನಿರ್ದೇಶಕ ಮೋಹನ್ ಗುರುಮೂರ್ತಿ, ಪದಾಧಿಕಾರಿಗಳಾದ ಸುನೀಲ್, ಸತ್ಯೇಂದ್ರ ಹಾಗೂ ಅನಂತಗೀತ ವಿದ್ಯಾಲಯದ ಕಾರ್ಯದರ್ಶಿ ಗೀತಾ ಅನಂತ ರಾಮಯ್ಯ, ನಿರ್ದೇಶಕ ಮಂಜುಳಾ ಕಲ್ಲೂರು, ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲ ಹರದೂರುಲೋಕೇಶ್ ಮತ್ತು ಪೋಷಕರು ಹಾಜರಿದ್ದರು.

ಸುತ್ತೂರು ಜೆಎಸ್‌ಎಸ್ ವಿದ್ಯಾರ್ಥಿ ರಾಷ್ಟ್ರಮಟ್ಟಕ್ಕೆ ಆಯ್ಕೆ

ಮೈಸೂರು, ಡಿ. 12– ಶಾಲಾ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಲು ಶಿಕ್ಷಣ ಇಲಾಖೆ ನಡೆಸುತ್ತಿರುವ ಕಲೋತ್ಸವ 2023ರ ಆನ್‌ಲೈನ್ ತಬಲ ವಾದನ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಎಂ.ಎಸ್. ಯತೀಶ್ ಕುಮಾರ್ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು, 2024ರ ಜನವರಿ ಮಾಹೆಯಲ್ಲಿ ನವದೆಹಲಿಯಲ್ಲಿ ನಡೆಯುವ ರಾಷ್ಟ್ರಮಟ್ಟ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾನೆ.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಕಲೋತ್ಸವ ಸಮಾರಂಭದಲ್ಲಿ ಶಾಲಾ



ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಗಣ್ಯರು ಎಂ.ಎಸ್. ಯತೀಶ್‌ಕುಮಾರ್‌ನನ್ನು ಅಭಿನಂದಿಸಿ ಸನ್ಮಾನಿಸಿದ್ದಾರೆ. ಪ್ರತಿಭಾನ್ವಿತ ವಿದ್ಯಾರ್ಥಿ ಹಾಗೂ ತಬಲ ವಾದನ ತರಬೇತಿ ನೀಡಿದ ಶಿಕ್ಷಕರಾದ ರಾಜಕುಮಾರ್ ಅವರನ್ನು ಜೆಎಸ್‌ಎಸ್ ಸಂಸ್ಥೆಯ ಆಡಳಿತಾಧಿಕಾರಿಗಳು ಹಾಗೂ ಮುಖ್ಯಸ್ಥರು ಅಭಿನಂದಿಸಿದ್ದಾರೆ.

ಈಜು ಸ್ಪರ್ಧೆ: ಮೊಹಮ್ಮದ್ ಆರ್ಮಾನ್ ಸಮೀರ್ ದಕ್ಷಿಣ ವಲಯ ನ್ಯಾಷನಲ್ಸ್‌ಗೆ ಆಯ್ಕೆ



ಮೈಸೂರು, ಡಿ. 12– ಡಿ. 7 ರಿಂದ 10 ರವರೆಗೆ ಉಡುಪಿಯಲ್ಲಿ ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ ವತಿಯಿಂದ ನಡೆದ XXII ಸ್ಟೇಟ್ ಶಾರ್ಟ್ ಕೋರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಮೊಹಮ್ಮದ್ ಆರ್ಮಾನ್ ಸಮೀರ್ ಅವರು 50 ಮೀಟರ್ ಮತ್ತು 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್ (ಗ್ರೂಪ್–3) ನಲ್ಲಿ 2 ಬೆಳ್ಳಿ ಪದಕಗಳನ್ನು ಗೆದ್ದು, ಡಿ. 27 ರಿಂದ ಬೆಂಗಳೂರಿನಲ್ಲಿ ನಡೆಯುವ ದಕ್ಷಿನ ವಲಯ ನ್ಯಾಷನಲ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಇವರು ಚಾಮುಂಡಿವಿಹಾರ ಸ್ಟೇಡಿಯಂನಲ್ಲಿರುವ ಬಿಎಸ್‌ಆರ್‌ಸಿ ಪೂಲ್‌ನಲ್ಲಿ ಅಭ್ಯಾಸ ಮಾಡುತ್ತಿದ್ದು, ತರಬೇತುದಾರ ವಿ.ಪ್ರಣವ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ. ಕೌಟಿಲ್ಯ ವಿದ್ಯಾಲಯದಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈತ ಉದಯಗಿರಿ ನಿವಾಸಿ ಎಂ.ಎನ್. ಸಮೀರ್ ಅಹಮದ್ ಮತ್ತು ಮಿಸ್‌ಬಾ ಅಮರೀನ್ ಅವರ ಪುತ್ರ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ

ಮೈಸೂರಿನಲ್ಲಿ ಡಿ.20, 21ರಂದು ರಾಷ್ಟ್ರ ಜಾಗೃತಿ ಅಭಿಯಾನದ ಸಮಾರೋಪ ಸಮಾರಂಭ

ಮೈಸೂರು, ಡಿ. 12– ಮೈಸೂರಿನ ಆದರ್ಶ ಸೇವಾ ಸಂಘದ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಮೈಸೂರಿನ ಕಲಾಮಂದಿರದಲ್ಲಿ 20, 21 ರಂದು ರಾಷ್ಟ್ರ ಜಾಗೃತಿ ಅಭಿಯಾನದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿದೆ.

ಡಿ. 20 ರಂದು ಮಧ್ಯಾಹ್ನ 3 ಗಂಟೆಗೆ ಚಂಪಕ ಅಕಾಡೆಮಿಯ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರಿಂದ ನೃತ್ಯ ಕಾರ್ಯಕ್ರಮವಿದೆ. ಶ್ರೀ ಪರಮಾತ್ಮಜೀ ಮಹಾರಾಜ್ ಸಾನ್ನಿಧ್ಯ ವಹಿಸಲಿದ್ದು, ಡಾ. ಪಾವಗಡ ಪ್ರಕಾಶ್‌ರಾವ್ ಕಾರ್ಯಕ್ರಮ ಉದ್ಘಾಟಿಸುವರು. ಸಂಜೆ 4 ರಿಂದ ವಿದುಷಿ ಪ್ರೀತಿ ಕುಮಾರ್ ಮತ್ತು ವಿದುಷಿ ನೀತಿ ಕುಮಾರ್ ಅವರಿಂದ ಭರತನಾಟ್ಯ ಪ್ರದರ್ಶನ, ಸಂಜೆ 6 ರಿಂದ ರಾಜರಾಜೇಶ್ವರಿನಗರದ ನಾಟ್ಯ ಸಂಸ್ಕೃತಿ ಕಲಾನಿಕೇತನ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಡಿ. 21 ರಂದು ಬೆಳಗ್ಗೆ 7.30 ರಿಂದ ಶ್ರೀ ಪರಮಾತ್ಮಜೀ ಮಹಾರಾಜ್ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಗಣಪತಿ ಪೂಜೆ, ಮೈಸೂರಿನ ವೇದಬಳಗದವರಿಂದ ಶ್ರೀ ಅನಂತಜೋಷಿಯವರ ನೇತೃತ್ವದಲ್ಲಿ ವೇದಘೋಷ, ಶ್ರೀ ಸುಬ್ಬರಾವ್ ಮತ್ತು ತಂಡದಿಂದ ಭಜನೆ ಮತ್ತು ದೇವರನಾಮ ನಡೆಯಲಿದೆ.

ಬೆಳಗ್ಗೆ 11 ರಿಂದ ಸಭಾ ಕಾರ್ಯಕ್ರಮ ಮತ್ತು ಸಾಧಕರಿಗೆ ಸನ್ಮಾನ ನಡೆಯಲಿದೆ. ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅಧ್ಯಕ್ಷತೆ ವಹಿಸುವರು. ತುಮಕೂರು ರಾಮಕೃಷ್ಣ ಆಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿ ಅವರಿಂದ ದಿಕ್ಸೂಚಿ ಭಾಷಣ, ವಯೋಲಿನ್ ವಾದಕ ಡಾ. ಮೈಸೂರು ಮಂಜುನಾಥ್ ಅವರಿಂದ 25 ಗೀತೆಗಳ ಧ್ವನಿ ಸುರುಳಿ ಮತ್ತು ಸಾಹಿತ್ಯ ಬಿಡುಗಡೆ ಮಾಡಲಿದ್ದು, ಖ್ಯಾತ ಮಕ್ಕಳ ಹೃದಯ ತಜ್ಞ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಉಪಸ್ಥಿತರಿರುವರು. ರಾಷ್ಟ್ರ ಜಾಗೃತಿ ಅಭಿಯಾನ ಸ್ವಾಗತ ಸಮಿತಿ ಗೌರವ ಅಧ್ಯಕ್ಷ ಎಂ. ಜಗನ್ನಾಥ್ ಶೆಣೈ ಸ್ವಾಗತ ಭಾಷಣ ಮಾಡುವರು.

ಮ. 1.30ರಿಂದ ಡಾ.ನಾಗಲಕ್ಷ್ಮಿ ನಾಗರಾಜನ್ ಮತ್ತು ವಿದುಷಿ ಎಸ್.ಕೆ.ಆರ್. ಜಿಲಾನಿಭಾಷ ಅವರಿಂದ ಗಾಯನ ಸಮರ್ಪಣೆ, ನೃತ್ಯರೂಪಕ ಸಮರ್ಪಣೆ, ಕೋಲಾಟ ಸಮರ್ಪಣೆ ನಡೆಯಲಿದೆ.

ಸಂಜೆ 5.30ರಿಂದ ಸಮಾರೋಪ ಸಮಾರಂಭ, ಬಹುಮಾನ ವಿತರಣೆ ನಡೆಯಲಿದೆ. ಶ್ರೀ ಪರಮಾತ್ಮಜೀ ಮಹಾರಾಜ್ ಸ್ವಾಮೀಜಿ ಅವರು ಆಶೀರ್ವಚನ ನೀಡು ವರು. ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ, ಡಾ. ಶೆಳ್ವಪಿಳ್ಳೈ ಅಯ್ಯಂಗಾರ್ ಉಪಸ್ಥಿತರಿರುವರು.

ಕ್ಷುಲ್ಲಕ ವಿಚಾರಕ್ಕೆ ತಾಯಿಯನ್ನೇ ಕೊಂದ ಮಗಳು!

● ಶವ ಹೂತು ಸುಮ್ಮನಾದರು; ಸಂಬಂಧಿಗಳ ಒತ್ತಡಕ್ಕೆ ಮಣಿದು ಆರೇಳು ತಿಂಗಳ ನಂತರ 'ನಾಪತ್ತೆ' ದೂರು ನೀಡಿ ಸಿಕ್ಕಿಬಿದ್ದಳು!! ● ಈಗ ಪತಿಯೊಂದಿಗೆ ಜೈಲು ಸೇರಿದ ಪುತ್ರಿ; ಇಬ್ಬರು ಮಕ್ಕಳಿಗೆ ಸಂಬಂಧಿಗಳೇ ಆಸರೆ



ಹತ್ಯೆಗೀಡಾದ ಶಾರದಮ್ಮ



ಆರೋಪಿ ಅನುಷಾ



ಆರೋಪಿ ದೇವರಾಜ್

ಮೈಸೂರು, ಡಿ.12(ಆರ್‌ಕೆ)– ಕ್ಷುಲ್ಲಕ ಜಗಳದಲ್ಲಿ ತಳ್ಳಿದ್ದರಿಂದ ಮೃತಪಟ್ಟ ತಾಯಿಯ ಶವವನ್ನು ಹೂತು, ನಂತರ ತಡವಾಗಿ ನಾಪತ್ತೆ ದೂರು ದಾಖಲಿಸಿದ್ದ ಮಹಿಳೆ ಹಾಗೂ ಆಕೆಯ ಪತಿಯನ್ನು ಮೈಸೂರಿನ ವರುಣಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವರ್ಷದ ಹಿಂದೆ ಮಂಡ್ಯದಲ್ಲಿ ನಡೆದಿದ್ದ ಈ ಕೃತ್ಯವನ್ನು ಭೇದಿಸುವಲ್ಲಿ ವರುಣಾ ಠಾಣೆ ಇನ್ಸ್‌ಪೆಕ್ಟರ್ ಚೇತನ್ ಹಾಗೂ ತಂಡ ಯಶಸ್ವಿಯಾಗಿದೆ. ತಾಯಿ ಸತ್ತು ಆರೇಳು ತಿಂಗಳ ಬಳಿಕ ಆಕೆ ನಾಪತ್ತೆಯಾಗಿದ್ದಾಳೆಂದು ದೂರು ದಾಖಲಿಸಿದ್ದರ ಹಿಂದಿನ ರಹಸ್ಯವನ್ನು ಪತ್ತೆ ಹಚ್ಚಿ ಆರೋಪಿಗಳನ್ನು ಜೈಲಿಗಟ್ಟಿದ್ದಾರೆ. ಈ ದಂಪತಿಯ 4 ವರ್ಷ ಹಾಗೂ ಎರಡೂವರೆ ವರ್ಷದ ಕಂದಮ್ಮಗಳು ಸಂಬಂಧಿಕರ ಆಸರೆಯಲ್ಲಿವೆ.

ಮಂಡ್ಯ ಜಿಲ್ಲೆ ಹೆಬ್ಬಾಕವಾಡಿ ಗ್ರಾಮದ ನಿವಾಸಿ ಶಾರದಮ್ಮ ಮಗಳಿಂದಲೇ ಹತ್ಯೆಯಾದ ದುರ್ದೈವಿಯಾಗಿದ್ದು, ಈ ಪ್ರಕರಣದಲ್ಲಿ ಶಾರದಮ್ಮ ಪುತ್ರಿ ಅನುಷಾ ಮತ್ತು ಆಕೆಯ ಗಂಡ ದೇವರಾಜ್‌ನನ್ನು ಸೋಮವಾರ ಬಂಧಿಸಲಾಗಿದೆ.

ಪ್ರಕರಣದ ವಿವರ: ಮಂಡ್ಯ ಜಿಲ್ಲೆ ಹೆಬ್ಬಾಕವಾಡಿ ಗ್ರಾಮದ ಶಾರದಮ್ಮ ಪತಿಯ ನಿಧನದ ನಂತರ ಒಂಟಿಯಾಗಿ ಗ್ರಾಮದಲ್ಲೇ ವಾಸವಾಗಿದ್ದರು. ಪುತ್ರಿ ಅನುಷಾಳನ್ನು ಮೈಸೂರು ಜಿಲ್ಲೆ ವರುಣಾ ಸಮೀಪದ ಹಾರೋಹಳ್ಳಿಯ ದೇವರಾಜ್‌ನೊಂದಿಗೆ ವಿವಾಹ ಮಾಡಿದ್ದರು. ಈ ನಡುವೆ ಶಾರದಮ್ಮ ಅವರಿಗೆ ಕಣ್ಣಿನ ತೊಂದರೆ ಕಾಣಿಸಿಕೊಂಡಿತ್ತು. ಒಂಟಿಯಾಗಿದ್ದ ಕಾರಣ ಚಿಕಿತ್ಸೆ ಕೊಡಿಸುವಂತೆ ಪುತ್ರಿ ಅನುಷಾಳನ್ನು ಕೇಳಿಕೊಂಡಿದ್ದರು. ಆದರೆ ಹಣಕಾಸಿನ ತೊಂದರೆಯಿಂದಾಗಿ ಚಿಕಿತ್ಸೆ ವಿಳಂಬವಾಗಿತ್ತು. ಇದರಿಂದ ಶಾರದಮ್ಮ ಮಗಳ ಮೇಲೆ ಬೇಸರ ಮಾಡಿಕೊಂಡಿದ್ದರು.

ಕೊನೆಗೆ 2022ರ ನವೆಂಬರ್‌ನಲ್ಲಿ ಅನುಷಾ, ತಾಯಿ ಶಾರದಮ್ಮ ಅವರನ್ನು ಗಂಡನ ಮನೆಗೆ ಕರೆತಂದು ಮೈಸೂರಿನಲ್ಲಿ ಚಿಕಿತ್ಸೆ ಕೊಡಿಸಿದ್ದರು. ನಂತರ ಅವರನ್ನು ಹೆಬ್ಬಾಕವಾಡಿ ಗ್ರಾಮಕ್ಕೆ ಬಿಟ್ಟು ಬರಲು ದಂಪತಿ ಹೋಗಿದ್ದರು. ಆ ಸಂದರ್ಭದಲ್ಲಿ ಶಾರದಮ್ಮ, ಕಣ್ಣಿನ ಚಿಕಿತ್ಸೆ ಕೊಡಿಸಲು ನೀನು ಸುಮ್ಮನೆ ತಡಮಾಡಿದೆ ಎಂದು ಹೇಳಿದ್ದಾರೆ. ಇದರಿಂದ ತಾಯಿ–ಮಗಳಿಗೆ ಮಾತಿಗೆ ಮಾತು ಬೆಳೆದಿದೆ.

ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಜಗಳ ವಿಕೋಪಕ್ಕೆ ತಿರುಗಿದೆ. ಈ ವೇಳೆ ಅನುಷಾ ತನ್ನ ತಾಯಿಯನ್ನು ಜೋರಾಗಿ ತಳ್ಳಿದ್ದಾಳೆ. ಇದರಿಂದ ನಿಯಂತ್ರಣ ಕಳೆದುಕೊಂಡ ಶಾರದಮ್ಮ ಕೆಳಗೆ ಬಿದ್ದಾಗ ಮಂಚಕ್ಕೆ ಆಕೆಯ ತಲೆ ಬಡಿದಿದೆ. ಬಿದ್ದ ರಭಸಕ್ಕೆ ಶಾರದಮ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಕಸ್ಮಿಕವಾಗಿ ನಡೆದ ದುರ್ಘಟನೆಯಿಂದ ವಿಚಲಿತರಾದ ದಂಪತಿ, ತಡರಾತ್ರಿ ಶಾರದಮ್ಮ ಅವರ ಶವವನ್ನು ಗ್ರಾಮದ ಸ್ಮಶಾನಕ್ಕೆ ಸಾಗಿಸಿ, ಹೂತು ಹಾಕಿದ್ದಾರೆ. ನಂತರ ಯಾರಿಗೂ ತಿಳಿಯದಂತೆ ವರುಣಾ ಸಮೀಪದ ಹಾರೋಹಳ್ಳಿಗೆ ಬಂದು ಎಂದಿನಂತಿದ್ದಾರೆ.

ಸಂಬಂಧಿಕರು ಅನುಷಾ ಬಳಿ ತಾಯಿಯ ಬಗ್ಗೆ ವಿಚಾರಿಸಿದಾಗಲೆಲ್ಲಾ ಆ ಊರಿಗೆ ಹೋಗಿದ್ದಾರೆ, ಈ ಊರಿಗೆ ಹೋಗಿದ್ದಾರೆಂದು ಸುಳ್ಳು ಹೇಳಿ ಕಾಲ ತಳ್ಳುತ್ತಿದ್ದಳು. ಆದರೆ ಆರೇಳು ತಿಂಗಳಾದರೂ ಶಾರದಮ್ಮ ಕಾಣಿಸದಿರುವುದರಿಂದ ಸೋದರ ಸಂಬಂಧಿಗಳು ಪೊಲೀಸ್ ಠಾಣೆಗೆ ದೂರು ನೀಡುವಂತೆ ತಿಳಿಸಿದ್ದರು. ಶಾರದಮ್ಮ ಸೋದರಿ ದೇವಮ್ಮ ಹಾಗೂ ಅವರ ಮಗಳು ಅನುಷಾಗೆ ಕರೆಮಾಡಿ, ದೂರು ನೀಡದಿದ್ದರೆ ನಾವೇ ಆ ಕೆಲಸ ಮಾಡುತ್ತೇವೆ ಎಂದಿದ್ದರು. ಇದರಿಂದ ಹೆದರಿದ ಅನುಷಾ, ಕಳೆದ ಜೂನ್‌ನಲ್ಲಿ ವರುಣಾ ಠಾಣೆಗೆ ತೆರಳಿ ಕಣ್ಣಿನ ಚಿಕಿತ್ಸೆಗೆ ಬಂದಿದ್ದ ತಾಯಿ ನಾಪತ್ತೆಯಾಗಿರುವುದಾಗಿ ದೂರು ನೀಡಿದ್ದಳು ಎಂದು ಇನ್ಸ್‌ಪೆಕ್ಟರ್ ಚೇತನ್ ತಿಳಿಸಿದ್ದಾರೆ.

ಅನುಷಾ ದೂರಿನನ್ವಯ ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ವರುಣಾ ಠಾಣೆ ಪೊಲೀಸರು, ಈ ಸಂಬಂಧ ತನಿಖೆ ಕೈಗೊಂಡಿದ್ದರು. ಆದರೆ ಅನುಷಾಳ ವರ್ತನೆ ಮೇಲೆ ಅನುಮಾನವಿತ್ತು. ಅಲ್ಲದೆ ಸಂಬಂಧಿಕರೂ ಕೂಡ ಆಕೆಯ ಮೇಲೆ ಗುಮಾನಿ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಚೇತನ್, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಅನುಷಾಳನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಶಾರದಮ್ಮ ಮಗಳಿಂದಲೇ ಹತ್ಯೆಯಾಗಿರುವುದು ಬೆಳಕಿಗೆ ಬಂದಿದೆ. ಆರೋಪಿಗಳ ವಿರುದ್ಧ ಸೆಕ್ಷನ್ 304(ಉದ್ದೇಶಪೂರ್ವಕವಲ್ಲದ ಮಾನವ ಹತ್ಯೆ)ರ ಅಡಿಯಲ್ಲಿ ಪ್ರಕರಣ ದಾಖಲಿಸಿ, ಇಬ್ಬರನ್ನೂ ಬಂಧಿಸಲಾಗಿದೆ. ಹೆಬ್ಬಾಕವಾಡಿಯಲ್ಲಿ ಘಟನೆ ನಡೆದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಮಂಡ್ಯ ಜಿಲ್ಲೆಗೆ ವರ್ಗಾಯಿಸಲಾಗಿದ್ದು, ಅಲ್ಲಿಂದ ಸ್ಥಳೀಯ ಠಾಣೆಗೆ ವರ್ಗಾಯಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿದುಬಂದಿದೆ.

ಕಮಲೇಶ್‌ಚಂದ್ರ ಸಮಿತಿ ಶಿಫಾರಸ್ಸು ಜಾರಿಗೆ ಆಗ್ರಹಿಸಿ

ಗ್ರಾಮೀಣ ಅಂಚೆ ಸೇವಕರ ಪ್ರತಿಭಟನೆ ಆರಂಭ

ನಂಜನಗೂಡು, ಡಿ.12– ಕಮಲೇಶ್ ಚಂದ್ರ ಸಮಿತಿ ಶಿಫಾರಸ್ಸನ್ನು ಜಾರಿಗೊಳಿಸಿ ಗ್ರಾಮೀಣ ಅಂಚೆ ಸೇವಕರನ್ನು ಕಾಯಂಗೊಳಿಸಿ, ಎಲ್ಲಾ ಸೌಲಭ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿ ಗ್ರಾಮೀಣ ಅಂಚೆ ಸೇವಕರು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ.



ನಗರದ ಪ್ರಧಾನ ಅಂಚೆ ಕಚೇರಿಯ ಮುಂಭಾಗ ಜಮಾಯಿಸಿದ ಗ್ರಾಮೀಣ ಅಂಚೆ ಸೇವಕರು ಕಮಲೇಶ್ ಚಂದ್ರ ವರದಿಯನ್ನು ಅನುಷ್ಠಾನಗೊಳಿಸಿ ಸೌಲಭ್ಯ ಕಲ್ಪಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮೀಣ ಅಂಚೆ ಸೇವಕರ ಸಂಘದ ಅಧ್ಯಕ್ಷ ಬಿ.ಸುಬ್ಬಣ್ಣ ಮಾತನಾಡಿ, ಗ್ರಾಮೀಣ ಅಂಚೆ ಸೇವಕರನ್ನು ಅಂಚೆ ನೌಕರರೆಂದು ಪರಿಗಣಿಸಿ ಅಂಚೆ ನೌಕರರಿಗೆ ನೀಡಲಾಗುವ ಸೌಲಭ್ಯವನ್ನು ಕಲ್ಪಿಸುವಂತೆ ಒತ್ತಾಯಿಸಿ 2016 ರಿಂದಲೂ ಜಿಡಿಎಸ್ ನೌಕರರು ಪ್ರತಿಭಟನೆ ನಡೆಸುತ್ತಾ ಬಂದಿದ್ದರೂ ಸಹ ಕೇಂದ್ರ ಸರ್ಕಾರ ಗ್ರಾಮೀಣ ಅಂಚೆ ಪಾಲಕರಿಗೆ ಸೌಲಭ್ಯ ಕಲ್ಪಿಸಲು ವಿಫಲವಾಗಿದೆ. ಇದರಿಂದ ಗ್ರಾಮೀಣ ಅಂಚೆ ಪಾಲಕರು ವೈದ್ಯಕೀಯ ಸೌಲಭ್ಯವಿಲ್ಲದೆ, ಪಿಂಚಣಿ ಸೌಲಭ್ಯ ವಿಲ್ಲದೆ ಸೇವೆ ಮಾಡಿ ನಿವೃತ್ತಿ ನಂತರ ಅವರು ಜೀವಿಸುವುದು ಸಹ ಕಷ್ಟಕರವಾಗಿದೆ. ಆದ್ದರಿಂದ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಗ್ರಾಮೀಣ ಅಂಚೆ ಕಚೇರಿಗಳನ್ನು ಬಂದ್ ಮಾಡಿ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ಮುಂದಾಗಿದ್ದೇವೆ. ನಮ್ಮ ಬೇಡಿಕೆ ಈಡೇರುವವರೆಗೂ ಸಹ ಯಾವುದೇ ಒತ್ತಡಕ್ಕೆ ಮಣಿದು ಪ್ರತಿಭಟನೆ ಹಿಂಪಡೆಯುವ ಪ್ರಶ್ನೆಯೇ ಇಲ್ಲ ಎಂದರು.

ಈ ಕೂಡಲೇ ಸರ್ಕಾರ ಕಮಲೇಶ್ ಚಂದ್ರ ವರದಿ ಅನುಷ್ಠಾನಗೊಳಿಸಿ ಕಾಯಂಗೊಳಿಸಬೇಕು, 12, 24, 36 ವರ್ಷಗಳ ಸೇವಾ ಹಿರಿತನದ ಆಧಾರದ ಮೇಲೆ ಗ್ರಾಮೀಣ ಅಂಚೆ ನೌಕರರಿಗೆ ವಿಶೇಷ ಭತ್ಯೆ ನೀಡಬೇಕು, ಗ್ರಾಚ್ಯುಯಿಟಿ ಮೇಲಿನ ಗರಿಷ್ಠ ಮೊತ್ತ 1.5 ಲಕ್ಷಗಳ ಮಿತಿ ತೆಗೆದು ಹಾಕಿ 5 ಲಕ್ಷಗಳವರೆಗೆ ಮೊತ್ತವನ್ನು ನೀಡಬೇಕು, ಜಿಡಿಎಸ್ ನೌಕರರಿಗೆ ಮತ್ತು ಕುಟುಂಬದವರಿಗೆ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಅಲ್ಲದೆ 30 ದಿನಗಳ ವೇತನ ಸಹಿತ ರಜೆ ನೀಡಬೇಕು, 7ನೇ ವೇತನ ಆಯೋಗದ ವರದಿಯಂತೆ 180 ದಿನಗಳ ರಜೆಯನ್ನು ಉಳಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ನಿವೃತ್ತ ಅಂಚೆ ಪಾಲಕ ಜಿ.ಶಿವಣ್ಣ ಮಾತನಾಡಿ, ಜಿಡಿಎಸ್ ನೌಕರರು ನಿವೃತ್ತಿಯಾದ ನಂತರ ಇಳಿ ವಯಸ್ಸಿನಲ್ಲೂ ಜೀವನೋಪಾಯಕ್ಕಾಗಿ ಕೂಲಿ ಮಾಡುವುದು ಹೋಟೆಲ್‌ಗಳಲ್ಲಿ ತಟ್ಟೆ ಲೋಟ ತೊಳೆಯುವಂತಹ ವೃತ್ತಿ ನಂಬಿ ಜೀವನ ಸಾಗಿಸುವಂತಾಗಿದೆ. ಆದ್ದರಿಂದ ಸರ್ಕಾರ ಜಿಡಿಎಸ್ ನೌಕರರನ್ನು ಕಾಯಂಗೊಳಿಸಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೇಬ್ಲಿ ರೇವಣ್ಣಸಿದ್ದಪ್ಪ, ಚಿಕ್ಕಲಿಂಗಪ್ಪ ಪ್ರಕಾಶ್, ಚಿಕ್ಕಸ್ವಾಮಿ, ಮಹೇಶ್, ಮಾದೇಶ್, ಸೌಮ್ಯ, ಭೂಮಿಕಾ, ಜ್ಯೋತಿ, ಪಲ್ಲವಿ, ದ್ರಾಕ್ಷಾಯಿಣಿ, ರಾಜಮ್ಮ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಪಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರೀಚಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಂಜೂರಿಂಗ್ ಕಣ್ಣಪ್ಪನ್ (ತ)	4 ಪ್ರದರ್ಶನಗಳು
ಸಂಗಂ	
ಮರೀಚಿ (ಕ) –2 ಪ್ರದರ್ಶನಗಳು, ಸಿಂಗಂ (ತ)	2 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜಪಾನ್ (ತ)	4 ಪ್ರದರ್ಶನಗಳು
ಪ್ರಭಾ	
ಪಾಲಿಟಿಕ್ಸ್ ಕಲ್ಯಾಣ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತಡೆಗೋಡೆಗೆ ಬೈಕ್ ಡಿಕ್ಕಿ: ಸವಾರ ಸಾವು

ನಂಜನಗೂಡು, ಡಿ.12– ದ್ವಿಚಕ್ರ ಸವಾರನೋರ್ವ ಸಿಮೆಂಟ್ ತಡೆಗೋಡೆಗೆ ಗುದ್ದಿ ಆಯತಪ್ಪಿ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ಗಾಂಧಿಗ್ರಾಮದ ಬಳಿ ನಡೆದಿದೆ. ತಾಲೂಕಿನ ಹಗಿನವಾಳು ಗ್ರಾಮದ ಆನಂದ್ (21) ಸಾವನ್ನಪ್ಪಿದ ದುರ್ದೈವಿ. ಅಡುಗೆ ಕೆಲಸ ಮಾಡಿಕೊಂಡಿದ್ದ ಆನಂದ್ ಸೋಮವಾರ ಸಂಜೆ ಸ್ನೇಹಿತರ ಜೊತೆ ನಂಜನಗೂಡಿನಲ್ಲಿ ಸ್ನೇಹಿತನ ಜನ್ಮದಿನವನ್ನು ಆಚರಿಸಿ 7 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ತನ್ನ ಸ್ನೇಹಿತನನ್ನು ಹರತಲೆ ಗ್ರಾಮಕ್ಕೆ ಬಿಟ್ಟು ಹುಲ್ಲಹಳ್ಳಿಗೆ ತೆರಳುವ ಮಾರ್ಗದಲ್ಲಿ ಗಾಂಧಿ ಗ್ರಾಮದ ಕಾಲುವೆ ಏರಿಯ ಬಳಿ ತಡೆಗೋಡೆಗೆ ಗುದ್ದಿ ಆಯತಪ್ಪಿ ಬಿದ್ದ ಪರಿಣಾಮ ತಲೆಗೆ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವವಾದ ಹಿನ್ನೆಲೆಯಲ್ಲಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜಯಪ್ರಕಾಶ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು.



ಹೆಚ್.ಡಿ.ಕೋಟೆ ಸಮಾಜ ರಕ್ಷಣಾ ಸೇನೆ ತಾಲೂಕು ಘಟಕದ ಅಧ್ಯಕ್ಷರಾಗಿ ಶಾಂತಿಪುರ ಎನ್.ಟಿ. ಜವರೇಗೌಡ ಆಯ್ಕೆಯಾಗಿದ್ದಾರೆ. ಸಮಾಜ ರಕ್ಷಣಾ ಸೇನೆ ಅಧ್ಯಕ್ಷ ಆನಂದ್ ಕಲ್ಕಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷ ಎನ್. ಟಿ. ಜವರೇಗೌಡ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಪ್ರಧಾನ ಕಾರ್ಯದರ್ಶಿ ಹನುಮಂತ ರಾವ್, ಉಪಾಧ್ಯಕ್ಷ ಮಹೇಶ್, ಸಂಘಟನಾ ಕಾರ್ಯದರ್ಶಿ ನವೀನ್, ಖಜಾಂಚಿ ರಾಮಚಂದ್ರ ಹಾಜರಿದ್ದರು.

ಸರ್ಕಾರದಿಂದ ಆಗದ ಕೆಲಸಕ್ಕೆ ಜನರ ನೆರವು

ಮೂಗೂರು ಬಂಡಿ ಮಂಟಪ ಜೀರ್ಣೋದ್ಧಾರಕ್ಕೆ ಚಾಲನೆ



ಮೂಗೂರು, ಡಿ.12– ಸರ್ಕಾರವನ್ನು ನೆಚ್ಚಿಕೊಂಡರೆ ಏನೂ ಮಾಡಲು ಸಾಧ್ಯವಿಲ್ಲ ಎಂದು ಗ್ರಾಮಸ್ಥರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಬಂಡಿ ಮಂಟಪವನ್ನು ಸ್ಥಳೀಯ ಭಕ್ತರ ನೆರವಿನೊಂದಿಗೆ ಜೀರ್ಣೋದ್ಧಾರಕ್ಕೆ ಮುಂದಾಗಿದ್ದಾರೆ.

ಮೂಗೂರು ಬಂಡಿ ಮಂಟಪ ಎಂದೇ ಕರೆಯಲ್ಪಡುವ ಈ ಕಟ್ಟಡವು ಸುಮಾರು ವರ್ಷಗಳ ಹಳೆಯ ಕಾಲದ ಮಂಟಪವಾಗಿದ್ದು ಮೇಲ್ಛಾವಣಿ ಬಿರುಕು ಬಿಟ್ಟು ಗಿಡಗಂಟಿಗಳು ಬೆಳೆದು ಮಳೆಗಾಲದ ಸಮಯದಲ್ಲಿ ಸೋರುವುದರೊಂದಿಗೆ ಸಂಪೂರ್ಣ ಶಿಥಿಲಗೊಂಡಿತ್ತು. ಬಂಡಿ ಬೀದಿಯ ಮುಖಂಡರು ಹಲವಾರು ಬಾರಿ ಜನಪ್ರತಿನಿಧಿಗಳಿಗೆ ದುರಸ್ತಿಗೊಳಿಸಲು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಹೀಗೇ ಬಿಟ್ಟರೆ ಮಂಟಪ ಕುಸಿದು ಬೀಳುವುದು ಖಚಿತ ಎಂಬುದನ್ನು ಅರಿತ ಸ್ಥಳೀಯ ನಿವಾಸಿಗಳು ಪಾರಂಪರಿಕ ಕಟ್ಟಡವನ್ನು ಉಳಿಸಿ, ಮೂಗೂರು ಬಂಡಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕಳೆ ತರುವ ಶ್ರೀ ತ್ರಿಪುರ ಸುಂದರಿ ಅಮ್ಮನವರ ಬಂಡಿ ಮಂಟಪವನ್ನು ಗ್ರಾಮಸ್ಥರ ನೆರವಿನೊಂದಿಗೆ ಅಭಿವೃದ್ಧಿಪಡಿಸುವ ನಿರ್ಧಾರವನ್ನು ಕೈಗೊಂಡರು.

ಗ್ರಾಮಸ್ಥರು ದೇವರ ಕೆಲಸಕ್ಕೆ ಮುಕ್ತ ಮನಸ್ಸಿನಿಂದ ಸಹಾಯ ಮಾಡುವ ಮೂಲಕ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಲೆ ತಗ್ಗಿಸುವಂತೆ ಮಾಡಿದ್ದಾರೆ.

> ಮುಂಬರುವ ಜನವರಿ ವೇಳೆಗೆ ಗ್ರಾಮದಲ್ಲಿ ಜರುಗಲಿರುವ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರೆಗೂ ಮುನ್ನ ಬಂಡಿ ಮಂಟಪದ ಕಾಮಗಾರಿ ಮುಗಿಸಿ ಸುಣ್ಣ ಬಣ್ಣ ಬಳಿದು ಸಿದ್ಧಗೊಳ್ಳಲಿದೆ
> - ನಂಜುಂಡಸ್ವಾಮಿ, ಗ್ರಾಮದ ಹಿರಿಯ ಮುಖಂಡರು.

ನಂದಿನಿ ಉತ್ಪನ್ನಗಳನ್ನು ಬಳಸಿ, ಮೈಮುಲ್ ಉಳಿಸಿ

ನರಸೀಪುರ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟನೆ



ತಿ.ನರಸೀಪುರ, ಡಿ.12– ನಂದಿನಿ ಹಾಲು ಮತ್ತು ನಂದಿನಿ ಉತ್ಪನ್ನಗಳು ನೈಜ ರುಚಿ ಹಾಗೂ ಪರಿಶುದ್ಧತೆಯಿಂದ ಕೂಡಿದ್ದು, ಸಾರ್ವಜನಿಕರು ನಂದಿನಿ ಉತ್ಪನ್ನಗಳನ್ನೇ ಬಳಸುವ ಮೂಲಕ ರೈತರ ಸಂಸ್ಥೆಯಾದ ಮೈಮುಲ್ ಸಂಸ್ಥೆಯ ಬೆಳವಣಿಗೆಗೆ ಸಹಕಾರಿಯಾಗಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮನವಿ ಮಾಡಿದ್ದಾರೆ.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ತೆರೆಯಲಾಗಿರುವ ನೂತನ ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟಿಸಿ ಅವರು ಮಾತನಾಡಿದರು.

ನಂದಿನಿ ಉತ್ಪನ್ನಗಳು ರಾಜ್ಯದ ಸಾವಿರಾರು ರೈತರ ಹಾಗೂ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಆಸ್ತಿಯಾಗಿದ್ದು, ಉತ್ತಮ ಗುಣಮಟ್ಟದಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನು ಎಲ್ಲರೂ ಖರೀದಿ ಮಾಡುವ ಮೂಲಕ ಮೈಮುಲ್ ಸಂಸ್ಥೆಯನ್ನು ಮತ್ತಷ್ಟು ಬೆಳೆಸಲು ಸಹಕರಿಸಬೇಕೆಂದರು.

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮಾತನಾಡಿ, ಮೈಮುಲ್‌ನಿಂದ ತಯಾರಾಗುವ ನಂದಿನಿ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಹಸುವಿನ ಬೆಣ್ಣೆಯಿಂದಲೇ ಮಾಡಲಾದ ತುಪ್ಪದಿಂದ ತಯಾರಿಸಲಾಗುತ್ತದೆ ಹಾಗಾಗಿ ಸಾರ್ವಜನಿಕರು, ಶಾಲಾ ಮಕ್ಕಳು ಹೆಚ್ಚು ಹೆಚ್ಚು ನಂದಿನಿ ಉತ್ಪನ್ನಗಳನ್ನು ಖರೀದಿ ಮಾಡುವ ಮೂಲಕ ರೈತರಿಗೆ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಜಗನ್ನಾಥ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್. ವಿಜಯಕುಮಾರ್, ಮಾರುಕಟ್ಟೆ ವ್ಯವಸ್ಥಾಪಕ ಜಯಶಂಕರ್, ಮಾರುಕಟ್ಟೆ ಅಧಿಕಾರಿ ಮನೋಜ್ ಕುಮಾರ್, ಕ್ಷೇತ್ರಾಧಿಕಾರಿ ಎಚ್.ಎಂ. ಮನೋಜ್, ಡೈರಿ ಗುರುಮೂರ್ತಿ, ಪಾರ್ಲರ್ ಮಾಲೀಕ ನಟರಾಜು ಹಾಜರಿದ್ದರು.

ಹಾದನೂರಿನಲ್ಲಿ ಶ್ರೀ ಓಂಕಾರ ಸಿದ್ದೇಶ್ವರ ಜಾತ್ರೆ



ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಅನಿಲ್ ಚಿಕ್ಕಮಾದು ಭಕ್ತರನ್ನುದ್ದೇಶಿಸಿ ಮಾತನಾಡಿದರು.

ಸರಗೂರು, ಡಿ.12– ತಾಲೂಕಿನ ಹಾದನೂರು ಗ್ರಾಮದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಶ್ರೀ ಓಂಕಾರ ಸಿದ್ದೇಶ್ವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಪ್ರತಿ ವರ್ಷದಂತೆ ದೇವರ ವಂಶಸ್ಥರು, ಅಕ್ಕಪಕ್ಕ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ಪುನೀತರಾದರು.

ದೇವರಿಗೆ ಗಂಗೆ ಪೂಜೆ ಸಲ್ಲಿಸಿ ವಾದ್ಯಗೋಷ್ಠಿ, ನಗಾರಿ, ವೀರಗಾಸೆ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳ ಮೂಲಕ ದೇವರ ಉತ್ಸವ ಮೂರ್ತಿಯನ್ನು ಬೆಳ್ಳಿರಥದ ಮೂಲಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ದೇವಸ್ಥಾನದಲ್ಲಿ ಹೋಮ–ಹವನದ ಮೂಲಕ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ನಡೆಸಲಾಯಿತು.

ಶಾಸಕ ಅನಿಲ್ ಚಿಕ್ಕಮಾದು ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದ ಬಳಿಕ ಮಾತನಾಡಿ, ದೇವರು ಮತ್ತು ತಮ್ಮಗಳ ಆಶೀರ್ವಾದದಿಂದ ಎರಡನೇ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಇಂತಹ ಪುಣ್ಯಕ್ಷೇತ್ರದಲ್ಲಿ ದೇವರ ಸೇವೆ ಮಾಡುತ್ತಿದ್ದೀರಿ. ಭಗವಂತ ತಮಗೆ ಮತ್ತಷ್ಟು ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಸಮಿತಿಯು ಪ್ರಮುಖವಾಗಿ ಬೇಡಿಕೆಯಾಗಿ ದೇವಸ್ಥಾನದ ಗೋಪುರ ನಿರ್ಮಾಣ ಮತ್ತು ಸಮುದಾಯ ಭವನ ನಿರ್ಮಾಣ ಮಾಡಿಕೊಡುವಂತೆ ಬೇಡಿಕೆ ಇಡಲಾಗಿದೆ. ಗೋಪುರ ನಿರ್ಮಾಣಕ್ಕೆ ತುರ್ತಾಗಿ ಕ್ರಮ ವಹಿಸುತ್ತೇನೆ ಸಮಿತಿಯ ಪದಾಧಿಕಾರಿಗಳು ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಸಮುದಾಯ ಭವನದ ಜಾಗ ಗುರುತಿಸಿ ನಿವೇಶನದ ದಾಖಲಾತಿಗಳನ್ನು ಒದಗಿಸಿದರೆ ಸಮುದಾಯಭವನ ನಿರ್ಮಾಣಕ್ಕೆ ಅಗತ್ಯ ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಶಂಭುಲಿಂಗನಾಯಕ, ಪರಶಿವಮೂರ್ತಿ, ಗ್ರಾಮ ಪಂಚಾಯತಿ ಸದಸ್ಯ ಪ್ರಕಾಶ್, ಶಿವಲಿಂಗಯ್ಯ, ಶಿವಮೂರ್ತಿ, ನಾಗಯ್ಯ, ಕೂಸಣ್ಣ, ಪ್ರಸನ್ನ, ಗಡಿ ಯಜಮಾನರಾದ ರಾಜಣ್ಣ ಲೋಕೇಶ್, ಸಿದ್ದರಾಜು, ಪಾಪಣ್ಣ ಅಶೋಕ್ ಕುಮಾರ್, ಸಿದ್ದರಾಜು, ಒಣಕಾರ, ರಾಜೇಶ್, ರವಿ, ಚಂದ್ರು ಗ್ರಾಮಸ್ಥರು ಹಾಜರಿದ್ದರು.

ಕಲಾಪದಿಂದ ಹೊರಗೆ ಉಳಿದು ವಕೀಲರ ಪ್ರತಿಭಟನೆ



ಹುಣಸೂರು, ಡಿ.12– ವಕೀಲರ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ನಿನ್ನೆಯಿಂದ ನ್ಯಾಯಾಲಯದ ಕಾರ್ಯಕಲಾಪಗಳಿಂದ ಹೊರಗುಳಿದು ಕೋರ್ಟ್ ಆವರಣದಲ್ಲಿ ನಡೆಸುತ್ತಿರುವ ಪ್ರತಿಭಟನೆಯ ಎರಡನೇ ದಿನವಾದ ಇಂದೂ ಮುಂದುವರೆಯಿತು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಯೋಗಣ್ಣೇಗೌಡ ಮಾತನಾಡಿ, ಬೆಳಗಾಂ ಅಧಿವೇಶನದಲ್ಲಿ ನಾವು ವಕೀಲರ ಸಂರಕ್ಷಣೆ ಕಾಯಿದೆ ಜಾರಿಗೆ ತರುತ್ತೇವೆ. ಮುಷ್ಕರ ಮಾಡುತ್ತಿರುವುದನ್ನು ಕೈಬಿಡಿ ಎಂದು ರಾಜ್ಯ ಸಮಿತಿಯವರಿಗೆ ಹೇಳಿದ್ದಾರೆ. ಅದರೆ ಸಂರಕ್ಷಣೆ ಕಾಯಿದೆಯನ್ನು ಜಾರಿಗೆ ತರುವ ತನಕ ನಾವು ಮುಷ್ಕರ ಕೈಬಿಡುವುದಿಲ್ಲ ಎಂದರು. ಇಂದು ಸಂಜೆ ತಹಸಿಲ್ದಾರ್ ಮಂಜುನಾಥ್ ಪ್ರತಿಭಟನಾ ಸ್ಥಳಕ್ಕೆ ಬಂದು ವಕೀಲರಿಂದ ಮನವಿಯನ್ನು ಸ್ವೀಕರಿಸಿ ಇದನ್ನು ಈ ದಿನವೇ ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ ಎಂದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಸುಂದರೇಶ್, ಕಾರ್ಯದರ್ಶಿ ಟಿ.ಶ್ರೀನಿವಾಸ್, ವಕೀಲರುಗಳಾದ ಎಸ್.ಬಿ.ಮೂರ್ತಿ, ಎಂ.ಆರ್. ಹರೀಶ್, ಚನ್ನಬಸಪ್ಪ, ಸುರೇಶ್ ಕುಮಾರ್, ಪುಟ್ಟರಾಜು, ಮಲ್ಲೇಶ್, ಸೋಮಶೇಖರ್, ಗಣೇಶ್, ಶಿವಣ್ಣೆಗೌಡ, ಚಂದ್ರಶೇಖರ್, ಮಹದೇವ್.ಎ, ಕೆ.ರಾಜ, ಲಕ್ಷ್ಮೀಗೌಡ, ರಾಜಶೇಖರಮೂರ್ತಿ, ಪ್ರಕಾಶ್, ನೇತ್ರಾವತಿ, ಉಷಾ, ಪವಿತ್ರಶ್ರೀಧರ್, ಗಿರೀಶ್, ಶ್ವೇತಾ, ಮಾನಸ, ರಜನಿ, ಸುಶ್ರುತ, ರಂಜಿನಿ ಸೇರಿದಂತೆ ಬಹುತೇಕ ವಕೀಲರು ಭಾಗವಹಿಸಿದ್ದರು.

ಮೈಸೂರು ಚಳಿಗಾಲದ ರೇಸುಗಳು

3ನೇ ದಿನ, ಬುಧವಾರ 13–12–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಪಟ್ಟದಕಲ್ಲು ಪ್ಲೇಟ್ ಡಿ2–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಕ್ಯಾಲಿಫೋರ್ನಿಯ ಗೋಲ್ಡ್ 2. ಡಿ ಅಡ್ಮಿರಲ್ 3. ಸ್ವಿಸ್ ಟೈಗರ್

II. ಪಟ್ಟದಕಲ್ಲು ಪ್ಲೇಟ್ ಡಿ1–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕೋಡ್ ಆಫ್ ಹಾನರ್ 2. ನ್ಯಾಚುರಲ್ ಸ್ಪೀಡ್ 3. ಬಚ್ಚೂಸ್

III. ಫೇಮ್ ಅಂಡ್ ಗ್ಲೋರಿ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಮಾರ್ಚ್ ಟು ವಿಕ್ಟರಿ 2. ವಿಂಡಿ ಸಿಟಿ 3. ಕ್ರಿಮ್‌ಸನ್ ಫೈರ್

IV. ಸಹ್ಯಾದ್ರಿ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಜನಿರೋ 2. ಸರ್ವೋತ್ತಮ 3. ಅಗೇನೆಸ್ಟ್ ಆಲ್ ಆಡ್ಸ್

V. ಡಿ.ವಿ. ವಿಶ್ವನಾಥ್ ಮೆಮೋರಿಯಲ್ ಟ್ರೋಫಿ–1100 ಮೀ. 2 ವರ್ಷದ (ಟರ್ಮ್ಸ್). ಮ.4.00ಕ್ಕೆ
1. ಜರ್ಕಾವಿ 2. ರೋಡ್ ರನ್ನರ್ 3. ರೇರ್ ಸಿಲ್ಕ್

VI. ಬಂಡಿಪುರ್ ಪ್ಲೇಟ್– 1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಕುಷಾಕ್ 2. ಬೆಂಗಾಝಿ 3. ವಿವಾ ಲಾ ವಿಡಾ

VII. ಸಂಗಮ್ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಶೀಬಾ 2. ಫ್ಯೂರಿಯಸ್ ಫನ್ 3. ಅಕ್ವಿಲಾ ಡಿ ಓರಾ

ದಿನದ ಅತ್ಯುತ್ತಮ	: ಜರ್ಕಾವಿ
ಡಬ್ಬಲ್	: ಕುಷಾಕ್, ಶೀಬಾ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಕೋಟೆಯಲ್ಲಿ ವಿಕಲ ಚೇತನರಿಗೆ ಯುಡಿ ಐಡಿ ಕಾರ್ಡ್ ವಿತರಣೆ



ಹೆಚ್.ಡಿ.ಕೋಟೆ, ಡಿ.12– ಅಂಗವಿಕಲತೆ ಅನ್ನೋದು ಬೇಕು ಅಂತ ಪಡೆದುಕೊಳ್ಳುವ ರೋಗವಲ್ಲ. ವಂಶ ಪಾರಂಪರ್ಯದಿಂದ ಬರುವಂತಹ ಕಾಯಿಲೆ. ವಿಕಲಚೇತನರು ಯಾರೂ ಸಹ ಧೈರ್ಯ ಕಳೆದುಕೊಳ್ಳಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರ್ ಸ್ವಾಮಿ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳ ಕಚೇರಿ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ನಿಸರ್ಗ ಸಂಸ್ಥೆ, ವಿಕಲಚೇತನರ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ವಿಕಲಚೇತನರಿಗೆ ಯು.ಡಿ.ಐ.ಡಿ ಕಾರ್ಡ್ ವಿತರಣೆ ಮತ್ತು ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಕಲಚೇತನರು ಯಾರೂ ಸಹ ಧೈರ್ಯ ಕಳೆದುಕೊಳ್ಳದೆ, ನಾವೆಲ್ಲರೂ, ಅಂಗವಿಕಲರಲ್ಲ ಎಂಬ ಮನೋಭಾವನೆಯನ್ನ, ಇಟ್ಟುಕೊಂಡು ನೀವೆಲ್ಲರೂ ಉತ್ತಮ ವಿದ್ಯಾಭ್ಯಾಸವನ್ನು ಮಾಡಿ ಮುಖ್ಯವಾಹಿನಿಗೆ ಬರಬೇಕು ಎಂದು ತಿಳಿಸಿದರು.

ತಾಲೂಕಿನಲ್ಲಿ ಹೆಚ್ಚು ಆದಿವಾಸಿಗಳೇ ಇದ್ದು ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು ತಾಲೂಕಿನವರೇ ಆಗಿದ್ದು, ಉತ್ತಮವಾಗಿ ಜನಸೇವೆ ಮಾಡುತ್ತಿದ್ದಾರೆ, ಇನ್ನು ಹೆಚ್ಚಿನ ರೀತಿಯಲ್ಲಿ ಜನಸೇವೆ ಮಾಡುವುದರಲ್ಲಿ ಮುಂದಾಗಿ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳಾದ ಡಾ.ಬೃಂದಾ ತಾಲೂಕು ಆರೋಗ್ಯಾಧಿಕಾರಿ ಡಾ. ಟಿ. ರವಿ ಕುಮಾರ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ನಿಸರ್ಗ ಸಂಸ್ಥೆ ಸಂಸ್ಥಾಪಕ ಪ್ರಭುಸ್ವಾಮಿ, ಮಹದೇವ್, ಸಾರ್ವಜನಿಕ ಆಸ್ಪತ್ರೆ ತಜ್ಞ ವೈದ್ಯರುಗಳಾದ ಡಾ. ಪ್ರಜ್ವಲ್, ಡಾ.ದಿನಕರ್, ಡಾ.ರಾಜಶೇಖರ್, ಡಾ.ಶ್ರೀನಿವಾಸ್ ಮೂರ್ತಿ, ಸಿಬ್ಬಂದಿ ವರ್ಗದವರಾದ ರವಿರಾಜ್, ಹನುಮಂತು, ಗಿರೀಶ್, ನಿಸರ್ಗ ಸಂಸ್ಥೆ ಚಿಕ್ಕ ತಿಮ್ಮ ನಾಯ್ಕ, ವಿಕಲಚೇತನರು, ಇನ್ನಿತರರು ಹಾಜರಿದ್ದರು.

> ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಸುಮಾರು 2500 ಮಂದಿ ವಿಕಲಚೇತನರಿದ್ದು, ಅದರಲ್ಲಿ 2033 ಮಂದಿಗೆ ಯುಡಿಐ ಕಾರ್ಡ್ ನೀಡಲಾಗಿದೆ. ಇಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ಸುಮಾರು 250ಕ್ಕೂ ಹೆಚ್ಚು ಫಲಾನುಭವಿಗಳು ಭಾಗವಹಿಸಿದ್ದು, ಅದರಲ್ಲಿ 104 ಮಂದಿಗೆ ಕಾರ್ಡು ವಿತರಣೆ ಮಾಡಲಾಗಿದೆ. ಉಳಿದ 363 ಮಂದಿಗೆ ದಾಖಲಾತಿ ಸರಿ ಇಲ್ಲದಕಾರಣ ದಾಖಲಾತಿಯನ್ನು ಸರಿಪಡಿಸಿ ಶೀಘ್ರದಲ್ಲೇ ಯುಡಿಐ ಕಾರ್ಡ್ ನೀಡುವ ವ್ಯವಸ್ಥೆ ಮಾಡಲಾಗುತ್ತದೆ.
> -ರವಿಕುಮಾರ್, ತಾಲೂಕು ಆರೋಗ್ಯಾಧಿಕಾರಿ.

ಸೈಯದ್ ಅಹ್ಮದ್ ಷಾ ನಿಧನ



ಹುಣಸೂರು.ಡಿ,12– ತಾಲೂಕಿನ ಎಚ್ಚಿಪಿಸಿ ಕಮಿಟಿಯ ಅಧ್ಯಕ್ಷರಾದ ಸೈಯದ್ ಅಹ್ಮದ್ ಷಾ (63) ಹೃದಯಾಘಾತದಿಂದ ನಿನ್ನೆ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು – ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಹಳೆಯ ಸೇತುವೆ ಹತ್ತಿರವಿರುವ ರುದ್ರಭೂಮಿಯಲ್ಲಿ ನಿನ್ನೆ ಸಂಜೆ ನಡೆಯಿತು.



ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಪ್ರತಿನಿತ್ಯ ಸಮಯಕ್ಕೆ ಸರಿಯಾಗಿ ಕಲಾಪದಲ್ಲಿ ಪಾಲ್ಗೊಳ್ಳುವುದರ ಜೊತೆಗೆ ಅತ್ಯಂತ ಆಸಕ್ತಿಯಿಂದ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಮಯ ಪಾಲನೆ ಮೆರೆದ ಹುಣಸೂರು ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಡಿ. ಹರೀಶ್‌ಗೌಡ ಅವರನ್ನು ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಪುರಸ್ಕಾರ ನೀಡುವುದರೊಂದಿಗೆ ಅಭಿನಂದಿಸಿದರು.

Kumuda Spa

CHRISTMAS OFFER — Karatin Starting from 3999/-


Best price guaranteed in Hair & Salon services.
SPA & Massage packages available in most reasonable price.
10% Discount on all Package
0821-4193567/9632769550

ಹೊಸ ಮನೆ ಮಾರಾಟಕ್ಕಿದೆ

ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ

Call: 9380284276

Sale of Books at 75% Discount



Best Books from the Best Library!

Genuine readers and interested institutions may express their interest in buying books, largely in the area of Business Management, Leadership, Economic, including regular management Textbooks and Guides.

Over 10,000 books to choose from...

You may please contact
The Administrator,
Bharatiya Vidya Bhavan
Vijayanagar 1st Stage, Mysuru-570017
Tel:0821-2412141; 9986002207

ಮೊದಲನೇ ವರ್ಷದ ಸವಿನೆನಪು



ದುಃಖತಪ್ತರು: ಹೆಂಡತಿ ಮಕ್ಕಳು, ಮೊಮ್ಮಕ್ಕಳು, ಅಣ್ಣತಮ್ಮಂದಿರು, ಅಕ್ಕತಂಗಿಯರು, ಅಳಿಯಂದಿರು ಹಾಗೂ ಕುಟುಂಬವರ್ಗದವರು, ತೊಣಚಿಕೊಪ್ಪಲು, ಮೈಸೂರು

ಶ್ರೀ ಸಣ್ಣಯ್ಯ (ಆಂಜೀ)

7ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ H.C. ಜಯಲಕ್ಷ್ಮಿ
ನಿಧನ: 13.12.2016

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತ: ಪತಿ: ಪಿ. ಹೇಮಚಂದ್ರ ಮಕ್ಕಳು: ಅರುಣ್, ಕಿರಣ್, ಆರತಿ ಮತ್ತು ಮೊಮ್ಮಕ್ಕಳು.

ಹಸಿರು ನಮ್ಮ ಉಸಿರು

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈ. ಲಿ.,

"ಸರ್ಕಾರದಿಂದ ಮಾನ್ಯತೆ ಪಡೆದಿದೆ"
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿ ಪ್ರಾರಂಭವಾಗಿದೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
87479 65423

12ನೇ ವರ್ಷದ ಪುಣ್ಯಸ್ಮರಣೆ



ವಿನಯ್‌ಕುಮಾರ್
ನಿಧನ: 13.12.2011

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ತಂದೆ: ಪಿ.ವೆಂಕಟೇಶ್, ಅಕ್ಕಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು ನಂ.20, ಎಂ–20, 2ನೇ ಕ್ರಾಸ್, ಕಾಮಟಗೇರಿ, ಮಂಡಿ ಮೊಹಲ್ಲಾ, ಮೈಸೂರು

WANTED
SALES PROMOTER

A Reputed Paint Company requires the above to work in **Mysuru City & Chamarajanagar**. Interested Candidates Mail your Resume within Seven Days to
surfamysore@surfacoatspaints.com

IMKTA TEACHER TRAINING PROGRAMS INDIA MYSORE

IMKTA Since 2003



20 years of success in PreSchool Teacher Training and Placements

JOIN DIPLOMA MONTESSORI/ PRIMARY TEACHER TRAINING


GET PLACED IN INDIA, DUBAI, QATAR, UAE, SHARJAH, OMAN

- FOR SSLC, PUC OR ANY GRADUATES • REGULAR/ SATURDAY CLASS
- 20 YEARS OF SUCCESS • 30,000+ ALUMNI
- 800+ SCHOOL PARTNERSHIP • 25 BRANCHES IN INDIA

Admission Open
Online course available

Alpha International School
Manandavadi Road, Near Ring Road
Signal Junction, Srirampura, Mysore
7829 937 469
WWW.IMKTA.IN

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಚ್.ಎಂ.ಜವರೇಗೌಡರು
(ನಿವೃತ್ತ ಶಿಕ್ಷಕರು)
ಜನನ : 01-01-1940 ಮರಣ : 13-12-2022

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಶ್ರೀಮತಿ ನಳಿನ ಮತ್ತು ಶ್ರೀ ಜಯಕುಮಾರ್, ಶ್ರೀಮತಿ ಪ್ರತಿಭಾ ಮತ್ತು ಶ್ರೀ ರವಿಶಂಕರ್, ಶ್ರೀಮತಿ ನಳಿನಿ ಮತ್ತು ಹೆಚ್.ಜಿ.ರಾಘವೇಂದ್ರ (ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷರು, ಮೈಸೂರು ಜಿಲ್ಲಾ ಹಾಗೂ ಮಾಜಿ ಗ್ರಾಪಂ ಉಪಾಧ್ಯಕ್ಷರು)
ಮಗಳು ಅಳಿಯಂದಿರಾದ ಶ್ರೀಮತಿ ಮಾಲತಿ ಮತ್ತು ಶ್ರೀ ನಾಗರಾಜು, ಶ್ರೀಮತಿ ಮಂಜುಳ ಮತ್ತು ಶ್ರೀ ನಾಗೇಂದ್ರ ಶ್ರೀಮತಿ ಪದ್ಮಿನಿ ಮತ್ತು ಶ್ರೀ ಜಯರಾಮು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ಹುಯಿಲಾಳು ಗ್ರಾಮಸ್ಥರು

SITE FOR SALE

RING ROAD COMMERCIAL MUDA APPROVED SITE FOR SALE (BROKERS EXCUSE)
9110852436

1) 30x40, 30x50 Near Defence Apartment Kote Road
2) 6,10,20 Guntas Farm Land @KRS backwater.
3) 30x40 Narasipura Road 130x87 Doctor's lyt attach T.Npur Road
4) S/Commercial 40x60 Satagalli
5) 40x70 House Vidyaranya Puram
6) 30x45 N Kuvempu Nagar.

New and Old House
City surrounding, Prakruthi Properties
95386 90359, 90359 90359

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ವೀರಭದ್ರಸ್ವಾಮಿ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು: ಎಸ್. ಪ್ರಕಾಶ್, ಪ್ರಿಯಾದರ್ಶನ್
ಸ್ನೇಹ ಬಳಗ, ಕೃಷ್ಣರಾಜವಿಧಾನಸಭಾ ಕ್ಷೇತ್ರ

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು
ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.
Call: 96111 72148, 94495 61722
Office time 11 am to 6.00 pm on all days

Walk-in Drive: rProcess is Hiring Data Annotators for AI projects Day & Night Shift

Wanted candidates with Good communication and computer skills, Attention to detail, Ability to meet deadlines & self-motivation required qualities.

Walk-in with all Documents: 13th to 15th Dec 2023 (9AM to 2PM)

Walk-in Venue:
rProcess, Gunamba Towers, D Subbaiah Road, Lakshmi Puram, Mysuru. Email: arpana@rprocess.in
Ph.: 99800 07732, 76192 29411; www.rprocess.in

MUDA LIMITS — ಹೆರಿಟೇಜ್ ಹೋಮ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MEGA RESIDENTIAL TOWNSHIP
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಕೇವಲ ₹550/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಅದ್ವಿಕಾ ವೆಂಚರ್ಸ್
9071386615 / 9513301854

COMMERCIAL SPACE FOR RENT

Ground Floor - 1500sq.ft., Ganapathi Temple Main Road, Bogadi 2nd Stage, Opp. to Nirmithi Kendra Bus Stop, Mysore-26. Landmark : Opp. to Indian Bank & Next to Dominos.
Call : 95917 79177

ತಾಲ್ಲೂಕು ಪಂಚಾಯತ್, ಮೈಸೂರು
ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ತಾಲ್ಲೂಕು ಪಂಚಾಯತಿ, ಮೈಸೂರು
ಇಮೇಲ್:mysoretpeo@gmail.com ದೂರವಾಣಿ: 0821-2411349
ಸಂಖ್ಯೆ:ಕಾನಿಅ/ತಾಪಂ/ಮೈ/ಇ–ಪ್ರೊಕ್ಯೂರ್‌ಮೆಂಟ್/01/2023–24 ದಿನಾಂಕ:11.12.2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರು ರವರ ಸಹಯೋಗದೊಂದಿಗೆ, CPWD/KPWD/WRDO/PRED and any other Government Organisation ನಲ್ಲಿ ನೊಂದಾಯಿತರಾಗಿರುವ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ನಮೂನೆ KW-1&2 ಪದ್ಧತಿಯಂತೆ 2023–24ನೇ ಸಾಲಿನ ಲೆಕ್ಕಶೀರ್ಷಿಕೆ ಆದಿಭಾರಶುಲ್ಕ ಯೋಜನೆ ಅನುದಾನದಡಿ ಮೈಸೂರು ತಾಲ್ಲೂಕಿನಲ್ಲಿ 03 ಕಟ್ಟಡ ಕಾಮಗಾರಿಗಳಿಗೂ ಟೆಂಡರ್ ಆಹ್ವಾನಿಸಲಾಗಿದ್ದು, **ಕಾಮಗಾರಿ ಮೊತ್ತವು ರೂ.32.24, 32.00 & 13.89 ಲಕ್ಷಗಳಾಗಿದ್ದು**, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು **ದಿನಾಂಕ: 12.12.2023 ರಿಂದ 22.12.2023 ಸಂಜೆ 16.00 ಘಂಟೆಯವರೆಗೆ** ನಿಗಧಿಪಡಿಸಲಾಗಿದೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ **ದಿನಾಂಕ 20.12.2023ರ 16.00 ಘಂಟೆಯಾಗಿದ್ದು**, ಟೆಂಡರ್ ತೆರೆಯುವ **ದಿನಾಂಕ: 22.12.2023ರ ಸಂಜೆ 16.00 ಘಂಟೆ**. ಟೆಂಡರ್ ಫಾರಂ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಮೈಸೂರು ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯತಿ, ಮೈಸೂರು

DIPR/MYS/KAVITA/746/23-24

ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ
ಬೃಂದಾವನ ಬಡಾವಣೆ, ಕೆ.ಆರ್.ಎಸ್.ರಸ್ತೆ, ಮೈಸೂರು–570020.
ದೂರವಾಣಿ: 0821–2515588 & 2515589 ಇಮೇಲ್:dmshtpkmysuru@gmail.com
ಸಂಖ್ಯೆ:ಹೈಪಆ/33/ಸರಬ/2023–24 ದಿನಾಂಕ:11.12.2023

ಟೆಂಡರ್ ಪ್ರಕಟಣೆ– ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವಿಷಯ:– ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ, ಮೈಸೂರು, ಇಲ್ಲಿನ ಒಳ ಮತ್ತು ಹೊರ ರೋಗಿಗಳ ಉಪಯೋಗಕ್ಕಾಗಿ ಆಯುರ್ವೇದ ಔಷಧಿಗಳನ್ನು ಖರೀದಿಸುವ ಬಗ್ಗೆ ಇ–ಟೆಂಡರ್ ಪ್ರಕಟಣೆ.

ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ, ಮೈಸೂರು, ಇಲ್ಲಿನ ಒಳ ಮತ್ತು ಹೊರ ರೋಗಿಗಳ ಉಪಯೋಗಕ್ಕಾಗಿ ಆಯುರ್ವೇದ ಔಷಧಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ವಿವರಗಳನ್ನು ವೆಬ್ ಸೈಟ್ https://kppp.karnataka.gov.in ಇದರಲ್ಲಿ ನೋಡುವುದು. ಔಷಧಿಗಳನ್ನು ಖರೀದಿಸುವ ಅಂದಾಜು ಮೌಲ್ಯ ರೂ.10.00 ಲಕ್ಷಗಳಾಗಿರುತ್ತದೆ. ಇ.ಎಂ.ಡಿ. ರೂ.25000/–ಗಳನ್ನು ನಿಗದಿಪಡಿಸಿದೆ. ಆಯುರ್ವೇದ ಔಷಧಿಗಳ ಮಾದರಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:21–12–2023 ರಂದು ಸಂಜೆ 5.00 ಗಂಟೆಯೊಳಗೆ**, ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 26–12–2023 ರಂದು ಸಂಜೆ 4.00 ಗಂಟೆ** ಮತ್ತು ಇ–ಟೆಂಡರ್ ತೆರೆಯುವ **ದಿನಾಂಕ:28–12–2023 ರಂದು ಪೂರ್ವಾಹ್ನ 11.00 ಗಂಟೆ** ಆಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಉಪವೈದ್ಯಕೀಯ ಅಧೀಕ್ಷಕರು, ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ ಮೈಸೂರು, ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಉಪವೈದ್ಯಕೀಯ ಅಧೀಕ್ಷಕರು
ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆ, ಮೈಸೂರು

DIPR/MYS/KAVITA/756/23-24

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com
IFT No: KMF/2023-24/IND0476 ದಿನಾಂಕ:07.12.2023

ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮೂಲಕ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದಲ್ಲಿ **New fully automatic aseptic packing** ಯಂತ್ರದ ವಿನ್ಯಾಸದಂತೆ ಟರ್ನ್ ಕೀ ಆಧಾರದ ಮೇಲೆ ಖರೀದಿಸಿ ಸರಬರಾಜು ಮಾಡಿ ಅಳವಡಿಸಿ, ಚಾಲನೆಗೊಳಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಆದ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ದಿನಾಂಕ:25.01.2024, 5.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು(7411654265) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು,
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

MUDA APPROVED SITES FOR SALE

Located at RT Nagar, Mysore
30x50 EAST FACING - 40 Feet Road
30x50 SOUTH FACING - 60 Feet Road
30x50 NORTH - PARK FACING
Rate Rs. 2,999/- Sft
READY TO REGISTER
BANK LOAN UPTO 80 %
Only 4 Sites Available
99000 21807

Estd. 1959 Tel: 2522759, 2421077, 2432938
ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಜಗನ್ಮೋಹನ್ ಪ್ಯಾಲೇಸ್ ರಸ್ತೆ, ಮೈಸೂರು - 570 001.
The Mysore Merchants Co-operative Bank Ltd.,
(Registered as No. 1235/A.R.M.)
JAGANMOHAN PALACE ROAD, MYSORE-570 001.
Ref.No: 939/2023-24 Date 07/12/2023

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಬ್ಯಾಂಕಿನ ವತಿಯಿಂದ ಜಿ.ಗಣೇಶ್ ಬಿನ್ ಎನ್ ಗೋಪಾಲ್ ಇವರ ಮಾಲೀಕತ್ವದ ಹೆಸರಿನಲ್ಲಿರುವ ಈ ಕೆಳಗೆ ಅನುಸೂಚಿಯಲ್ಲಿ ಸಮೂದಿಸಿರುವ ಸ್ವತ್ತಿನ ಮಾಲೀಕತ್ವದ ನೋಂದಾಯಿತ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಬ್ಯಾಂಕಿನ ವಶಕ್ಕೆ ಭದ್ರತೆಯನ್ನಾಗಿ ನೀಡಿ ಮಾರ್ಟಗೇಜ್ ಸಾಲ ಪಡೆಯಲು ಉದ್ದೇಶಿಸಿದ್ದು, ಆದ್ದರಿಂದ ಅನುಸೂಚಿಯಲ್ಲಿ ಕಾಣಿಸಿರುವ ಜಿ.ಗಣೇಶ್ ಬಿನ್ ಎನ್ ಗೋಪಾಲ್ ರವರ ಮಾಲೀಕತ್ವದ ಹೆಸರಿನ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಂದಲಾದರೂ ಯಾವುದೇ ರೀತಿಯ ಮಾಲೀಕತ್ವದ ಹಕ್ಕು ಮತ್ತು ಇತರೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಹಾಗೂ ಅನುಭವ ಇದ್ದಲ್ಲಿ ಅಂತಹವರು ಲಿಖಿತ ರೂಪದಲ್ಲಿ ತಕರಾರನ್ನು ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆ ಪತ್ರ ಪ್ರಕಟವಾದ ಏಳು ದಿನಗಳೊಳಗೆ ಬ್ಯಾಂಕಿನ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರಿರುವುದಿಲ್ಲವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆಗೊಳ್ಳಲಾಗುವುದು.
ಅನುಸೂಚಿ: ಮೈಸೂರು ನಗರ, ಸುಬೇರ್‌ಬಾದ್ ಮೊಹಲ್ಲಾ ಇಟ್ಟಿಗೆಗೂಡು (ಗರಡಿ ಬೀದಿ ಪಕ್ಕದ ಕ್ರಾಸ್) ಹೊಸಬೀದಿ, 1ನೇ ಕ್ರಾಸ್, ಮನೆ ನಂ. 1155, ಎಸ್ ಆ/1 ರ ಮೈಸೂರು ಮಹಾನಗರ ಪಾಲಿಕೆ ಪಿ.ಐ.ಡಿ ನಂ.10515 ಉಳ್ಳ ಮನೆಯಾಗಿದ್ದು, ಸದರಿ ಮನೆಯ ನಿವೇಶನದ ಅಳತೆ ಪೂರ್ವ ಪಶ್ಚಿಮ 22 ಅಡಿಗಳು, ದಕ್ಷಿಣೋತ್ತರ 17.60 ಅಡಿಗಳು ಮತ್ತು ಸದರಿ ಮೇಲ್ಕಂಡ ಸ್ವತ್ತಿಗೆ ಚೌಹದ್ದು: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಸುಬ್ರಮಣ್ಯರವರ ಸ್ವತ್ತು, ಉತ್ತರಕ್ಕೆ :ಖಾಸಗಿ ಸ್ವತ್ತು, ದಕ್ಷಿಣಕ್ಕೆ : ರಸ್ತೆ

Sd/- General Manager
The Mysore Merchants Co-operative Bank Ltd..

ಇಂದಿನಿಂದ ಹೆಬ್ಬಾಳ್‌ನ ಸಿಐಟಿಬಿ CITB ಛತ್ರದಲ್ಲಿ ಮಾರಾಟ
ಬ್ರಾಂಡೆಡ್ ಗಾರ್ಮೆಂಟ್ಸ್ & ಫುಟ್‌ವೇರ್ ಮಾರಾಟ

Upto 80% OFF

ಪುರುಷರ, ಮಹಿಳೆಯರ ಹಾಗೂ ಮಕ್ಕಳ ಬ್ರಾಂಡೆಡ್ ಶೂಸ್ ಮತ್ತು ಗಾರ್ಮೆಂಟ್ಸ್
ಮಾರಾಟ 5 ದಿನಗಳು ಮಾತ್ರ
ಡಿಸೆಂಬರ್ 13, 14, 15, 16 ಮತ್ತು 17, 2023
ಬುಧ, ಗುರು, ಶುಕ್ರ, ಶನಿ ಮತ್ತು ಭಾನುವಾರ

adidas NIKE puma CONVERSE lotto CATERPILLAR dressberry Roadster Reebok Sprandi HRX UNDER ARMOUR aNOUK aurelia

ಸ್ಪೋರ್ಟ್ಸ್ ಶೂಸ್, ಫಾರ್ಮಲ್ ಶೂಸ್, ಜಾಗಿಂಗ್ ಶೂಸ್, ಫ್ಲಿಪ್ ಫ್ಲಾಪ್ ಸ್ಯಾಂಡಲ್ಸ್, ಸ್ಲಿಪರ್ಸ್, ಕ್ಯಾನ್‌ವಾಸ್ ಶೂಸ್, ಲೋಫೇರ್ ಶೂಸ್ ಇನ್ನೂ ಅನೇಕ ಬಗೆಯ ಉತ್ಪನ್ನಗಳು
ಪುರುಷರ ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್ಸ್, ಟೀ–ಶರ್ಟ್ಸ್ ಫಾರ್ಮಲ್ ಶರ್ಟ್ಸ್, ಕ್ಯಾಷುಯಲ್ ಶರ್ಟ್ಸ್, ಜಾಗಿಂಗ್ ಟ್ರ್ಯಾಕ್ ಪ್ಯಾಂಟ್ಸ್
ಮಹಿಳೆಯರ ಕುರ್ತಿಸ್, ಲೇಡೀಸ್ ಟಾಪ್, ಜೀನ್ಸ್ ಪ್ಯಾಂಟ್ಸ್, ಟ್ರ್ಯಾಕ್ ಪ್ಯಾಂಟ್ಸ್ ದೊರೆಯುತ್ತವೆ
ರೂ. 150/– ರಿಂದ 2000/– ವರೆಗೆ
ಸ್ಥಳ : ಸಿಐಟಿಬಿ (CITB) ಛತ್ರ, ಹೆಬ್ಬಾಳ್
ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್
ಹೆಬ್ಬಾಳು 2ನೇ ಹಂತ, ಮೈಸೂರು

IN THE COURT OF THE 1ST ADDITIONAL CIVIL JUDGE (SR.DVN.) AT HASSAN

Ex 298/2012

Decree Holder: Supreme Transport ®, Hassan Represented by its partner: T.V.Sathyanarayana Aged about 57 years, Eshwara temple street, Hassan-573201.
V/s
Judgment Debtors: 1. A.H. Rangegowda S/o late Hanumegowda, Dead by Lrs

PAPER PUBLICATION

To, Judgment Debtors:1(b). Vasantha W/o Vasanth Kumar D/o Late A.H.Rangegowda, Aged about 47 Years Ranganatha swamy Krupa, Opposite Akashavani, 3rd Cross, Bagadera Koppalu, Hassan. Additional addresses: R/a Door No.88, 1st cross, 2nd Main, T.K.Layout, Mysore -9 Also R/a Sri Ranganatha Nilaya, Sathyamangala extn., Vidyanagara, Hassan.
1(c) Jayanthi W/o Devarajegowda D/o Late A.H.Rangegowda, Aged about 45 Years
1(d) Prema D/o Late A.H.Rangegowda Aged about 32 Years 1(b), 1(c) and 1(d) are also residing at Ankapura Village, Kattaya Hobli, Hassan Taluk
2. A.R.Rangaswamy S/o A.H.Rangegowda Major, Proprietor, M/s Pavitra Transport PLD Bank building, B.M.Road, Hassan

Whereas the decree holder filed the above execution petition against Judgment Debtors and whereas Judgment Debtors mentioned supra have not appeared before the Hon'ble court inspite of service of notice by both registered post and court notice. Therefore all the said Judgment Debtors No.1(b), 1(c), 1(d) and 2 are hereby directed to appear before the Hon'ble court on 20.01.24 at 11 am to contest the above execution petition. If you fail to appear on the said day, the said execution petition will be disposed of in your absence.
Given under my hand and seal of the court on 4th day of December 2023.

N.S.Gopal, B.A.LLB., Advocate for Decree Holder, Sri Banashankari Law Chambers, Slaters memorial Hall road, Hassan

ಸಹಿ/– ಶಿರಸ್ತೇದಾರರು(ಆ), ಸಿವಿಲ್ ಜಡ್ಜ್ (ಸೀನಿಯರ್ ಡಿವಿಷನ್), ಸಿಜೆಎಂ ಕೋರ್ಟ್, ಹಾಸನ

(ಕರ್ನಾಟಕ ಸರ್ಕಾರ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2023–24 ದಿನಾಂಕ:11.12.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಆಲೂರು, ಅರಕಲಗೂಡು, ಬೇಲೂರು, ಹಾಸನ, ಹಾಗೂ ಸಕಲೇಶಪುರ ಉಪ ವಿಭಾಗ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ವಿವೇಕ ಯೋಜನೆ, ಕೃಷಿ ಇಲಾಖೆ ಯೋಜನೆ, 2020–21ನೇ ಸಾಲಿನ ಆದರ್ಶ ಗ್ರಾಮ ಯೋಜನೆ, 2021–22ನೇ ಸಾಲಿನ 2515–00–001–0–04 ಯೋಜನೆ, 2022–23ನೇ ಸಾಲಿನ ಸಾಮಾನ್ಯ ಯೋಜನೆ (ಧಾರ್ಮಿಕ ದತ್ತಿ ಇಲಾಖೆ), ಗ್ರಾಮ ಪಂಚಾಯತಿ ಅನುದಾನ(ಡೆಪಾಸಿಟ್), 2022–23ನೇ ಸಾಲಿನ 5054 ಯೋಜನೆ, 2022–23ನೇ ಸಾಲಿನ 4202–01–2021–1–07–200 (ಸಾರ್ವಜನಿಕ ಶಿಕ್ಷಣ ಇಲಾಖೆಯ) ಯೋಜನೆಯಡಿಯ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಕೆ.ಪಿ.ಪಿ.ಪಿ ಅಡಿ kw-1 Kw-2 ರ ರೀತ್ಯಾ ಹಾಗೂ ಹಾಸನ ಜಿಲ್ಲೆಯ ಹಾಸನ ವಿಭಾಗ ಕಛೇರಿಯ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಹಾಗೂ ಆಲೂರು, ಅರಕಲಗೂಡು, ಬೇಲೂರು, ಹಾಸನ ಮತ್ತು ಸಕಲೇಶಪುರ ತಾಲ್ಲೂಕುಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಇಲಾಖಾ ಕೆಲಸ ನಿರ್ವಹಿಸಲು ವಾಹನಗಳ ಅವಶ್ಯಕತೆ ಇದ್ದು, ಅವುಗಳನ್ನು ಒದಗಿಸಲು ಆಸಕ್ತ ಅರ್ಹ ಸರಬರಾಜುದಾರರಿಂದ ಸ್ಪರ್ಧಾತ್ಮಕ ಸೇವಾ ಟೆಂಡರ್‌ಅನ್ನು ಅಂತರ್ಜಾಲದಲ್ಲಿ ದಿ: 12.12.2023 ರಿಂದ ದಿ:21.12.2023ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 21.12.2023 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:20.12.2023 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:22.12.2023 ರಂದು ಸಂಜೆ 4.05 ಗಂಟೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್,
ಪ.ರಾಜ್.ಇಂ.ವಿಭಾಗ, ಹಾಸನ.

ವಾವಾಸಂಇ/ಜಿಸಸ/ಹಾಸನ/554/ಕೆಎಸ್‌ಎಂಎ/559/2023–24